<tr><td>ಈ)</td><td>ಎಷ್ಟು ಪ್ರಕರಣಗಳಲ್ಲಿ ಭೂಸ್ವಾಧೀನಾಧಿಕಾರಿಗಳು ನಿಗಧಿಪಡಿಸಿದ ಅವಾರ್ಡ್ ಮೊತ್ತಕ್ಕಿಂತ ಹೆಚ್ಚಿನ ಪರಿಹಾರವನ್ನು ನಿಗಧಿಪಡಿಸಿ ಸಿವಿಲ್ ನ್ಯಾಯಾಲಯದಲ್ಲಿ ಆದೇಶವಾಗಿದೆ ಮತ್ತು ಎಷ್ಟು ಪ್ರಕರಣಗಳಲ್ಲಿ ಭೂಸ್ವಾಧೀನಾಧಿಕಾರಿಗಳು ಸಿವಿಲ್ ನ್ಯಾಯಾಲಯದ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯಗಳಲ್ಲಿ ಮೇಲ್ಮನವಿಗಳನ್ನು ಸಲ್ಲಿಸಲಾಗಿರುತ್ತದೆ;</td><td>ಪ್ರಾಧಿಕಾರಕ್ಕೆ ವಹಿಸಲಾದ ಎಲ್‌ಎಸಿ ಪ್ರಕರಣಗಳಲ್ಲಿ ಇದುವರೆಗೆ ಆದೇಶವಾಗಿರುವುದಿಲ್ಲ.</td></tr>
</table>

ಉ)	ಮೇಲ್ಮನವಿಗಳನ್ನು ಸಲ್ಲಿಸದಿದ್ದಲ್ಲಿ ಎಷ್ಟು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯದ ಆದೇಶದಂತೆ ಪರಿಹಾರ ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಪ್ರಶ್ನೆ ಉದ್ಭವಿಸುವುದಿಲ್ಲ.
ಊ)	ಕೆಲವೊಂದು ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣಾ ಸಮಯದಲ್ಲಿ ಸರ್ಕಾರಿ ವಕೀಲರು ತಮ್ಮ ಕರ್ತವ್ಯವನ್ನು ಕಾನೂನು ರೀತಿಯಲ್ಲಿ ನಿರ್ವಹಿಸದೇ ಅರ್ಜಿದಾರರೊಂದಿಗೆ ಶಾಮೀಲಾಗಿ ಸಿವಿಲ್ ನ್ಯಾಯಾಲಯದಿಂದ ಹೆಚ್ಚಿನ ಪರಿಹಾರಕ್ಕೆ ಆದೇಶ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಶ್ನೆ ಉದ್ಭವಿಸುವುದಿಲ್ಲ.
ಋ)	ಇಂತಹ ಪ್ರಕರಣಗಳಲ್ಲಿ ಹಾಸನ ಜಿಲ್ಲಾಧಿಕಾರಿಗಳು ಹಾಗೂ ಸರ್ಕಾರಿ ವಕೀಲರುಗಳು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸದೇ ಸರ್ಕಾರದ ಬೊಕ್ಕಸಕ್ಕೆ ಅಪಾರ ಹಾನಿ ಮಾಡಿರುವುದಾಗಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಕಂಇ 06 ಭೂಸ್ವಾಹಾ 2020

(ಆರ್.ಅಶೋಕ್)

ಕಂದಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಪಿಡಿಎಸ್ 19 ಪಿಟಿಪಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:07.03.2020.

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ,
ಬೆಂಗಳೂರು.

1117
10/3/20

ಇವರಿಗೆ:

ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ಪ್ರಶ್ನೆಗಳ ಶಾಖೆ, ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಘುಪತಿ ಭಟ್.ಕೆ (ಉಡುಪಿ)–ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1117ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ(ಪ್ರ), ಕರ್ನಾಟಕ ವಿಧಾನ ಸಭೆ ಸಚಿವಾಲಯರವರ ಪತ್ರ ದಿನಾಂಕ:29.02.2020.

* * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಘುಪತಿ ಭಟ್.ಕೆ (ಉಡುಪಿ)–ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1117ಕ್ಕೆ ಉತ್ತರವನ್ನು ಸಿದ್ಧಪಡಿಸಿ ಈ ಪತ್ರಕ್ಕೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

02.03.2020

(ಚಿಕ್ಕಸುಬ್ಬಯ್ಯ)
ನಿರ್ದೇಶಕರು,
ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪ್ರತಿ ಮಾಹಿತಿಗಾಗಿ:

1) ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಆಪ್ತ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1117
2	ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ. (ಉಡುಪಿ)
3	ಉತ್ತರಿಸುವ ದಿನಾಂಕ	:	10.03.2020
4	ಉತ್ತರಿಸುವ ಸಚಿವರು	:	ಸನ್ಮಾನ್ಯ ಮುಖ್ಯಮಂತ್ರಿಯವರು

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಮೀಸಲಿಟ್ಟ ಅನುದಾನವೆಷ್ಟು; (ವರ್ಷವಾರು ವಿವರಗಳನ್ನು ನೀಡುವುದು.)</td><td>ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಮೀಸಲಿಟ್ಟ ಅನುದಾನದ ವಿವರ:
<table><tr><th>ಆರ್ಥಿಕ ವರ್ಷ</th><th>ಅನುದಾನ (ರೂ.ಲಕ್ಷಗಳಲ್ಲಿ)</th></tr><tr><td>2016-17</td><td>1500.00</td></tr><tr><td>2017-18</td><td>1586.00</td></tr><tr><td>2018-19</td><td>994.00</td></tr><tr><td>2019-20</td><td>995.00</td></tr></table></td></tr>
<tr><td>(ಆ)</td><td>ಕರಾವಳಿ ಅಭಿವೃದ್ಧಿ ಪ್ರಾಧಿಕಾರವು ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದ ವ್ಯಾಪ್ತಿಗೆ ಬರುವ ಪ್ರಾಧಿಕಾರ ಆಗಿದ್ದು ಮುಂದಿನ ಆಯವ್ಯಯದಲ್ಲಿ ಪ್ರಾಧಿಕಾರಕ್ಕೆ ಹೆಚ್ಚು ಹಣ ಮೀಸಲಿಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?</td><td rowspan="2">ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಆಯವ್ಯಯದಲ್ಲಿ ಆರ್ಥಿಕ ಸಂಪನ್ಮೂಲವನ್ನಾಧರಿಸಿ ಅನುದಾನ ನಿಗಧಿ ಪಡಿಸಲು ಕ್ರಮವಹಿಸಲಾಗುವುದು.</td></tr>
<tr><td>(ಇ)</td><td>ಹಾಗಿದ್ದಲ್ಲಿ ಎಷ್ಟು ಹಣ ಮೀಸಲಿಡುವ ಯೋಜನೆ ಸರ್ಕಾರದ ಮುಂದಿದೆ; (ಸಂಕ್ಷಿಪ್ತ ವಿವರಗಳನ್ನು ನೀಡುವುದು.)</td></tr>
<tr><td>(ಈ)</td><td>ಸದರಿ ಪ್ರಾಧಿಕಾರದಿಂದ ಉಡುಪಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2018 ಮತ್ತು 2019ನೇ ಸಾಲನ್ನು ಮೀಸಲಿಟ್ಟ ಹಣವೆಷ್ಟು? (ಸಂಕ್ಷಿಪ್ತ ವಿವರಗಳನ್ನು ನೀಡುವುದು.)</td><td>2018-19ನೇ ಸಾಲಿನಲ್ಲಿ ಕೈಗೊಂಡ ಉಡುಪಿ ವಿಧಾನಸಭಾ ಕ್ಷೇತ್ರಕ್ಕೆ ಮೀಸಲಿಟ್ಟ ಅನುದಾನ ರೂ. 74.00 ಲಕ್ಷ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)</td></tr>
</table>

ಸಂಖ್ಯೆ:ಪಿಡಿಎಸ್–ಪಿಟಿಪಿ/19/2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1117 ರ ಅನುಬಂಧ

(ರೂ.ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ
1	ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನ ಕರ್ಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಲುವಳ್ಳಿ ಗ್ರಾಮದ ಕಂಗಿಬೆಟ್ಟು ಹಳ್ಳಕ್ಕೆ ಕಾಲುಸಂಕ ರಚನೆ	7.00
2	ಉಡುಪಿ ಜಿಲ್ಲೆಯ ಬಡನಿಡಿಯೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಬಡನಿಡಿಯೂರು ಗ್ರಾಮದ ಕದಿಕೆ ಆರ್ಯನ ಹೋಟೇಲ್ ಪಡುಬದಿ ರಮೇಶ್ ಪೂಜಾರಿ ಮನೆ ಬಳಿ ತೋಡಿಗೆ ಕಾಲುಸಂಕ ನಿರ್ಮಾಣ	5.00
3	ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ಕೊಕರ್ಣೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಬ್ರಹ್ಮಾವರ ಕೋಕರ್ಣೆ ಹೊರ್ಲಾಳ ತೆಂಕಬೈಲಿನಲ್ಲಿ ಕಾಲುಸಂಕ ನಿರ್ಮಾಣ	6.00
4	ಉಡುಪಿ ಜಿಲ್ಲೆಯ ಬ್ರಹ್ಮಾವಾರ ತಾಲೂಕಿನ ಹಸೂರು ಜಯರಾಂ ಕಾದ್ದಾರಿ ಮನೆ ಹತ್ತಿರ ಕಾಲುಸಂಕ ನಿರ್ಮಾಣ	6.00
5	ಉಡುಪಿ ಜಿಲ್ಲೆಯ ಉಡುಪಿ ತಾಲೂಕಿನ ಹಾವಂಜೆ ಮುಖ್ಯ ರಸ್ತೆಯಿಂದ ದಾಸಬೆಟ್ಟು ರಸ್ತೆಯ ಪರಿಶಿಷ್ಟ ಪಂಗಡದ ಕಾಲನಿಯ ರಸ್ತೆಗೆ ಡಾಂಬರೀಕರಣ ಕಾಮಗಾರಿ	50.00
	ಒಟ್ಟು	**74.00**

02.03.2020

ನಿರ್ದೇಶಕರು,

ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ,

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ.

ಡಾ॥ ಡಿ.ಎಂ. ನಂಜುಂಡಪ್ಪ ವರದಿ
ಅನುಷ್ಠಾನದ ವಿಶೇಷ ಕೋಶ ವಿಭಾಗ,
ಕೊಠಡಿ ಸಂಖ್ಯೆ 116, ಬಹುಮಹಡಿ
ಕಟ್ಟಡ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ : 080-2203 2470,
2225 7336
ಇಮೇಲ್ : sdp.planning@gmail.com

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ ಪಿಡಿ 4 ಎಸ್‌ಡಿಪಿ 2020

ದಿನಾಂಕ: 07 ಮಾರ್ಚ್ 2020.

62
415
10/03/2020

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ಪ್ರಶ್ನೆಗಳ ಶಾಖೆ, ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:– ಕರ್ನಾಟಕ ವಿಧಾನಸೌಧದ ಸದಸ್ಯರಾದ ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:523ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ:– ಕರ್ನಾಟಕ ವಿಧಾನ ಸೌಧದ ಪ್ರಶ್ನೆ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.523/2020, ದಿನಾಂಕ:28.02.2020.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ ದಿನಾಂಕ:10.03.2020ರಂದು ಕರ್ನಾಟಕ ವಿಧಾನಸಭೆಯಲ್ಲಿ ಬರಲಿರುವ **ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 523**ಕ್ಕೆ ಉತ್ತರವನ್ನು ಸಿದ್ಧಪಡಿಸಿ (ಕನ್ನಡ–100ಪ್ರತಿ) ಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

02.03.2020
(ಚಿಕ್ಕಸುಬ್ಬಯ್ಯ)
ನಿರ್ದೇಶಕರು
ಯೋಜನೆ, ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ.

ಪ್ರತಿಯನ್ನು:

1. ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರ ಆಪ್ತ ಕಾರ್ಯದರ್ಶಿ
3. ಉಪ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 523

ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಶೇಖರ್ (ಹೊಸದುರ್ಗ)

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಉತ್ತರಿಸಬೇಕಾದ ದಿನಾಂಕ: : 10/03/2020

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>1</td><td>ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯೋಜನಾ ಇಲಾಖೆಗೆ ನಂಜುಡಪ್ಪ ವರದಿ ಯೋಜನೆ (ಎಸ್.ಡಿ.ಪಿ) ಅಡಿಯಲ್ಲಿ ಒದಗಿಸಿದ ಅನುದಾನ ಎಷ್ಟು</td><td>ವಿಶೇಷ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳಿಗೆ 2017-18ನೇ ಸಾಲಿನಿಂದ 2019-20ನೇ (ಫೆಬ್ರವರಿ-20ರ ಅಂತ್ಯದವರೆಗೆ) ಸಾಲಿನವರೆಗೆ ನಿಗದಿಪಡಿಸಿದ ಅನುದಾನ, ಬಿಡುಗಡೆ ಹಾಗು ವೆಚ್ಚದ ವಿವರಗಳು ಈ ಕೆಳಗಿನಂತಿವೆ;
(ರೂ ಕೋಟಿಗಳಲ್ಲಿ)
<table>
<tr><th>ವರ್ಷ</th><th>ಅನುದಾನ</th><th>ಪ್ರಾರಂಭಿಕ ಶುಲ್ಕ</th><th>ಒಟ್ಟು ಅನುದಾನ</th><th>ಬಿಡುಗಡೆ</th><th>ವೆಚ್ಚ</th></tr>
<tr><td>2017-18</td><td>2977.92</td><td>0.00</td><td>2977.92</td><td>2546.00</td><td>2496.77</td></tr>
<tr><td>2018-19</td><td>3007.00</td><td>552.77</td><td>3532.97</td><td>3271.11</td><td>2957.20</td></tr>
<tr><td>2019-20 (ಪೆಬ್ರವರಿ-20)</td><td>3010.012</td><td>548.05</td><td>3558.07</td><td>2276.77</td><td>2064.44</td></tr>
<tr><td>ಒಟ್ಟು</td><td>8994.94</td><td>1100.82</td><td>10068.96</td><td>8093.88</td><td>7518.14</td></tr>
</table></td></tr>
<tr><td>2</td><td>ಇದರಲ್ಲಿ ಹೊಸದುರ್ಗ ತಾಲ್ಲೂಕಿಗೆ ಸದರಿ ವರದಿಯನ್ವಯ ನಿಗದಿಪಡಿಸಿದ ಅನುದಾನ ಹಾಗೂ ಬಿಡುಗಡೆಯಾದ ಅನುದಾನವೆಷ್ಟು; (ಕಳೆದ 3 ವರ್ಷಗಳ ವಿವರ ಒದಗಿಸುವುದು)</td><td>ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿಗೆ 2017-18ನೇ ಸಾಲಿನಿಂದ 2019-20ನೇ ಸಾಲಿನವರೆಗೆ ನಿಗದಿಪಡಿಸಿದ ಮತ್ತು ಬಿಡುಗಡೆಮಾಡಿದ ಅನುದನದ ವಿವರ ಈ ಕೆಳಗಿನಂತಿದೆ.
(ರೂ ಕೋಟಿಗಳಲ್ಲಿ)
<table>
<tr><th>ವರ್ಷ</th><th>ಅನುದಾನ</th><th>ಬಿಡುಗಡೆಯಾದ ಅನುದಾನ</th></tr>
<tr><td>2017-18</td><td>30.87</td><td>34.50</td></tr>
<tr><td>2018-19</td><td>23.52</td><td>11.07</td></tr>
<tr><td>2019-20 (ಪೆಬ್ರವರಿ-20)</td><td>34.12</td><td>0.00</td></tr>
<tr><td>ಒಟ್ಟು</td><td>88.52</td><td>45.57</td></tr>
</table></td></tr>
</table>

ಪಿಡಿ 4 ಎಸ್.ಡಿ.ಪಿ 2020

ಬಿ.ಎಸ್. ಯಡಿಯೂರಪ್ಪ

(ಬಿ. ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 26 ಎಲ್‌ಜಿಕ್ಯೂ 2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 9-3-2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಗೂಳಿಹಟ್ಟಿ ಡಿ. ಶೇಖರ್ ಇವರು ಮಂಡಿಸಿರುವ ಚುಕ್ಕೆ ಗುರುತು/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 524 ಕ್ಕೆ ಉತ್ತರ ಒದಗಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಗೂಳಿಹಟ್ಟಿ ಡಿ. ಶೇಖರ್ ಇವರು ಮಂಡಿಸಿರುವ ಚುಕ್ಕೆ ಗುರುತು/ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 524 ಕ್ಕೆ ಸಂಬಂಧಿಸಿದಂತೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಸಿ. ಬಲರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ ಭೂಮಂಜೂರಾತಿ-1

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 524
ಸದಸ್ಯರ ಹೆಸರು : ಶ್ರೀ ಗೂಳಿಹಟ್ಟಿ ಡಿ.ಶೇಖರ್ (ಹೊಸದುರ್ಗ)
ಉತ್ತರಿಸುವ ದಿನಾಂಕ : 10-03-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಂದಾಯ ಇಲಾಖೆಗಳಲ್ಲಿ ಹೆಚ್ಚುತ್ತಿರುವ ಅಕ್ರಮ ಸರ್ಕಾರಿ ಜಾಗಗಳ ಕಬಳಿಕೆ ಬಗ್ಗೆ ವಿವಿಧ ಹಂತದ ನ್ಯಾಯಾಲಯಗಳಲ್ಲಿ ಇಲಾಖೆಗಳ ಪರವಾಗಿ ವಾದಿಸಲು ವಕೀಲರುಗಳ ನೇಮಕವನ್ನು ಆಯಾ ಇಲಾಖೆಗಳಿಗೆ ವಹಿಸಲಾಗುವುದೇ;	ಇಲ್ಲ.
ಆ)	ಇಲ್ಲದಿದ್ದಲ್ಲಿ, ಆಯಾ ಸರ್ಕಾರಿ ಇಲಾಖೆಗಳಿಗೆ ವಕೀಲರ ನೇಮಕಾತಿಗೆ ಇರುವಂತಹ ತೊಡಕುಗಳೇನು? (ವಿವರ ನೀಡುವುದು)	ಕರ್ನಾಟಕ ಸರ್ಕಾರಿ ವ್ಯಾಜ್ಯಗಳ ನಿರ್ವಹಣಾ ನಿಯಮಗಳು, 1985ರಲ್ಲಿ ಕಲ್ಪಿಸಿರುವ ಅವಕಾಶದಂತೆ ಸಂಬಂಧಪಟ್ಟ ಸಚಿವಾಲಯದ ಕಾನೂನು ಕೋಶದ ಮೂಲಕವೇ ಸರ್ಕಾರಿ ವಕೀಲರನ್ನು ಅಧಿಕೃತಗೊಳಿಸಬೇಕಾಗುತ್ತದೆ.

ಸಂಖ್ಯೆ: ಆರ್‌ಡಿ 26 ಎಲ್‌ಜಿಕ್ಯೂ 2020

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಹೆಚ್‌ಡಿ 44 ಪಿಆರ್‌ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 09/03/2020

139
LAS
10/03/2020

ಇವರಿಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ವಿಧಾನ ಸೌಧ,
ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1093ಕ್ಕೆ ಉತ್ತರ ನೀಡುವ ಬಗ್ಗೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1093ಕ್ಕೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

M. R. Shobha
(ಎಂ.ಆರ್.ಶೋಭಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಸೆರೆಮನೆ ಮತ್ತು ಸಿನಿಮಾ)

ಪ್ರತಿಯನ್ನು ಮಾಹಿತಿಗಾಗಿ:-

1. ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಿಸಿಎಎಸ್), ಇವರ ಹಿರಿಯ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿಗಳು (ಅಪರಾಧಗಳು ಮತ್ತು ಸೆರೆಮನೆ & ಸಿನಿಮಾ), ಇವರ ಆಪ್ತ ಸಹಾಯಕರು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಕರ್ನಾಟಕ ವಿಧಾನಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1093**
2] ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ)
3] ಉತ್ತರಿಸುವ ದಿನಾಂಕ : 10.03.2020
4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ನಗರದಲ್ಲಿ ಸುಮಾರು ನೂರು ವರ್ಷಗಳಷ್ಟು ಹಳೆಯದಾದ ಬಂದಿಖಾನೆ ಇದ್ದು, ಇದರ ಬದಲಿಗೆ ನಗರದ ಹೊರವಲಯದ ಗಾಡೇನಹಳ್ಳಿ ಗ್ರಾಮದ ಸರ್ವೆ ನಂಬರ 488ರಲ್ಲಿ ಹೊಸದಾಗಿ ಬಂದಿಖಾನೆ ನಿರ್ಮಿಸಲು 40 ಎಕರೆ ಜಮೀನನ್ನು ಹಿಂದಿನ ಸರ್ಕಾರದ ಅವಧಿಯಲ್ಲಿ ಮಂಜೂರು ಮಾಡಿರುವುದು ಹಾಗೂ ಸದರಿ 40 ಎಕರೆ ಜಾಗವು ಬಂದೀಖಾನೆ ಇಲಾಖೆಯ ವಶದಲ್ಲಿರುವ ಸರ್ಕಾರದ ಗಮನಕ್ಕೆ ಬಂದಿರುವುದು;	ಹೌದು
ಆ)	ಹೊಸ ಬಂಧೀಖಾನೆಯನ್ನು ನಿರ್ಮಿಸಲು ಪ್ರಸ್ತಾಪಿಸಿರುವ ಜಾಗವನ್ನು ಬಂದೀಖಾನೆಯ ಇನ್ಸಪೆಕ್ಟರ್ ಜನರಲ್ ಆಫ್ ಪೋಲೀಸ್ ರವರು ಸ್ಥಳ ಪರಿಶೀಲನೆ ಮಾಡಿ ಬಂದೀಖಾನೆ ನಿರ್ಮಿಸಲು ಸೂಕ್ತ ಸ್ಥಳವೆಂದು ವರದಿ ನೀಡಿರುವುದು ನಿಜವೇ	ಹೌದು
ಇ)	ಹಾಗಿದ್ದಲ್ಲಿ, ಲೋಕೋಪಯೋಗಿ ಇಲಾಖೆಯಿಂದ ಹೊಸ ಬಂದೀಖಾನೆಯನ್ನು ನಿರ್ಮಿಸಲು 198.00 ಕೋಟಿ ರೂ.ಗಳ ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿರುವುದ ನಿಜವೇ; ಹಾಗಿದ್ದಲ್ಲಿ ಹೊಸ ಬಂದೀಖಾನೆಯನ್ನು ನಿರ್ಮಿಸಲು ಯಾವಾಗ ಕ್ರಮ ಜರಿಗಿಸಲಾಗುವುದು; ಸಂಪೂರ್ಣ ವಿವರ ನೀಡುವುದು.	ಪ್ರಸ್ತುತ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು ಪರಿಶೀಲನೆಯಲ್ಲಿದೆ.
ಈ)	ಲೋಕೋಪಯೋಗಿ ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯು ಸದರಿ ಪ್ರಸ್ತಾವನೆಗೆ ಅನುಮತಿ ನೀಡಿರುವುದು ನಿಜವೇ; ಈಗಾಗಲೇ ಗೃಹ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಗೃಹ ಇಲಾಖೆಯಿಂದ ಹಣಕಾಸು ಇಲಾಖೆಯು ಹೊಸ ಬಂದೀಖಾನೆ ನಿರ್ಮಿಸಲು ಅನುಮತಿ ನೀಡಿರುವುದು ನಿಜವೇ? (ಸಂಪೂರ್ಣ ಮಾಹಿತಿ ನೀಡುವುದು)	

ಹೆಚ್‌ಡಿ 44 ಪಿಆರ್‌ಎ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಎನರ್ಜಿ 08 ಪಿಪಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:09.03.2020.

18
U/S
10/03/2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯವಿಧಾನಸಭಾ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ (ಮಡಿಕೇರಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:29ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯವಿಧಾನಸಭಾ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ (ಮಡಿಕೇರಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:29ಕ್ಕೆ ಕನ್ನಡ ಭಾಷೆಯಲ್ಲಿ ಉತ್ತರಗಳ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ತಮಗೆ ಕಳುಹಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

N. mangalagowri

(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

9/3/20

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 29

ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)

ಉತ್ತರಿಸಬೇಕಾದ ದಿನಾಂಕ : 10–03–2020

ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

***

	ಪ್ರಶ್ನೆ	ಉತ್ತರ
ಅ)	ಯಾವ ಯಾವ ಬೆಳೆಗಳನ್ನು ಬೆಳೆಯಲು ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲಗುತ್ತಿದೆ ಅವು ಯಾವುವು	ವಾಣಿಜ್ಯ ಬೆಳೆಗಳಾದ ಕಾಫಿ, ಟೀ ಮತ್ತು ರಬ್ಬರ್ ಬೆಳೆಗಳನ್ನು ಹೊರತುಪಡಿಸಿದಂತೆ ರಾಗಿ, ಭತ್ತ, ಕಬ್ಬು, ಜೋಳ, ತೆಂಗು, ಅಡಿಕೆ, ತೊಗರಿಕಾಯಿ ಮುಂತಾದ ಬೆಳೆಗಳನ್ನು ಬೆಳೆಯಲು 10 ಹೆಚ್.ಪಿ ವರೆಗಿನ ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ಉಚಿತ ವಿದ್ಯುತ್ತನ್ನು ನೀಡಲಾಗುತ್ತಿದೆ.
ಆ)	ಕೊಡಗು ಜಿಲ್ಲೆಯಲ್ಲಿ ಇತ್ತೀಚಿಗೆ ಜಲಪ್ರಳಯದಲ್ಲಿ ರೈತರು ಭೂಮಿ ನಷ್ಟ, ಬೆಳೆ ನಷ್ಟ ಹೊಂದಿದ್ದ ಕಾಫಿ ಬೆಳೆಯುವ ರೈತರು ವರ್ಷದಲ್ಲಿ ಕೇವಲ ಒಂದು ತಿಂಗಳು ಮಾತ್ರ ಗಿಡಗಳಿಗೆ ನೀರು ಹಾಯಿಸುತ್ತಿದ್ದು, ಇವರಿಗೆ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;	ಕೊಡಗು ಜಿಲ್ಲೆಯ ಕಾಫಿ ಬೆಳೆಗಾರರಿಗೆ ಉಚಿತ ವಿದ್ಯುತ್ ಸಂಪರ್ಕ ಕಲ್ಪಿಸಲು ಕೊಡಗು ಜಿಲ್ಲಾ ಕಾಫಿ ಬೆಳೆಗಾರರ ಸಂಘ ಮತ್ತು ಇತರರು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯು ಪರಿಶೀಲನೆ ಹಂತದಲ್ಲಿರುತ್ತದೆ.
ಇ)	ಕೊಡಗು ಜಿಲ್ಲೆಯಲ್ಲಿ 10 ಹೆಚ್.ಪಿ ಒಳಗೆ ಪಂಪ್‌ಸೆಟ್ ಉಪಯೋಗಿಸುವ ರೈತರಿಗೆ ಉಚಿತ ವಿದ್ಯುತ್ ನೀಡುವಂತೆ ಸನ್ಮಾನ್ಯ ಮುಖ್ಯಮಂತ್ರಿಯವರು ಪತ್ರದ ಮೂಲಕ ಸೂಚಿಸಿದ್ದರೂ ಸಹ ಇದುವರೆವಿಗೂ ಆದೇಶ ಜಾರಿಯಾಗದಿರಲು ಕಾರಣವೇನು ; (ಪೂರ್ಣ ವಿವರ ನೀಡುವುದು)	• ಸರ್ಕಾರವು ಕೊಡಗು ಜಿಲ್ಲೆ ರೈತರನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ರೈತರ 10 ಹೆಚ್.ಪಿ.ವರೆಗಿನ ಕೃಷಿ ನೀರಾವರಿ ಪಂಪ್ ಸೆಟ್ ಗಳಿಗೆ LT 4 (a) ಜಕಾತಿಯಡಿ ಈಗಾಗಲೇ ಉಚಿತವಾಗಿ ವಿದ್ಯುತ್ ಒದಗಿಸುತ್ತಿದೆ. • ಕೊಡಗು ಜಿಲ್ಲೆಯಲ್ಲಿ ಕಾಫಿ ಬೆಳೆಗಳಿಗೆ ಬಳಸುವ 10 ಹೆಚ್‌ಪಿವರೆಗಿನ ವಿದ್ಯುತ್‌ನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ದರ ಪರಿಷ್ಕರಣೆ ಆದೇಶದಂತೆ LT 4 (c) (i) ಜಕಾತಿಯಡಿಯಲ್ಲಿ ಸೇರ್ಪಡೆಯಾಗಿದ್ದು, ಪ್ರಸ್ತುತ ಈ ಜಕಾತಿಯಡಿಯಲ್ಲಿ ಬಳಸುವ ವಿದ್ಯುತ್ ಗೆ ಉಚಿತ ವಿದ್ಯುತ್ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯ ಹಂತದಲ್ಲಿರುತ್ತದೆ.
ಈ)	ಕೊಡಗು ಜಿಲ್ಲೆಗೆ ಕಳೆದ 3 ವರ್ಷದಿಂದ ದೀನ್ ದಯಾಳ್ ಯೋಜನೆಯಡಿ ಬಿಡುಗಡೆಗೊಂಡ ಅನುದಾನವೆಷ್ಟು ; ಯಾವ್ಯಾವ ಕಾಮಗಾರಿಗೆ ಅನುದಾನ ಬಿಡುಗಡೆಗೊಂಡಿದೆ ; ಆ ಪೈಕಿ ಪೂರ್ಣಗೊಂಡ ಕಾಮಗಾರಿಗಳು ಯಾವುವು ;	ದೀನ್ ದಯಾಳ್ ಉಪಾಧ್ಯಾಯ ಯೋಜನೆಯಡಿಯಲ್ಲಿ ಕೊಡಗು ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಅನುದಾನ ಹಾಗೂ ಕಾಮಗಾರಿ ಪ್ರಗತಿ ವಿವರಗಳನ್ನು **ಅನುಬಂಧ–1** ರಲ್ಲಿ ಲಗತ್ತಿಸಿದೆ. ಸದರಿ ಯೋಜನೆಯ ಮಾರ್ಗಸೂಚಿಗಳಂತೆ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

		• ಕೃಷಿ ಮತ್ತು ಕೃಷಿಯೇತರ ಫೀಡರ್‌ಗಳ ಬೇರ್ಪಡಿಸುವಿಕೆಯಡಿ (ಲಿಂಕ್ ಲೈನ್ ಕಾಮಗಾರಿಗಳು) 09 ಸಂಖ್ಯೆ ಫೀಡರ್‌ಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. • ವಿದ್ಯುತ್ ಪ್ರಸರಣ ಹಾಗೂ ವಿತರಣಾ ವ್ಯವಸ್ಥೆಯ ಬಲವರ್ಧನೆ ಮೂರು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. • ಗ್ರಾಮೀಣ ವಿದ್ಯುದೀಕರಣದಡಿ ಒಟ್ಟು 901 ಬಿ.ಪಿ.ಎಲ್. ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಕೊಡಗು ಜಿಲ್ಲೆಗೆ ಕಳೆದ 3 ವರ್ಷದಿಂದ ದೀನ್ ದಯಾಳ್ ಯೋಜನೆಯಡಿ ರೂ. 788.24 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ.
ಉ)	ರಾಜ್ಯದಲ್ಲಿ ಕಳದೆ 3 ವರ್ಷಗಳಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಬಂದ ಅರ್ಜಿಗಳ ಸಂಖ್ಯೆ ಎಷ್ಟು ; ಈ ಪೈಕಿ ಕೊಡಗು ಜಿಲ್ಲೆಗೆ ಬಂದ ಅರ್ಜಿಗಳೆಷ್ಟು ; ಎಷ್ಟು ರೈತರ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ; ಬಾಕಿ ಇರುವ ರೈತರಿಗೆ ಯಾವಾಗ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ;	ಕಳೆದ 3 ವರ್ಷಗಳಲ್ಲಿ (2016-17 ರಿಂದ ಜನವರಿ-2020 ರವರೆಗೆ) ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಲು ಒಟ್ಟು 80072 ಅರ್ಜಿಗಳು ನೋಂದಣಿಗೊಂಡಿರುತ್ತವೆ. ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ, ಈ ಅವಧಿಯಲ್ಲಿ 319 ಸಂಖ್ಯೆಯ ಅರ್ಜಿಗಳು ನೋಂದಣಿಗೊಂಡಿದ್ದು, 244 ಸಂಖ್ಯೆಯ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ವಿದ್ಯುದೀಕರಣಕ್ಕೆ ಬಾಕಿ ಇರುವ 112 ಕೊಳವೆ ಬಾವಿಗಳ ಕಾಮಗಾರಿಗಳನ್ನು ಪೂರ್ಣಗುತ್ತಿಗೆ ಆಧಾರದಲ್ಲಿ ಅವಾರ್ಡ್ ನೀಡಲಾಗಿದ್ದು, ಶೀಘ್ರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ.
ಊ)	ಕೊಡಗು ಜಿಲ್ಲೆಯಲ್ಲಿ ಗುತ್ತಿಗೆ ಪಡೆದ ಗುತ್ತಿಗೆದಾರರು ಸರಿಯಾದ ಸಮಯಕ್ಕೆ ಕಾಮಗಾರಿ ಪೂರೈಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿಈ ಬಗೆ ಕೈಗೊಂಡ ಕ್ರಮಗಳೇನು ;(ಪೂರ್ಣ ವಿವರ ನೀಡುವುದು)	ಕೊಡಗು ಜಿಲ್ಲೆ ಮಲೆನಾಡು ಹಾಗೂ ಬೆಟ್ಟಗುಡ್ಡಗಳಿಂದ ಕೂಡಿದ ದುರ್ಗಾಮವಾದ ಭೂ-ಪ್ರದೇಶವಾಗಿರುತ್ತದೆ. ಇಲ್ಲಿ ವರ್ಷದ ನಾಲ್ಕು ತಿಂಗಳು ಹೆಚ್ಚಿನ ಮಳೆಯಾಗುತ್ತದೆ. ಇದರಿಂದಾಗಿ ಕಾಮಗಾರಿಗಳ ಪ್ರಗತಿಯು ಕುಂಠಿತವಾಗಿರುತ್ತದೆ. ಪ್ರಸ್ತುತ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ನಿರ್ದೇಶನ ನೀಡಲಾಗಿರುತ್ತದೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ ನಿಗಮದ ನಿಯಾಮನುಸಾರ ದಂಡ ವಿಧಿಸಿ ಕಾಮಗಾರಿ ಪೂರ್ಣಗೊಳಿಸಲಾಗುತ್ತದೆ.
ಋ)	ಈ ಜಿಲ್ಲೆಗೆ ಯಾವ ಯಾವ ಯೋಜನೆಗೆ ಎಷ್ಟೆಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ ; ಈ ಯೋಜನೆಯಡಿ ಕೈಗೊಂಡ ಕಾಮಗಾರಿಗಳು ಯಾವುವು ; ಬಾಕಿ ಇರುವ ಕಾಮಗಾರಿಗಳು ಯಾವುವು ? (ಪೂರ್ಣ ವಿವರ ನೀಡುವುದು)	ಕೊಡಗು ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ಬಿಡುಗಡೆಯಾದ ಅನುದಾನ ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ. • ಆರ್.ಎ.ಪಿ.ಡಿ.ಆರ್.ಪಿ: 30,000 ಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರುವ ಪಟ್ಟಣಗಳನ್ನು ಪರಿಗಣಿಸಲಾಗಿದೆ. ಅದರಂತೆ ಮಡಿಕೇರಿಯನ್ನು ಈ ಯೋಜನೆಯಡಿ ಸೇರಿಸಲಾಗಿದೆ. ಯೋಜನೆಯಲ್ಲಿ ಪರಿಗಣಿಸಲಾದ ಪಟ್ಟಣಗಳ ಎಟಿ & ಸಿ ನಷ್ಟವನ್ನು ಶೇ 15ರ ಮಿತಿಯೊಳಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆಯಲ್ಲಿ 2 ಭಾಗಗಳಿದ್ದು, ಉದ್ದೇಶಿತ

...3

		ಪಟ್ಟಣಗಳಲ್ಲಿ ಭಾಗ-1 ಮಾಹಿತಿ ತಂತ್ರಜ್ಞಾನ ಅಳವಡಿಕೆ ಹಾಗೂ ಭಾಗ-2 ರಲ್ಲಿ ವ್ಯವಸ್ಥೆ ಸುಧಾರಣೆಯಂತಹ ಕಾರ್ಯಕ್ರಮ ಕೈಗೊಳ್ಳಲಾಗಿರುತ್ತದೆ. ಮಡಿಕೇರಿಯಲ್ಲಿ ಸದರಿ ಕಾಮಗಾರಿ 2017-18ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ. • ಡಿ.ಡಿ.ಯು.ಜಿ.ಜೆ.ವೈ ಗ್ರಾಮಾಂತರ ಪ್ರದೇಶಗಳಲ್ಲಿ ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿ ಕೃಷಿ ಮತ್ತು ಕೃಷಿಯೇತರ ಫೀಡರ್‌ಗಳ ಬೇರ್ಪಡಿಸುವಿಕೆ, ವಿದ್ಯುತ್ ಪ್ರಸರಣ ಹಾಗೂ ವಿತರಣಾ ವ್ಯವಸ್ಥೆಯ ಬಲವರ್ದನೆ ಹಾಗೂ ಗ್ರಾಮೀಣ ವಿದ್ಯುದೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ. • ಐ.ಪಿ.ಡಿ.ಎಸ್. ನಗರ ಪ್ರದೇಶಗಳಲ್ಲಿ ಸಮಗ್ರ ವಿದ್ಯುತ್ ಅಭಿವೃದ್ಧಿ ಯೋಜನೆಯಡಿ ವಿದ್ಯುತ್ ಮಾರ್ಗ ಬಲವರ್ಧನೆ, ವಿದ್ಯುತ್ ಹೊರೆಯ ವಿಭಜನೆ, ಮಾಪಕೀಕರಣ, ವಿದ್ಯುತ್ ಮಾರ್ಗ ವಿಸ್ತರಣೆ ಹಾಗೂ ಸುಧಾರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ. • DDG (Decentralised Distributed Generation) ವಿಕೇಂದ್ರಿತ ವಿದ್ಯುತ್ ಉತ್ಪಾದನೆ ಯೋಜನೆಯಡಿ ಹಾಲಿ ಇರುವ ವಿದ್ಯುತ್ ಜಾಲದಿಂದ ದೂರವಿದ್ದು, ಅರಣ್ಯ ಗಡಿ ಪ್ರದೇಶದ ವಸತಿಗಳಿಗೆ ಸಾಂಪ್ರಾದಾಯಿಕ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಿಲ್ಲದಿರುವಂತಹ ಪ್ರದೇಶಗಳಿಗೆ ಅಸಾಂಪ್ರಾದಾಯಿಕ ಇಂಧನ ಮೂಲಗಳಿಂದ ಸದರಿ ಪ್ರದೇಶಗಳಲ್ಲಿರುವ ಬಿ.ಪಿ.ಎಲ್ ಮನೆಗಳಿಗೆ ವಿದ್ಯುತ್ ಒದಗಿಸಲು ಉದ್ದೇಶಿಸಲಾಗಿರುತ್ತದೆ. ಕೊಡಗು ಜಿಲ್ಲೆಯಲ್ಲಿ ಸದರಿ ಯೋಜನೆಯಡಿ 12 ಜನವಸತಿ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ನವೀಕರಿಸಬಹುದಾದ ಇಂಧನ ಅಭಿವೃದ್ಧಿಗಾಗಿ 13ನೇ ಹಣಕಾಸು ಯೋಜನೆಯಡಿ ಕೇಂದ್ರ ಸರ್ಕಾರದಿಂದ ಚಾವಿಸನಿನಿಗೆ ಬಿಡುಗಡೆಯಾದ ಅನುದಾನದಲ್ಲಿ ಕೊಡಗು ಜಿಲ್ಲೆಯ ಆಯ್ದ ಸರ್ಕಾರಿ ಕಛೇರಿ ಕಟ್ಟಡಗಳ ಮೇಲೆ ಸೋಲಾರ್ ಪಿ.ವಿ. ಮೇಲ್ಛಾವಣಿ ಘಟಕಗಳನ್ನು ಅಳವಡಿಸಲಾಗಿದ್ದು ಮಡಿಕೇರಿಯಲ್ಲಿ ಸದರಿ ಕಾಮಗಾರಿ 2017-18ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ.

ಸಂಖ್ಯೆ: ಎನರ್ಜಿ 08 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ಅನುಬಂಧ-1

ದೀನ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯಡಿಯಲ್ಲಿ ಕೊಡಗು ಜಿಲ್ಲೆಗೆ ಸಂಬಂಧಿಸಿದ ಕಾಮಗಾರಿಯ ವಿವರಗಳು

(ರೂ. ಲಕ್ಷಗಳಲ್ಲಿ)

ಪ್ರಶ್ನೆ ಸಂಖ್ಯೆ: 29

ಕ್ರ ಸಂ	ಯೋಜನೆಯ ಹೆಸರು	ಬಿಡುಗಡೆಯಾದ ಅನುದಾನ				ಆರ್ಥಿಕ ಪ್ರಗತಿಯ ವಿವರ				ಕಾಮಗಾರಿಯ ವಿವರ
		2016–17	2017–18	2018–19	2019–20 (ಫೆಬ್ರವರಿ–2020ರ ಅಂತ್ಯಕ್ಕೆ)	2016–17	2017–18	2018–19	2019–20 (ಫೆಬ್ರವರಿ–2020ರ ಅಂತ್ಯಕ್ಕೆ)	
1	ಡಿ..ಡಿ.ಯು.ಜಿ.ಜೆ.ವೈ	0.00	270.37	468.52	49.35	0.00	127.21	780.79	682.00	ಕಾಮಗಾರಿ ಪೂರ್ಣಗೊಂಡಿರುತ್ತದೆ.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾ.ವಿ.ಸ.ನಿ.ನಿ., ಮೈಸೂರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ಅನುಬಂಧ-೩

ಕೊಡಗು ಜಿಲ್ಲೆಗೆ ಇಂಧನ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಗೊಳಿಸಲಾದ ಅನುದಾನದ ವಿವರ

ಪ್ರಶ್ನೆ ಸಂಖ್ಯೆ:29

(ರೂ. ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಯ ಹೆಸರು	ಬಿಡುಗಡೆಯಾದ ಅನುದಾನ					ಆರ್ಥಿಕ ಪ್ರಗತಿಯ ವಿವರ					ಕಾಮಗಾರಿಯ ವಿವರ
		2015-16	2016-17	2017-18	2018-19	2019-20 (ಫೆಬ್ರವರಿ-2020ರ ಅಂತ್ಯಕ್ಕೆ)	2015-16	2016-17	2017-18	2018-19	2019-20 (ಫೆಬ್ರವರಿ-2020ರ ಅಂತ್ಯಕ್ಕೆ)	
1	ಡಿ.ಡಿ.ಯು.ಜಿ.ಜೆ.ವೈ	0.00	0.00	270.37	468.52	49.35	0.00	0.00	127.21	780.79	682.00	ಕಾಮಗಾರಿ ಪೂರ್ಣಗೊಂಡಿದೆ
2	ಐ.ಪಿ.ಡಿ.ಎಸ್	0.00	116.29	232.08	696.47	0.00	0.00	0.00	258.25	206.75	665.00	ಕಾಮಗಾರಿ ಪೂರ್ಣಗೊಂಡಿದೆ
3	ಡಿ.ಡಿ.ಜಿ	133.52	0.00	133.52	0.00	0.00	152.68	121.37	29.24	25.65	5.06	ಕಾಮಗಾರಿ ಪ್ರಗತಿಯಲ್ಲಿದೆ
5	ಆರ್.ಎ.ಪಿ.ಡಿ.ಆರ್.ಪಿ	0.00	0.00	183.73	1.91	0.00	0.00	112.84	125.45	80.75	126.66	ಕಾಮಗಾರಿ ಪೂರ್ಣಗೊಂಡಿದೆ
6	13ನೇ ಹಣಕಾಸು ಆಯೋಗ (ನವೀಕರಿಸಬಹುದಾದ ಇಂಧನ ಅಭಿವೃದ್ಧಿ)	124.57	0.00	0.00	0.00	0.00	0.00	0.00	112.12	0.00	0.00	ಕಾಮಗಾರಿ ಪೂರ್ಣಗೊಂಡಿದೆ

ಸೂಚನೆ: ಡಿ.ಡಿ.ಜಿ : ಮೆ॥ ಆರ್.ಇ.ಸಿ. ರವರು ದಿನಾಂಕ: 29.03.2016 ಮತ್ತು 05.01.2018ರಲ್ಲಿ ಕ್ರಮವಾಗಿ ರೂ. 529.74 ಮತ್ತು 529.74 ಒಟ್ಟಾರೆ ರೂ. 1059.48 ಲಕ್ಷಗಳ ಅನುದಾನವನ್ನು ಒಟ್ಟಾರೆ 4 ವಿಭಾಗಗಳಿಗೆ ಸೇರಿದಂತೆ ಅನುದಾನ ಬಿಡುಗಡೆ ಮಾಡಿರುತ್ತಾರೆ, ಮಡಿಕೇರಿ ವಿಭಾಗಕ್ಕೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾದ ಬಗ್ಗೆ ಮಾಹಿತಿ ಲಭ್ಯವಿಲ್ಲದ ಕಾರಣ ವಿಸ್ತೃತ ಕಾರ್ಯಾದೇಶದನ್ವಯ ಕಾರ್ಯಾದೇಶದ ಮೊತ್ತಕ್ಕೆ ಅನುಗುಣವಾಗಿ ಪ್ರೋ-ರೇಟಾ ಆಧಾರದ ಮೇಲೆ ಹಂಚಿಕೆ ಮಾಡಿಕೊಳ್ಳಲಾಗಿದೆ

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾ.ವಿ.ಸ.ನಿ.ನಿ., ಮೈಸೂರು.

ಕರ್ನಾಟಕ ಸರ್ಕಾರ

ಸಂ:ಹೆಚ್‌ಡಿ 85 ಎಸ್‌ಎಸ್‌ಟಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:09.03.2020

17
11/03/2020

ಇವರಿಂದ:-
ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ.

ಇವರಿಗೆ:-
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:28ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ:- ತಮ್ಮ ಪತ್ರ ಸಂ:ಪ್ರಶಾವಿಸ/15ನೇವಿಸ/6ಅ/ಪ್ರಸಂ.28/2020, ದಿನಾಂಕ:25.02.2020.

-- -- --

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ) ರವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:28ಕ್ಕೆ ಉತ್ತರದ 250 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ

(ಕೆ.ಪದ್ಮನಿದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಕಾನೂನು ಮತ್ತು ಸುವ್ಯವಸ್ಥೆ)
☎2203 3254, e-mail:uslo-home@karnataka.gov.in

ಪ್ರತಿ:

1) ಮಾನ್ಯ ಗೃಹ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಿಸಿಎಎಸ್)ರವರ ಆಪ್ತ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ
3) ಸರ್ಕಾರದ ಉಪ ಕಾರ್ಯದರ್ಶಿ(ಕಾನೂನು & ಸುವ್ಯವಸ್ಥೆ) ಹಾಗೂ (ಸಮನ್ವಯ) ರವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ.
4) ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ) ಒಳಾಡಳಿತ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	28
ಸದಸ್ಯರ ಹೆಸರು	:	ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ) ಮಾನ್ಯ ವಿಧಾನಸಭಾ ಸದಸ್ಯರು
ಉತ್ತರಿಸಬೇಕಾದ ದಿನಾಂಕ	:	10-03-2020
ಉತ್ತರಿಸುವ ಸಚಿವರು	:	ಗೃಹಸಚಿವರು.

ಕ್ರ.ಸ	ವಿಷಯ	ಉತ್ತರ
ಅ	ಕೊಡಗು ಜಿಲ್ಲೆಯಲ್ಲಿ ಟಿಪ್ಪು ಜಯಂತಿ ಆಚರಣೆ ಸಂಬಂಧ ಉಂಟಾದ ಗಲಭೆ ಸಂದರ್ಭದಲ್ಲಿ ಯಾವ ಯಾವ ಪೊಲೀಸ್ ಠಾಣೆಯಲ್ಲಿ ಎಷ್ಟು ಜನರ ಮೇಲೆ ಮೊಕದ್ದಮೆ ದಾಖಲಾಗಿದೆ.	ಕೊಡಗು ಜಿಲ್ಲೆಯಲ್ಲಿ ಟಿಪ್ಪು ಜಯಂತಿ ಆಚರಣೆ ಸಂಬಂಧ ಉಂಟಾದ ಗಲಭೆ ಸಂದರ್ಭದಲ್ಲಿ ಪ್ರಕರಣ ದಾಖಲಾದ ಪೊಲೀಸ್ ಠಾಣೆ, ಆರೋಪಿಗಳ ಸಂಖ್ಯಾ ವಿವರ ಕೆಳಗಿನಂತಿರುತ್ತದೆ.

ಕ್ರಸ	ಠಾಣೆಯ ಹೆಸರು	ಒಟ್ಟು ಪ್ರಕರಣಗಳ ಸಂಖ್ಯೆ	ಆರೋಪಿಗಳ ಸಂಖ್ಯೆ
	2015		
1	ವಿರಾಜಪೇಟೆ ನಗರ	2	73
2	ವಿರಾಜಪೇಟೆ ಗ್ರಾಮಾಂತರ ಠಾಣೆ	1	ಅಪರಿಚಿತರು ಪತ್ತೆಯಾಗಿರುವುದಿಲ್ಲ.
3	ಗೋಣಿಕೊಪ್ಪ ಠಾಣೆ	2	1
4	ಮಡಿಕೇರಿ ಗ್ರಾಮಾಂತರ	3	12
5	ಮಡಿಕೇರಿ ನಗರ	17	106
6	ಕುಶಾಲನಗರ ಪಟ್ಟಣ ಠಾಣೆ	7	52
7	ಸಿದ್ದಾಪುರ	4	15
8	ಸೋಮವಾರಪೇಟೆ	5	79
9	ನಾಪೋಕ್ಲು	3	20
10	ಭಾಗಮಂಡಲ	3	28
	2016		
1	ಮಡಿಕೇರಿ ಗ್ರಾಮಾಂತರ	1	ಅಪರಿಚಿತರು ಪತ್ತೆಯಾಗಿರುವುದಿಲ್ಲ.
	2017		
1	ಮಡಿಕೇರಿ ನಗರ	2	14
2	ಮಡಿಕೇರಿ ಗ್ರಾಮಾಂತರ	1	4

ಆ	ದಾಖಲಾದ ಮೊಕದ್ದಮೆಯಲ್ಲಿ ಅಮಾಯಕರ ಹೆಸರು ಸೇರ್ಪಡೆಗೊಂಡಿರುವುದರಿಂದ ಯುವ ಪೀಳಿಗೆಗೆ ತೊಂದರೆಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?	ಪ್ರಕರಣಗಳನ್ನು ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ:ಒಇ 45 ಮೊಹಿಬ 2019, ದಿನಾಂಕ:05.03.2020ರಲ್ಲಿ 18 ಪ್ರಕರಣಗಳನ್ನು ಹಿಂಪಡೆಯಲು ಮಂಜೂರಾತಿ ನೀಡಲಾಗಿರುತ್ತದೆ.
ಇ	ಹಾಗಿದ್ದಲ್ಲಿ ಇಂತಹ ಮೊಕದ್ದಮೆಗಳನ್ನು ವಾಪಾಸ್ಸು ಪಡೆಯಲು ಸರಕಾರ ಕೈಗೊಂಡ ಕ್ರಮವೇನು?	

ಹೆಚ್‌ಡಿ 85 ಎಸ್‌ಎಸ್‌ಟಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಹೆಚ್ ಡಿ 21 ಪಿಬಿಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:09-3-2020.

186
10/3/20

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
ವಿಧಾನ ಸೌಧ.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ) ಮಾನ್ಯ ವಿಧಾನ ಸಭಾ ಸದಸ್ಯರು ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:364ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/ಪ್ರ.ಸಂ.364/2020, ದಿನಾಂಕ:27-02-2020.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ) ಮಾನ್ಯ ವಿಧಾನ ಸಭಾ ಸದಸ್ಯರು ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:364ಕ್ಕೆ ಉತ್ತರದ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

9/3/2020
(ಬಿ.ಎನ್.ದೇವರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ವೆಚ್ಚ)

ಕರ್ನಾಟಕ ವಿಧಾನಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 364

2] ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)

3] ಉತ್ತರಿಸುವ ದಿನಾಂಕ : 10.03.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮೂಡಬಿದಿರೆ ಪುರಸಭಾ ವ್ಯಾಪ್ತಿಯಲ್ಲಿರುವ ಅತ್ಯಂತ ಹಳೆಯ ಪೊಲೀಸ್ ಠಾಣೆ ಕಟ್ಟಡವು ದೀರ್ಘ ಕಾಲದಿಂದ ಖಾಲಿ ಇದ್ದು ಅದನ್ನು ತೆರವುಗೊಳಿಸದಿರಲು ಕಾರಣಗಳೇನು; ಈ ಹಳೆ ಕಟ್ಟಡವು ಪಟ್ಟಣದ ಜನಸಂದಣಿ ಇರುವ ಪ್ರದೇಶದಲ್ಲಿದ್ದು, ಇದು ಬೀಳುವ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮೂಡಬಿದಿರೆಯ ಹಳೆಯ ಪೊಲೀಸ್ ಠಾಣಾ ಕಟ್ಟಡದಲ್ಲಿದ್ದ ಪೊಲೀಸ್ ಠಾಣೆಯನ್ನು ನೂತನ ಕಟ್ಟಡಕ್ಕೆ ದಿನಾಂಕ:07.02.2005 ರಂದು ಸ್ಥಳಾಂತರಿಸಲಾಗಿದೆ. ಸದರಿ ಹಳೆಯ ಕಟ್ಟಡವನ್ನು ನೆಲಸಮಗೊಳಿಸಲಾಗುವುದು. ನಂತರದಲ್ಲಿ ಜಮೀನನ್ನು ಸದ್ಬಳಕೆ ಮಾಡಿಕೊಳ್ಳಲು ಅಗತ್ಯ ಕ್ರಮಕೈಗೊಳ್ಳಲಾಗುವುದು.
ಆ)	ನೂತನ ಕಟ್ಟಡಕ್ಕೆ ಪೊಲೀಸ್ ಠಾಣೆ ಸ್ಥಳಾಂತರಗೊಂಡಿದ್ದು; ಈ ಹಳೆಯ ಕಟ್ಟಡವನ್ನು ತೆರವುಗೊಳಿಸಿ ಅಲ್ಲಿ ಲಭ್ಯವಾಗುವ ಜಾಗವನ್ನು ಸದ್ಬಳಕೆ ಮಾಡುವ ಕುರಿತು ಸರ್ಕಾರದ ಮುಂದಿರುವ ಪ್ರಸ್ತಾವನೆಗಳೇನು;	
ಇ)	ಮೂಡಬಿದಿರೆ ಪ್ರದೇಶದಲ್ಲಿ ವಾಹನ ಸಂಚಾರ ದಟ್ಟಣೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ನೂತನವಾಗಿ ಸಂಚಾರಿ ಪೊಲೀಸ್ ಠಾಣೆ ಪ್ರಾರಂಭಿಸಿ ಸಂಚಾರ ಸುವ್ಯವಸ್ಥೆಗೆ ಅನುವು ಮಾಡಿಕೊಡುವ ಕುರಿತಾದ ಸರ್ಕಾರದ ಕ್ರಮಗಳೇನು?	ರಾಷ್ಟ್ರೀಯ ಪೊಲೀಸ್ ಮಾನದಂಡಗಳು / ಮಾರ್ಗಸೂಚಿಗಳನ್ನು ಪೂರೈಸಿರುವ ಬಗ್ಗೆ ಪರಿಶೀಲಿಸಿ ಸದರಿ ಸಂಚಾರಿ ಪೊಲೀಸ್ ಠಾಣೆಯನ್ನು ಪ್ರಾರಂಭಿಸುವ ಬಗ್ಗೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಹೆಚ್‌ಡಿ 21 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 14 ಎಂಎಲ್ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ.
ವಿಕಾಸಸೌಧ,
ಬೆಂಗಳೂರು, ದಿನಾಂಕ:09.03.2020.

53
10/3/20

ಇವರಿಂದ,
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸಸೌಧ.

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1081ಕ್ಕೆ ಉತ್ತರಿಸುವ ಕುರಿತು.

---***---

ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1081ಕ್ಕೆ ದಿನಾಂಕ:10.03.2020 ರಂದು ಮಾನ್ಯ ಜಲಸಂಪನ್ಮೂಲ ಸಚಿವರು ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಗೆ ಉತ್ತರಗಳನ್ನು ಸಿದ್ಧಪಡಿಸಿ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

(ಶ್ರೀಹರಿ ಎಸ್.ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-1)
ಜಲಸಂಪನ್ಮೂಲ ಇಲಾಖೆ.

ಪ್ರತಿಯನ್ನು:-

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
4. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
5. ಸರ್ಕಾರದ ಉಪ ಕಾರ್ಯದರ್ಶಿಯವರ (ಕೆ.ಜಿ.ಜೆ.ಎನ್.ಎಲ್) ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.

ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ. (ಸೇವೆಗಳು) ಜಲಸಂಪನ್ಮೂಲ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1081
ಸದಸ್ಯರ ಹೆಸರು	: ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)
ಉತ್ತರಿಸುವ ದಿನಾಂಕ	: 10.03.2020
ಉತ್ತರಿಸುವ ಸಚಿವರು	: ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬೀದರ್ ಜಿಲ್ಲೆಯ ಬೀದರ್ ನಗರ, ಭಾಲ್ಕಿ ಹುಮನಾಬಾದ್ ಹಾಗೂ ಚಿಟಗುಪ್ಪಾ, ಹಳ್ಳಿಖೇಡ್(ಬಿ) ಪಟ್ಟಣಗಳಿಗೆ ಕುಡಿಯುವ ನೀರು ಪೂರೈಸಲು ಪ್ರತಿ ಸಾಲಿನಲ್ಲಿ ಕಾರಂಜ ಜಲಾಶಯದಲ್ಲಿ 1.0 TMC ನೀರು ಲಭ್ಯವಿರದೇ ಬೇಸಿಗೆ ಕಾಲದಲ್ಲಿ ಸಮಸ್ಯೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬೀದರ್ ಜಿಲ್ಲೆಯ ಬೀದರ್ ನಗರ, ಭಾಲ್ಕಿ ಹುಮನಾಬಾದ್ ಹಾಗೂ ಚಿಟಗುಪ್ಪಾ, ಹಳ್ಳಿಖೇಡ್(ಬಿ) ಪಟ್ಟಣಗಳಿಗೆ ಕುಡಿಯುವ ನೀರಿನ ಸಲುವಾಗಿ ಕಾರಂಜಾ ಜಲಾಶಯದ ನೀರನ್ನು ಉಪಯೋಗಿಸಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕಾರಂಜಾ ಜಲಾಶಯಕ್ಕೆ ಒಳಹರಿವಿನ ಕೊರತೆಯಿಂದ ಜಲಾಶಯವು ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗುತ್ತಿರುವುದಿಲ್ಲ.
ಆ)	ಬಂದಿದ್ದಲ್ಲಿ, ಸದರಿ ಸಮಸ್ಯೆಗೆ ಶಾಶ್ವತ ಪರಿಹಾರಕ್ಕಾಗಿ ಸರ್ಕಾರ ಯಾವುದಾದರೂ ಯೋಜನೆ ರೂಪಿಸಿದೆಯೇ?	ಪ್ರಸ್ತುತ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.
ಇ)	ಸದರಿ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಬೀದರ್ ಜಿಲ್ಲೆಯ ಪಕ್ಕದ ಕೃಷ್ಣಾ ಕಣಿವೆಯಲ್ಲಿ, ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಅಮೃತಕುಂಡದ ಹತ್ತಿರ ಉಗಮವಾಗಿ ಹರಿಯುವ ಮುಲ್ಲಾಮಾರಿ ನದಿಯಿಂದ ಮಳೆಗಾಲದಲ್ಲಿ 1.50 TMC ನೀರನ್ನು ಚಿಂಚೋಳಿ ತಾಲ್ಲೂಕಿನ ಎಲ್ಕಾಮಡಿ ಗ್ರಾಮದ ಹತ್ತಿರದಿಂದ ಎತ್ತಿ ಕಾರಂಜಾ ಜಲಾಶಯಕ್ಕೆ ತುಂಬಿಸುವ ಯೋಜನೆಯನ್ನು ಕೈಗೆತ್ತಿಗೊಳ್ಳಲುಕ್ರಮ ಕೈಗೊಳ್ಳಲಾಗಿದೆಯೇ?	ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

<u>ಸಂಖ್ಯೆ:ಜಸಂಇ 14 ಎಂಎಲ್ಎ 2020</u>

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಹೆಚ್ ಡಿ 26 ಪಿಓಪಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:09-3-2020.

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
ವಿಧಾನ ಸೌಧ.

ಇವರಿಗೆ,

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ: (ಖಾನಾಪುರ) ಮಾನ್ಯ ವಿಧಾನ ಸಭಾ ಸದಸ್ಯರು ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:375ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/ಪ್ರ.ಸಂ.375/2020, ದಿನಾಂಕ:27-02-2020.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ: (ಖಾನಾಪುರ) ಮಾನ್ಯ ವಿಧಾನ ಸಭಾ ಸದಸ್ಯರು ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:375ಕ್ಕೆ ಉತ್ತರದ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಬಿ.ಎನ್.ದೇವರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ವೆಚ್ಚ)

ಕರ್ನಾಟಕ ವಿಧಾನಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 375

2] ಸದಸ್ಯರ ಹೆಸರು : ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ॥ (ಖಾನಾಪುರ)

3] ಉತ್ತರಿಸುವ ದಿನಾಂಕ : 10.03.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಗಡಿಭಾಗದ ಖಾನಾಪುರ ತಾಲ್ಲೂಕಿನ ಜಾಂಬೋಟಿ ಹೊರಠಾಣೆಯನ್ನು ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಜಾಂಬೋಟಿ ಹೊರಠಾಣೆಯನ್ನು ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಮಾನದಂಡಗಳನ್ನು ಪೂರೈಸಿರುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುವುದು.
ಆ)	ಜಾಂಬೋಟಿ ಹೊರಠಾಣೆಯನ್ನು ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲಾಗುವುದು?	

ಹೆಚ್‌ಡಿ 26 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು.

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು –560001. ದೂ. 22034319

ಸಂಖ್ಯೆ: ಸಿಐ 38 ಸಿಎಸ್‌ಸಿ 2020 ದಿನಾಂಕ: 09.03.2020.

192
10/3/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ. & ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು–01.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನಸೌಧ, ಬೆಂಗಳೂರು–01.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನಸಭೆ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 856ಕ್ಕೆ ಉತ್ತರಿಸುವ ಬಗ್ಗೆ.

* * * * *

ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 856ಕ್ಕೆ ದಿನಾಂಕ: 10.03.2020 ರಂದು ಕರ್ನಾಟಕ ವಿಧಾನಸಭೆ, ವಿಧಾನಸೌಧ, ಬೆಂಗಳೂರು, ಇಲ್ಲಿ ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಯ ಉತ್ತರಗಳ 100 ಪ್ರತಿಗಳನ್ನು ಈ ಪತ್ರದೊಂದಿಗೆ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

(ಸುಮತಿ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 856
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ : 10.03.2020.
ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರಂ.ಸ.	ಪ್ರಶ್ನೆ	ಉತ್ತರ
ಅ)	ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಹೋಬಳಿಯ ಬೂದಿಹಾಳ ಗ್ರಾಮದಲ್ಲಿ ಲಭ್ಯವಿರುವ ಸರ್ಕಾರಿ ಜಮೀನನ್ನು ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಪ್ರಸ್ತುತ ವಿಜಯಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ಹೋಬಳಿಯ ಬೂದಿಹಾಳ ಗ್ರಾಮದಲ್ಲಿ ಕೈಗಾರಿಕಾ ವಸಾಹತುವನ್ನು ಅಭಿವೃದ್ಧಿಪಡಿಸಲು ಯಾವುದೇ ಸರ್ಕಾರಿ ಜಮೀನನ್ನು ಗುರುತಿಸಿರುವುದಿಲ್ಲ. ಆದರೆ, ಕೈಗಾರಿಕಾ ವಸಾಹತು ಸ್ಥಾಪನೆ ಸಂಬಂಧ ಕನಿಷ್ಟ 10 ಎಕರೆ ಜಮೀನು ಮಂಜೂರು ಮಾಡುವಂತೆ ಕೋರಿ, ಜಿಲ್ಲಾಧಿಕಾರಿ/ತಹಶೀಲ್ದಾರ್‌ರವರಿಗೆ ನಿಗಮದಿಂದ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಸದರಿ ಸ್ಥಳದಲ್ಲಿ ಕೈಗಾರಿಕಾ ಮಳಿಗೆಗಳನ್ನು ಸ್ಥಾಪಿಸಲು ಸಣ್ಣ ಕೈಗಾರಿಕೋದ್ಯಮಿಗಳಿಂದ ಬೇಡಿಕೆ ಬಂದಿರುವುದು ನಿಜವೇ;	ಪ್ರಸ್ತುತ ಸದರಿ ಸ್ಥಳದಲ್ಲಿ ಕೈಗಾರಿಕಾ ಮಳಿಗೆಗಳನ್ನು ಸ್ಥಾಪಿಸುವ ಬಗ್ಗೆ ಯಾವುದೇ ಸಣ್ಣ ಕೈಗಾರಿಕಾ ಸಂಘಗಳಿಂದಾಗಲೀ / ಸಣ್ಣ ಕೈಗಾರಿಕೋದ್ಯಮಿಗಳಿಂದಾಗಲೀ ಬೇಡಿಕೆ ಸ್ವೀಕೃತಗೊಂಡಿರುವುದಿಲ್ಲ. ಮುಂದೇನಾದರೂ, ಕೈಗಾರಿಕಾ ವಸಾಹತು ಸ್ಥಾಪನೆಗೆ ಬೇಡಿಕೆ ಸ್ವೀಕೃತಗೊಂಡಲ್ಲಿ, ಬೇಡಿಕೆ ಸಮೀಕ್ಷೆ ನಡೆಸಿ, ಜಮೀನಿನ ಲಭ್ಯತೆ ಹಾಗೂ ನಿಗಮದ ಆರ್ಥಿಕ ಸಂಪನ್ಮೂಲಗಳ ಆಧಾರದ ಮೇರೆಗೆ ಕೈಗಾರಿಕಾ ವಸಾಹತು ಸ್ಥಾಪನೆ ಬಗ್ಗೆ ಮುಂದಿನ ಅವಶ್ಯ ಕ್ರಮ ಜರುಗಿಸಲಾಗುವುದು.
ಇ)	ಈ ಸ್ಥಳದಲ್ಲಿ ಯಾವಾಗ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಯಾವ ಕಾಲಮಿತಿಯೊಳಗೆ ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸಲಾಗುವುದು;	ಸೂಕ್ತ ಜಮೀನು ಮಂಜೂರಾದಲ್ಲಿ, ಕೈಗಾರಿಕಾ ವಸಾಹತು ಸ್ಥಾಪನೆಗೆ ಬೇಡಿಕೆ ಸ್ವೀಕೃತಗೊಂಡಲ್ಲಿ, ಬೇಡಿಕೆ ಸಮೀಕ್ಷೆ ನಡೆಸಿ, ಜಮೀನಿನ ಲಭ್ಯತೆ ಹಾಗೂ ನಿಗಮದ ಆರ್ಥಿಕ ಸಂಪನ್ಮೂಲಗಳ ಆಧಾರದ ಮೇರೆಗೆ ಕೈಗಾರಿಕಾ ವಸಾಹತು ಸ್ಥಾಪನೆ ಬಗ್ಗೆ ಮುಂದಿನ ಅವಶ್ಯ ಕ್ರಮ ಜರುಗಿಸಲಾಗುವುದು.
ಈ)	ಈ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು;	ಪ್ರಶ್ನೆಯ ಕ್ರಮಾಂಕ (ಇ)ನಲ್ಲಿನ ಉತ್ತರವು ಅನ್ವಯವಾಗುತ್ತದೆ.

ಸಿಐ 38 ಸಿಎಸ್‌ಸಿ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು –560001. ದೂ. 22034319

ಸಂಖ್ಯೆ: ಸಿಐ 39 ಸಿಎಸ್‌ಸಿ 2020 ದಿನಾಂಕ: 09.03.2020.

03
U/S
10/03/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ. & ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು–01.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನಸೌಧ, ಬೆಂಗಳೂರು–01.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನಸಭೆ ಸದಸ್ಯರಾದ ಶ್ರೀ ಅಜಯ್ ಧರ್ಮ ಸಿಂಗ್ ಡಾ॥ (ಜೇವರ್ಗಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1071ಕ್ಕೆ ಉತ್ತರಿಸುವ ಬಗ್ಗೆ.

* * * * *

ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಅಜಯ್ ಧರ್ಮ ಸಿಂಗ್ ಡಾ॥ (ಜೇವರ್ಗಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1071ಕ್ಕೆ ದಿನಾಂಕ: 10.03.2020 ರಂದು ಕರ್ನಾಟಕ ವಿಧಾನಸಭೆ, ವಿಧಾನಸೌಧ, ಬೆಂಗಳೂರು, ಇಲ್ಲಿ ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಯ ಉತ್ತರಗಳ 100 ಪ್ರತಿಗಳನ್ನು ಈ ಪತ್ರದೊಂದಿಗೆ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Sumathi S 9/3/2020
(ಸುಮತಿ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1071
ಸದಸ್ಯರ ಹೆಸರು : ಶ್ರೀ ಅಜಯ್ ಧರ್ಮ ಸಿಂಗ್ ಡಾ॥ (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ : 10.03.2020.
ಉತ್ತರಿಸುವವರು : ಮುಖ್ಯಮಂತ್ರಿಗಳು

ಕ್ರಂ.ಸ.	ಪ್ರಶ್ನೆ	ಉತ್ತರ
ಅ)	ಜೇವರ್ಗಿ ತಾಲ್ಲೂಕಿನಲ್ಲಿ ನಿರುದ್ಯೋಗ ನಿವಾರಣೆಗಾಗಿ ಹೊಸದಾಗಿ ಸಣ್ಣ ಕೈಗಾರಿಕಾ ಘಟಕಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಸಲುವಾಗಿ, ಜೇವರ್ಗಿ ತಾಲ್ಲೂಕಿನ ಜೇವರ್ಗಿಯಲ್ಲಿ ಈಗಾಗಲೇ 10 ಎಕರೆ ವಿಸ್ತೀರ್ಣದ ಜಮೀನಿನಲ್ಲಿ **1995**ರಲ್ಲಿ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕೈಗಾರಿಕಾ ವಸಾಹತು ವನ್ನು ಸ್ಥಾಪಿಸಿದ್ದು, ಅದರಲ್ಲಿ ವಿವಿಧ ಮಾದರಿಯ 21 ಸಂಖ್ಯೆ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಅರ್ಹ ಉದ್ದಿಮೆದಾರರಿಗೆ ಹಂಚಿಕೆ ಮಾಡಿರುತ್ತದೆ. ಪ್ರಸ್ತುತ, ನಿಗಮವು ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಪ್ರದೇಶಗಳಲ್ಲಿ ಹೊಸ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮದಂತೆ, ಜೇವರ್ಗಿ ತಾಲ್ಲೂಕಿನಲ್ಲಿಯೂ ಸಹ ಹೊಸ ಕೈಗಾರಿಕಾ ವಸಾಹತು ಸ್ಥಾಪನೆಗೆ ಕನಿಷ್ಠ 10 ಎಕರೆ ಜಮೀನನ್ನಾದರೂ ಮಂಜೂರು ಮಾಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ಸೂಕ್ತ ಜಮೀನು ಮಂಜೂರಾದ ತದನಂತರದಲ್ಲಿ ಬೇಡಿಕೆ ಸಮೀಕ್ಷೆ ನಡೆಸಿ, ಜಮೀನಿನ ಲಭ್ಯತೆ ಹಾಗೂ ನಿಗಮದ ಆರ್ಥಿಕ ಸಂಪನ್ಮೂಲಗಳ ಆಧಾರದ ಮೇರೆಗೆ ಕೈಗಾರಿಕಾ ವಸಾಹತು ಸ್ಥಾಪನೆ ಬಗ್ಗೆ ಮುಂದಿನ ಅವಶ್ಯ ಕ್ರಮ ಜರುಗಿಸಲಾಗುವುದು.
ಇ)	ಹೊಸದಾಗಿ ಘೋಷಣೆಯಾಗಿರುವ ಯಡ್ರಾಮಿ ತಾಲ್ಲೂಕಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆಗೆ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಪ್ರಸ್ತುತ, ಯಡ್ರಾಮಿ ತಾಲ್ಲೂಕಿನಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಯಾವುದೇ ಸಂಘ ಸಂಸ್ಥೆಗಳಿಂದ ಅಥವಾ ಪ್ರಾಧಿಕಾರದಿಂದ ಪ್ರಸ್ತಾವನೆ ಸ್ವೀಕೃತಗೊಂಡಿರುವುದಿಲ್ಲ. ಮುಂದೆ ಕೈಗಾರಿಕಾ ವಸಾಹತು ಸ್ಥಾಪನೆ ಬಗ್ಗೆ ಉದ್ದಿಮೆದಾರರಿಂದ ಬೇಡಿಕೆ ಸ್ವೀಕೃತಗೊಂಡಲ್ಲಿ, ಬೇಡಿಕೆ ಸಮೀಕ್ಷೆ ನಡೆಸಿ, ಜಮೀನಿನ ಲಭ್ಯತೆ ಹಾಗೂ ನಿಗಮದ ಆರ್ಥಿಕ ಸಂಪನ್ಮೂಲಗಳ ಆಧಾರದ ಮೇರೆಗೆ ಕೈಗಾರಿಕಾ ವಸಾಹತು ಸ್ಥಾಪನೆ ಬಗ್ಗೆ ಮುಂದಿನ ಅವಶ್ಯ ಕ್ರಮ ಜರುಗಿಸಲಾಗುವುದು.
ಈ)	ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?	ಪ್ರಶ್ನೆಯ ಕ್ರಮಾಂಕ (ಇ)ನಲ್ಲಿನ ಉತ್ತರವು ಅನ್ವಯವಾಗುತ್ತದೆ.

ಸಿಐ 39 ಸಿಎಸ್‌ಸಿ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 13 ಡಬ್ಲ್ಯೂಬಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 09.03.2020

H7
4/5
10/3/20

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:32ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ದೇವಾನಚಿದ್ ಫುಲಸಿಂಗ್ ಚವಾಣ್ (ನಾಗಠಾಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:32ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಡನೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ತಾಂತ್ರಿಕ-5)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 32
ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್(ನಾಗಠಾಣ)
ಉತ್ತರಿಸುವ ದಿನಾಂಕ : 10/03/2020
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ	ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶ್ರೀ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆ ಮಂಜೂರು ಆಗಿರುವುದು ನಿಜವೇ;	ಶ್ರೀ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ರೂ.2639.60 ಕೋಟಿಗಳ (2018–19ನೇ ಸಾಲಿನ ದರಪಟ್ಟಿರನ್ವಯ) ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
ಆ	ಹಾಗಿದ್ದಲ್ಲಿ, ಸದರಿ ಯೋಜನೆ ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು;	
ಇ	ಶ್ರೀ ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುವುದು;	
ಈ	ಈ ಯೋಜನೆಯ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ತಗಲುವ ವೆಚ್ಚವೆಷ್ಟು;	
ಉ	ಸದರಿ ಯೋಜನೆಯ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ಹಾಗೂ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು;	

ಸಂಖ್ಯೆ: ಜಸಂಇ 13 ಡಬ್ಲ್ಯೂಬಿಎಂ 2019

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಹೆಚ್‌ಡಿ 19 ಪಿಬಿಎಲ್ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:09.03.2020.

136
10/3/20

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1090ಗೆ ಉತ್ತರಿಸುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ:15ನೇವಿಸ/6ಅ/ಚುಗು–ಚುರ–ಪ್ರಶ್ನೆ/04/2020, ದಿ:29.02.2020.

*

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1090ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

9/3/20
[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್‌ವೆಚ್ಚ).

ಕರ್ನಾಟಕ ವಿಧಾನಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1090**
2] ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ)
3] ಉತ್ತರಿಸುವ ದಿನಾಂಕ : 10.03.2020.
4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹೊಳೆನರಸೀಪುರ ನಗರದಲ್ಲಿ ಸುಮಾರು 32 ವರ್ಷಗಳ ಹಿಂದೆ ನಿರ್ಮಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯ ಕಛೇರಿಗಳು ಸಂಪೂರ್ಣ ಶಿಥಿಲಗೊಂಡಿರುವುದು ನಿಜವೇ;	ಹೌದು
ಆ)	ಹೊಳೆನರಸೀಪುರ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯ ಕಛೇರಿಗಳು ಪ್ರಸ್ತುತ ಹೊಳೆನರಸೀಪುರ ಪ್ರವಾಸಿ ಮಂದಿರದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ಹೌದು. ಹೊಳೆನರಸಿಪುರ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯ ಕಛೇರಿಗಳನ್ನು ನೆಲಸಮಗೊಳಿಸಲು ಅನುಮತಿ ನೀಡಿರುವುದರಿಂದ ಸದರಿ ಕಟ್ಟಡಗಳನ್ನು ತಾತ್ಕಾಲಿಕವಾಗಿ ಪ್ರವಾಸಿ ಮಂದಿರಕ್ಕೆ ಸ್ಥಳಾಂತರಿಸಲಾಗಿರುತ್ತದೆ.
ಇ)	ಹಾಗಿದ್ದಲ್ಲಿ, ಸುಮಾರು 32 ವರ್ಷಗಳ ಹಿಂದೆ ನಿರ್ಮಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯ ಕಛೇರಿಗಳಿಗೆ ಹೊಸ ಕಟ್ಟಡವನ್ನು ನಿರ್ಮಿಸಲು 2020-21ನೇ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ಅನುದಾನದ ಲಭ್ಯತೆಯ ಅನುಸಾರ ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಹೆಚ್‌ಡಿ 19 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು.

ಕರ್ನಾಟಕ ಸರ್ಕಾರ

ಹೆಚ್‌ಡಿ 17 ಇಎಫ್‌ಎಸ್ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:09.03.2020.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ,
ಬೆಂಗಳೂರು

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮಂಜುನಾಥ ಹೆಚ್.ಪಿ (ಹುಣಸೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1105ಗೆ ಉತ್ತರಿಸುವ ಕುರಿತು.

ಉಲ್ಲೇಖ: ಪತ್ರ ಸಂಖ್ಯೆ:ಪ್ರಶಾವಿಸ:15ನೇವಿಸ//6ಅ/ಚುಗು–ಚುರ.ಪ್ರಶ್ನೆ/04/2020, ದಿ:29.02.2020.

*

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮಂಜುನಾಥ ಹೆಚ್.ಪಿ (ಹುಣಸೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1105ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ(ಪೊಲೀಸ್‌ವೆಚ್ಚ).

ಕರ್ನಾಟಕ ವಿಧಾನಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1105
2] ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ (ಹುಣಸೂರು)
3] ಉತ್ತರಿಸುವ ದಿನಾಂಕ : 10.03.2020
4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹುಣಸೂರು ಪಟ್ಟಣದ ಅತೀಸೂಕ್ಷ್ಮ ಪ್ರದೇಶದಲ್ಲಿ ಹಾಗೂ ಮುಖ್ಯ ವೃತ್ತಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಶಾಸಕರ ಅನುದಾನದಡಿಯಲ್ಲಿ ಅಳವಡಿಸಲಾಗಿದ್ದ ಸಿ.ಸಿ.ಕ್ಯಾಮರಾಗಳನ್ನು ತೆರವುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ ಕ್ಯಾಮರಾಗಳು ಈ ಹಿಂದೆ ಅಳವಡಿಸಿದ್ದ ಸ್ಥಳದಲ್ಲೆ ಇದ್ದು, ಯಾವುದೇ ಕ್ಯಾಮರಾಗಳನ್ನು ತೆರವುಗೊಳಸಿರುವುದಿಲ್ಲ.
ಆ)	ಬಂದಿದ್ದಲ್ಲಿ, ತೆರವುಗೊಳಿಸಲು ಕಾರಣಗಳೇನು;	ಉದ್ಭವಿಸುವುದಿಲ್ಲ.
ಇ)	ಹುಣಸೂರು ಪಟ್ಟಣದ ಅರಕ್ಷಕ ಠಾಣೆಯಲ್ಲಿದ್ದ ಸಿ.ಸಿ.ಟಿ.ವಿ ನಿರ್ವಹಣಾ ಕೊಠಡಿಯನ್ನು ಉದ್ದೇಶಪೂರ್ವಕವಾಗಿ ತೆರವುಗೊಳಿಸಲಾಗಿದ್ದು ಅಪರಾಧ ಪ್ರಕರಣಗಳು ಹೆಚ್ಚಾಗಲು ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹುಣಸೂರು ಪಟ್ಟಣದ ಆರಕ್ಷಕ ಠಾಣೆಯಲ್ಲಿದ್ದ ನಿರ್ವಹಣಾ ಕೊಠಡಿಯನ್ನು ಪಕ್ಕದಲ್ಲಿನ ಚಿಕ್ಕ ಕೊಠಡಿಗೆ ಸ್ಥಳಾಂತರಿಸಿದ್ದು, ತೆರವುಗೊಳಿಸಿರುವುದಿಲ್ಲ.
ಈ)	ರಾಜ್ಯದಲ್ಲಿ ವಿವಿಧ ಕಡೆ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮರಗಳ ನಿರ್ವಹಣೆಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? (ವಿವರ ನೀಡುವುದು)	ಪೊಲೀಸ್ ಇಲಾಖೆಯು ರಾಜ್ಯದಲ್ಲಿ ವಿವಿಧೆಡೆ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳ ನಿರ್ವಹಣೆಯನ್ನು ಕೆಟಿಪಿಪಿ ಕಾಯ್ದೆಯಡಿ ನಿಯಮಾನುಸಾರ ಟೆಂಡರ್ ಕರೆದು ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಹೆಚ್‌ಡಿ 17 ಇಎಫ್‌ಎಸ್ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 91 ಎಫ್‌ಸಿ-2 / 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಬೆಂಗಳೂರು. ದಿನಾಂಕ:04-03-2020

101
U/S
10/03/2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ, ವಿಧಾನಸೌಧ,
ಬೆಂಗಳೂರು

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ.ಸಾ.ರಾ.ಮಹೇಶ್, (ಕೃಷ್ಣರಾಜನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1096ಕ್ಕೆ ಉತ್ತರಿಸುವ ಬಗ್ಗೆ

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭೆ ಸದಸ್ಯರಾದ ಶ್ರೀ. ಸಾ.ರಾ.ಮಹೇಶ್, (ಕೃಷ್ಣರಾಜನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1096ಕ್ಕೆ ಕನ್ನಡ ಭಾಷೆಯ 100 ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

Gayathri.K
(ಕೆ.ಗಾಯಿತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಲೋ.ಆ.ಕೋ)

04/3/2020

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1096
2.	ಸದಸ್ಯರ ಹೆಸರು	:	ಶ್ರೀ. ಮಹೇಶ್ ಸಾ.ರಾ. (ಕೃಷ್ಣರಾಜನಗರ)
3.	ಉತ್ತರಿಸಬೇಕಾದ ದಿನಾಂಕ	:	10-03-2020
4.	ಉತ್ತರಿಸುವ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

ಕ್ರಸಂ.	ಪ್ರಶ್ನೆ	ಉತ್ತರ
ಅ	ದಿನಾಂಕ 05/08/2019ರಿಂದೀಚೆಗೆ ಆರ್ಥಿಕ ಇಲಾಖೆಯಿಂದ ರಾಜ್ಯದ ವಿವಿಧ ಇಲಾಖೆಗಳಿಗೆ ಮಾಹೆಯಾನ ಬಿಡುಗಡೆಯಾಗಿರುವ ಹಣ ಭರವಸೆ ಪತ್ರಗಳೆಷ್ಟು (ಇಲಾಖಾವಾರು ಮಾಹಿತಿ ನೀಡುವುದು)	ಆರ್ಥಿಕ ಇಲಾಖೆಯಿಂದ ಆಯವ್ಯಯದಲ್ಲಿ ಒದಗಿಸಿದ ರಾಜ್ಯ ಸರ್ಕಾರದ ಅನುದಾನಕ್ಕೆ ಹಣ ಭರವಸೆ ಪತ್ರಗಳನ್ನು ಬಿಡುಗಡೆ ಮಾಡುವುದನ್ನು ಸರ್ಕಾರದ ಆದೇಶ ಸಂಖ್ಯೆ: FD 03 SOFC 2007, ದಿನಾಂಕ:11.12.2007ರ ಅನುಸಾರ ದಿನಾಂಕ:01.01.2008 ರಿಂದ ಜಾರಿಗೆ ಬರುವಂತೆ ಕೈಬಿಡಲಾಗಿರುತ್ತದೆ. ಪ್ರಸಕ್ತ ಆರ್ಥಿಕ ಇಲಾಖೆಯಿಂದ ಆಯವ್ಯಯದಲ್ಲಿ ಅನುದಾನವನ್ನು ಒದಗಿಸಲಾಗುತ್ತಿದ್ದು, ಸದರಿ ಅನುದಾನವನ್ನು ಇಲಾಖಾ ಹಂತದಲ್ಲಿ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯಿಂದ ಕಾಲಕಾಲಕ್ಕೆ ಅಧಿಕಾರ ಪ್ರತ್ಯಾಯೋಜಿಸಲಾಗುತ್ತಿದೆ.
ಆ	ಈ ಹಣ ಭರವಸೆ ಪತ್ರಗಳನ್ನು ಗುತ್ತಿಗೆದಾರರಿಗೆ ಹಂಚಿಕೆ ಮಾಡಲು ಆರ್ಥಿಕ ಇಲಾಖೆಯಿಂದ ಹೊರಡಿಸಿರುವ ಮಾನದಂಡಗಳೇನು (ಸಂಪೂರ್ಣ ಮಾಹಿತಿ ನೀಡುವುದು);	ಅನ್ವಯಿಸುವುದಿಲ್ಲ
ಇ	ಇಲಾಖೆಯ ಮುಖ್ಯಸ್ಥರುಗಳು ಚಾಚು ತಪ್ಪದೆ ಮಾನದಂಡಗಳನ್ನು ಅನುಸರಿಸಿರುತ್ತಾರೆಯೇ ಎನ್ನುವುದನ್ನು ಆರ್ಥಿಕ ಇಲಾಖೆಯು ಪರಿಶೀಲಿಸಿದೆಯೇ (ಸಂಪೂರ್ಣ ಮಾಹಿತಿ ನೀಡುವುದು);	ಅನ್ವಯಿಸುವುದಿಲ್ಲ

ಈ	ಇಲಾಖೆಯ ಮುಖ್ಯಸ್ಥರು ಸದರಿ ಮಾನದಂಡಗಳನ್ನು ಅನುಸರಿಸದೇ ಇದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು);	ಅನ್ವಯಿಸುವುದಿಲ್ಲ
ಉ	ಇಲಾಖೆಯ ಮುಖ್ಯಸ್ಥರು ಮಾನದಂಡಗಳನ್ನು ಉಲ್ಲಂಘಿಸಿ ಹಣ ಭರವಸೆ ಪತ್ರಗಳನ್ನು ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದಿಂದ ಯಾವ ಕ್ರಮ ಜರುಗಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು)?	ಅನ್ವಯಿಸುವುದಿಲ್ಲ

ಸಂಖ್ಯೆ: FD 91 FC-2/2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ಸನೀಇ 19 LAQ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, 2ನೇ ಮಹಡಿ,
ಬೆಂಗಳೂರು, ದಿನಾಂಕ:05.03.2020

55
U15
10/03/2020

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ವಿಕಾಸ ಸೌಧ, ಬೆಂಗಳೂರು

ಇವರಿಗೆ
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಶ್ರೀ ಶಿವಾನಂದ ಪಾಟೀಲ್, ಮಾನ್ಯ ವಿಧಾನ ಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1065ಕ್ಕೆ ಉತ್ತರಿಸುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಶ್ರೀ ಶಿವಾನಂದ ಪಾಟೀಲ್, ಮಾನ್ಯ ವಿಧಾನ ಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1065ರ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ಆದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಎಂ.ಎಸ್. ಜ್ಯೋತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1065
2. ಸದಸ್ಯರ ಹೆಸರು : ಶ್ರೀ ಶಿವಾನಂದ ಪಾಟೀಲ್
3. ಉತ್ತರಿಸಬೇಕಾದ ದಿನಾಂಕ : 10.03.2020
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು.

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ.	ನಬಾರ್ಡ್ ಆರ್.ಐ.ಡಿ.ಎಫ್–25 ರಡಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಲಾಗಿರುವ ಅನುದಾನವೆಷ್ಟು ಹಾಗೂ ಒದಗಿಸಲಾದ ಅನುದಾನದಲ್ಲಿ ಪ್ರಸ್ತಾಪಿಸಲಾದ ಕಾಮಗಾರಿಗಳು ಯಾವುವು.	ಸಣ್ಣ ನೀರಾವರಿ ಇಲಾಖೆಗೆ ನಬಾರ್ಡ್ ಆರ್.ಐ.ಡಿ.ಎಫ್–25 ರಡಿ ರೂ.200.00 ಕೋಟಿಗಳ ಸೆಕ್ಟೋರಲ್ ಅಲೋಕೇಷನ್ ಒದಗಿಸಲಾಗಿದೆ. ಪ್ರಸ್ತಾಪಿಸಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ.	ಪ್ರಸ್ತಾಪಿಸಲಾದ ಕಾಮಗಾರಿಗಳಿಗೆ ನಬಾರ್ಡ್‌ನಿಂದ ಅನುಮೋದನೆ ನೀಡಲಾಗಿದೆಯೇ; ನೀಡದಿದ್ದಲ್ಲಿ, ಆಗಿರುವ ವಿಳಂಬಕ್ಕೆ ಕಾರಣಗಳೇನು;	ಪ್ರಸ್ತಾಪಿಸಲಾದ ಕಾಮಗಾರಿಗಳಿಗೆ ನಬಾರ್ಡ್ ಸಂಸ್ಥೆಯಿಂದ ಅನುಮೋದನೆ ನೀಡಲಾಗಿರುವುದಿಲ್ಲ.
ಇ.	ನಬಾರ್ಡ್ ಆರ್.ಐ.ಡಿ.ಎಫ್–25ರಡಿ ಬಸವನಬಾಗೇವಾಡಿ ವಿಧಾನಸಭಾ ಮತಕ್ಷೇತ್ರದಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾದ ಕಾಮಗಾರಿ ಯಾವುದು ಹಾಗೂ ಅದರ ಅನುಷ್ಠಾನದಲ್ಲಿ ವಿಳಂಬವಾಗಿರುವುಕ್ಕೆ ಕಾರಣಗಳೇನು;	ನಬಾರ್ಡ್ ಆರ್.ಐ.ಡಿ.ಎಫ್–25 ರಡಿ ಬಸವನಬಾಗೇವಾಡಿ ವಿಧಾನ ಸಭಾ ಮತಕ್ಷೇತ್ರದಲ್ಲಿ "Construction of Bandhara near to the Existing box culvert between Benal N.H. to Benal R.C" ಕಾಮಗಾರಿಯನ್ನು ರೂ.100.00 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದ್ದು, ನಬಾರ್ಡ್ ಆರ್.ಐ.ಡಿ.ಎಫ್–25 ರ ಕಾಮಗಾರಿಗಳಿಗೆ ಅನುಮೋದನೆ ನೀಡಿರುವುದಿಲ್ಲ.
ಈ.	ಯಾವ ನಿರ್ಧಿಷ್ಟ ಕಾಲಮಿತಿಯೊಳಗೆ ಟೆಂಡರ್ ಕರೆದು ಪ್ರಸ್ತಾಪಿತ ಕಾಮಗಾರಿಯನ್ನು ಕೈಗೊಳ್ಳಲಾಗುವುದು?	ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: MID 19 LAQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ
ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು.

ಶ್ರೀ ಶಿವಾನಂದ ಪಾಟೀಲ್, ಮಾನ್ಯ ವಿಧಾನ ಸಭಾ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂ:1065ಕ್ಕೆ ಅನುಬಂಧ

Details of the works proposed under RIDF-25 for the year 2019-20

Sl. No.	District	Taluk	Name of work	Estimate cost Rs. In Lakhs
1	2	3	4	5
1	Belgaum	Hukkeri	Improvements to Shiratii KD & Kamatnur Tanks in Hukkeri Tq Belagavi Dist	100.00
2	Belgaum	Hukkeri	Construction of Barrage near Daddi village in Hukkeri Tq Belagavi Dist	100.00
3	Belgaum	Belagavi	Construction of Barrage near Santibastwad village in Tq & Belagavi Dist	100.00
4	Belgaum	Belagavi	Construction of Bridge Cum Barrage near Old Belagavi village in Tq & Belagavi Dist	100.00
5	Belgaum	Bailhongal	Construction of BCB near Hosur village in Savadatti Tq Belagavi Dist	100.00
6	Belgaum	Bailhongal	Construction of Barrage near Somanatti village in Bailhongal Tq Belagavi Dist	100.00
7	Belgaum	Bailhongal	Improvements to Tanks in Nanagundikoppa & Budarakatti village in Bailhongal Tq Belagavi Dist	350.00
8	Belgaum	Bailhongal	Improvements to Tuppada Kere & Hirebellikatte Kere in Doddavada village in Bailhongal Tq Belagavi Dist	300.00
9	Belgaum	Bailhongal	Improvements to Gudikatte Kere & Bidaragaddi Kere in Bailhongal Tq Belagavi Dist	350.00
10	Belgaum	Khanapur	Construction of Barrage near Godholi village in Khanapur Tq Belagavi Dist	100.00
11	Belgaum	Gokak	Construction of Bridge Cum Barrage near Khangaon village in Gokak Tq Belagavi Dist	100.00
12	Belgaum	Ramdurga	Construction of Bandara across Malaprabha river near Halolli village in Ramdurga Tq Belagavi Dist	100.00
13	Belgaum	Savadatti	Construction of Bridge Cum Barrage across local Gadyal halla near Yadravi village in Savadatti Tq Belagavi Dist	100.00
14	Belgaum	Athani	Construction of Bandhara across Hire halla near Kohalli village in Athani Tq Belagavi Dist	100.00
15	Belgaum	Chikkodi	Construction of Bridge cum Bandhara across halla near Galataga village in Chikkodi Tq Belagavi Dist	100.00
16	Belgaum	Raibag	Construction of Bandhara across Hire halla near Kabbur village in Chikkodi Tq Belagavi Dist	100.00
17	Belgaum	Raibag	Providing Lift Irrigation Scheme to Shri Sandarwale & others from Krishana river near Kudachi village in Raibag Tq Belagavi Dist	100.00
18	Belgaum	Athani	Construction of Barrage between Sambargi-Naganur villages across Agrani halla in Kagwad Tq Belagavi Dist	100.00
19	Belgaum	Chikkodi	Providing Lift Irrigation Scheme to Shri Sari Bhiradev from Dudaganga river near Yaxmba village in Chikkodi Tq Belagavi Dist	100.00
20	Belgaum	Belagavi	Construction of Brdige Cum Barrage acros Ballari Nala near Kudachi village in Tq & Belagavi Dist	100.00
21	Belgaum	Gokak	Construction of Bridge Cum Barrage across local nala near Udagatti village in Gokak Tq Belagavi Dist	100.00
22	Dharwad	Hubli	Construction of Bandhara across Bilebal nala near Umachagi village in Hubli Tq Dharwad Dist	100.00
23	Dharwad	Dharwad	Construction of Barrage across Local nala near Gamanagatti village in Dharwad tq Dharwad Dist	100.00
24	Dharwad	Hubli	Construction of Barrage across Kudi halla near Unkal village in Hubli Tq Dharwad Dist	100.00
25	Dharwad	Dharwad	Construction of Bandhara across Tuppari nala near Hangaraki village in Dharwad Tq Dharwad Dist	100.00
26	Dharwad	Kundgol	Construction of BCB near Yeliwal village (Site No.2) in Kundgol Tq Dharwad Dist	100.00

27	Dharwad	Hubli	Protection works to near Hubli Mantur nala in Hubli Tq Dharwad Dist	100.00
28	Dharwad	Kalghatgi	Construction of Barrage across Local nala near Bammigatti village in Kalghatgi Tq Dharwad Dist	100.00
29	Haveri	Hangal	Construction of Barrage across Dharama river near Halekote village in Hangal taluk, Haveri District.	100.00
30	Haveri	Hirekerur	Improvements to Makari tank Rs No. 94 in Hirekerur taluk, Haveri District.	100.00
31	Haveri	Shiggoan	Improvements to Hulikatti Canal in Shiggoan taluk, Haveri District.	100.00
32	Haveri	Haveri	Improvements to Agadi Dodda Kere in Haveri Tq at Haveri Dist	100.00
33	Haveri	Haveri	Improvements to Hombaradi Dodda Kere in Haveri Tq at Haveri Dist	100.00
34	Haveri	Ranebennur	Construction of Bandhara cum Hard Passage for Yalabadagi Halla In Ranebennur Tq Haveri Dist	100.00
35	Gadag	Ron	Construction of Bandhara across Halla Near Mugali Village Ron Tq Gadag Dist	100.00
36	Gadag	Gadag	Construction of BCB across Halla Near Kurathkoti-Neelagund Village In Gadag Tq Gadag Dist	100.00
37	Gadag	Shirahatti	Construction of Bandhara across Halla Near Bellatti Village Shirahatti Tq Gadag Dist	100.00
38	Gadag	Gadag	Construction of Bandhara across Yeri halla Near Lakkundi Village in Gadag Tq Gadag Dist	50.00
39	Gadag	Gadag	Construction of Bandhara across Gouri halla Near Lakkundi Village in Gadag Tq Gadag Dist	50.00
40	Uttara Kannada	Joida	Construction of Bandhara near Anamod in Joida Tq (U.K Dist)	100.00
41	Uttara Kannada	Karwar	Construction of Protection wall near Kalikadevi Temple in Nandangadda village in Karwar Tq (U.K Dist)	100.00
42	Uttara Kannada	Kumta	Construction Protection wall and pitching works to right bank of Aghanashini river near Kurve of Kudla in Antravalli Village in Divagi Panchayat in Kumta Tq (U.K Dist)	100.00
43	Uttara Kannada	Bhatkal	Construction of Kharland near Alvekodi Bridge in Bhatkal Tq (U.K Dist)	100.00
44	Uttara Kannada	Siddapur	Construction of Bridge cum Bandhara near Karegotagi in Kangod Panchayat in Siddapur Taluk (U.K dist)	100.00
45	Uttara Kannada	Yellapur	Construction of Bridge cum Barrage across Jogeshwari Halla near Karadi Hayavali Sy.No.72 at Chigalli Panchayat in Mundgod Tq (U.K Dist)	100.00
46	Bagalkot	Mudhol	Construction of Barrage across Nala near Mirji.	125.00
47	Bagalkot	Mudhol	Construction of Bridge cum Bandhara across nala between farm of Sri.Nashi on road of Kesarkoppa & Bisanal village	100.00
48	Bagalkot	Bilagi	Constrction of Bandhara near Bilagi	50.00
49	Bagalkot	Badami	Construction of Bandhara across nala near Neer- budihal village	50.00
50	Bagalkot	Jamakhandi	Improvements to LIS at Adihudi-Todalbagi	100.00
51	Vijaypur	Sindagi	Construction of Bridge cum Barrage across nala on Almel-Gondagi Road	100.00
52	Vijaypur	Vijaypur	Construction of seies of Check dams across nala Near Tajpur-H	100.00
ಆ)	ಕುಡಿಯಲು ಮತ್ತು ರೈತರ ಬೆಳೆಗಳಿಗೆ ನೀರಿಲ್ಲದೆ ಸಮಸ್ಯೆ ಯಾಗುತ್ತಿರುವುದರ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಪ್ರತಿ ವರ್ಷವು ಮುಂಗಾರು ಹಂಗಾಮಿನ ನಂತರ ಲಭ್ಯವಿರುವ ನೀರನ್ನು ಮಿತವಾಗಿ ಬಳಸಿ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಮಾತ್ರ ಕಾಯ್ದಿರಿಸಿ ಪ್ರಾದೇಶಿಕ ಆಯುಕ್ತರ ನಿರ್ದೇಶನದಂತೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ನದಿ ಬರಿದಾಗುವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಮಹಾರಾಷ್ಟ್ರ ಸರ್ಕಾರದಿಂದ ಮಹಾರಾಷ್ಟ್ರ ರಾಜ್ಯದ ಅಣೆಕಟ್ಟುಗಳಿಂದ ಕೃಷ್ಣಾ ನದಿಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಈ ಹಿಂದಿನ ವರ್ಷಗಳಲ್ಲಿ ಈ ಕೆಳಗಿನಂತೆ ಬೇಸಿಗೆ ಸಮಯದಲ್ಲಿ ನೀರನ್ನು ಮಹಾರಾಷ್ಟ್ರ ರಾಜ್ಯ ವಾರಣಾ ಜಲಾಯದಿಂದ ಹರಿಸಿಕೊಳ್ಳಲಾಗುತ್ತಿದೆ. ವಿವರಗಳು ಈ ಕೆಳಗಿನಂತಿವೆ:

(ಟಿ.ಎಂ.ಸಿ.ಗಳಲ್ಲಿ)

ವರ್ಷ	ಕರ್ನಾಟಕ ರಾಜ್ಯದ ಮನವಿ	ಮಹಾರಾಷ್ಟ್ರ ರಾಜ್ಯದಿಂದ ಬಿಟ್ಟ ನೀರು	ಅವಧಿ
2004	1.00	1.00	13/4/2004 ರಿಂದ 27/4/2004
2005	1.00	1.00	11/5/2005 ರಿಂದ 25/5/2005
2006	2.00	2.00	19/4/2006 ರಿಂದ 18/5/2006
2009	2.00	1.50	4/5/2009 ರಿಂದ 20/5/2009
2012	2.00	1.33	5/5/2012 ರಿಂದ 30/5/2012
2013	2.00	1.50	5/6/2013 ರಿಂದ 11/6/2013
2016	3.00	2.00	25/4/2016 ರಿಂದ 13/5/2016
2017	–	2.00	11/4/2017 ರಿಂದ 29/4/2017
		2.50	21/5/2017 ರಿಂದ 5/6/2017

2017ರ ನಂತರ ಮಹಾರಾಷ್ಟ್ರ ರಾಜ್ಯದಿಂದ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿಗಾಗಿ ನೀರನ್ನು ಹರಿ ಬಿಟ್ಟಿರುವುದಿಲ್ಲ.

ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಡಿ ನೀರಿನ ಒಳಹರಿವು ಹಾಗೂ ಸಂಗ್ರಹಣೆ ಆಧರಿಸಿ ಪ್ರತಿ ವರ್ಷದ ಜೂನ್ ತಿಂಗಳ ಅಂತ್ಯದವರೆಗೆ ಜಲಾಶಯಗಳು ಅವಲಂಬಿತ ಕುಡಿಯುವ ನೀರಿನ ಪೂರೈಕೆಗೆ ಯಾವುದೇ ತೊಂದರೆ ಆಗದಂತೆ ನೀರಿನ ಸಂಗ್ರಹಣೆ ಕಾಯ್ದುಕೊಳ್ಳಲಾಗುತ್ತಿದೆ.

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಇ)	ಶಾಶ್ವತ ಪರಿಹಾರಕ್ಕೆ ಬೇಸಿಗೆ ಅವಧಿಯಲ್ಲಿ ಕೋಯ್ನಾ ಜಲಾಶಯದಿಂದ ನೀರು ಹರಿಸಲು ಮಹಾರಾಷ್ಟ್ರ ರಾಜ್ಯದೊಂದಿಗೆ ಯಾವ ಒಪ್ಪಂದ ಮಾಡಿಕೊಳ್ಳಲಾಗಿದೆ; ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? (ಮಾಹಿತಿ ಒದಗಿಸುವುದು)	ಬೇಸಿಗೆ ಅವಧಿಯಲ್ಲಿ ಕೋಯ್ನಾ ಜಲಾಶಯದಲ್ಲಿ ಕೃಷ್ಣಾ ನದಿಗೆ ನೀರು ಹರಿಸುವ ಕುರಿತಂತೆ ಮಹಾರಾಷ್ಟ್ರ ಸರ್ಕಾರವು "ನೀರಿಗೆ ನೀರು ಹರಿಸುವ" ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಬೇಸಿಗೆ ಅವಧಿಯಲ್ಲಿ ಕೋಯ್ನಾ ಜಲಾಶಯದಿಂದ ಹರಿಸಿದಲ್ಲಿ 4.00 ಟಿ.ಎಂ.ಸಿ. ನೀರಿಗೆ 4.00 ಟಿ.ಎಂ.ಸಿ. ನೀರನ್ನು ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆಯಿಂದ ಎತ್ತಿ ಮಹಾರಾಷ್ಟ್ರ ರಾಜ್ಯದ ಜತ್ತ ತಾಲ್ಲೂಕಿಗೆ ಹರಿಸಿ ಕೊಡಲು ಮಹಾರಾಷ್ಟ್ರ ರಾಜ್ಯವು ಬೇಡಿಕೆ ಇಟ್ಟಿದ್ದು, ಸರ್ಕಾರದ ಮಟ್ಟದಲ್ಲಿ ಪರಿಶೀಲನೆ ಹಂತದಲ್ಲಿದೆ..

ಸಂಖ್ಯೆ: ಜಸಂಇ 7 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 87 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:10-03-2020.

125
10/3/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ರಾಮಪ್ಪ ಎಸ್. (ಹರಿಹರ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:667ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ರಾಮಪ್ಪ ಎಸ್. (ಹರಿಹರ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:667ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	667
ಸದಸ್ಯರ ಹೆಸರು	:	ಶ್ರೀ ರಾಮಪ್ಪ ಎಸ್. (ಹರಿಹರ)
ಉತ್ತರಿಸಬೇಕಾದ ದಿನಾಂಕ	:	10-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕಳೆದ ಸಾಲಿನಲ್ಲಿ ಪುರಸಭೆ ಹಾಗೂ ನಗರಸಭೆಗಳಿಗೆ ಎಸ್.ಎಫ್.ಸಿ ಗ್ರ್ಯಾಂಟ್ (ವಿಶೇಷ ಅನುದಾನ) ಬಿಡುಗಡೆ ಮಾಡಿಆದೇಶ ಹೊರಡಿಸಿರುವುದಕ್ಕೆ ಪ್ರಸ್ತುತ ತಡೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮಂಜೂರು ಮಾಡಿದ್ದ ಎಸ್.ಎಫ್.ಸಿ ವಿಶೇಷ ಅನುದಾನದ ಪೈಕಿ ಆರ್ಥಿಕ ಇಲಾಖೆಯ ನಿರ್ದೇಶನದನ್ವಯ ರೂ.416.75 ಕೋಟಿಗಳ ವಿಶೇಷ ಅನುದಾನವನ್ನು ಸರ್ಕಾರದ ಪತ್ರ ಸಂಖ್ಯೆ: ನಅಇ 222 ಎಸ್.ಎಫ್.ಸಿ 2019, ದಿ:13-09-2019 ರಲ್ಲಿ ತಡೆಹಿಡಿಯಲಾಗಿರುತ್ತದೆ.
(ಆ)	ಬಂದಿದ್ದಲ್ಲಿ, ಮಂಜೂರಾದ ಅನುದಾನ ಯಾವಾಗ ಬಿಡುಗಡೆ ಮಾಡಲಾಗುವುದು;	ತಡೆಹಿಡಿಯಲಾಗಿರುವ ಅನುದಾನವನ್ನು ಮುಂದುವರೆಸಲು ಆರ್ಥಿಕ ಇಲಾಖೆಯು ಸಹಮತಿಸಿದ ತಕ್ಷಣ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು
(ಇ)	ಪುರಸಭೆ ಮತ್ತು ನಗರಸಭೆಗಳಲ್ಲಿ ಅಭಿವೃದ್ಧಿ ಕಾರ್ಯ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ತಡೆಹಿಡಿಯಲಾಗಿರುವ ಅನುದಾನವನ್ನು ಮುಂದುವರೆಸಲು ಆರ್ಥಿಕ ಇಲಾಖೆಯು ಸಹಮತಿಸಿದ ತಕ್ಷಣ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು

ಕಡತ ಸಂಖ್ಯೆ: ನಅಇ 87 ಎಸ್.ಎಫ್.ಸಿ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 75 ಸಿಎಸ್ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:09-03-2020

28
9/3
10/3/20

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನಸಭೆ
ವಿಧಾನ ಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ ನ್ (ಶ್ರವಣಬೆಳಗೊಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:138ಕ್ಕೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಬಾಲಕೃಷ್ಣ ಸಿ ನ್ (ಶ್ರವಣಬೆಳಗೊಳ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:138ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,
ಲಲಿತಾಬಾಯಿ. ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	138
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ)
ವಿಷಯ	:	ಸ್ವಚ್ಛ ಭಾರತ್ ಯೋಜನೆ
ಉತ್ತರಿಸಬೇಕಾದ ದಿನಾಂಕ	:	10-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಸ್ವಚ್ಛ ಭಾರತ್ ಯೋಜನೆಯಡಿ ರಾಜ್ಯದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ: (ವಿವರ ನೀಡುವುದು)	ಕೇಂದ್ರ ಹಾಗೂ ರಾಜ್ಯ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು ಈ ಕೆಳಕಂಡಂತಿದೆ. • ವೈಯಕ್ತಿಕ ಶೌಚಾಲಯಗಳ ನಿರ್ಮಾಣ. • ಸಾರ್ವಜನಿಕ/ಸಮುದಾಯ ಶೌಚಾಲಯಗಳ ನಿರ್ಮಾಣ. • ಐ.ಇ.ಸಿ ಕಾರ್ಯಕ್ರಮಗಳು. • ಸಾಮರ್ಥ್ಯಾಭಿವೃದ್ಧಿ • ಘನತ್ಯಾಜ್ಯ ವಸ್ತುಗಳ ವೈಜ್ಞಾನಿಕ ನಿರ್ವಹಣೆ.
ಆ)	ಈ ಯೋಜನೆಯಡಿ ಹಾಸನ ಜಿಲ್ಲೆ ಮತ್ತು ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಗತಿಯ ವರದಿಯನ್ನು ಜಿಲ್ಲಾಡಳಿತವು ಸರ್ಕಾರಕ್ಕೆ ಸಲ್ಲಿಸಿದೆಯೇ	ಹೌದು, ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಹಾಸನ ಜಿಲ್ಲೆಯ ನಗರಸ್ಥಳೀಯ ಸಂಸ್ಥೆಗಳು ಸಾಧಿಸಿರುವ ಪ್ರಗತಿಯ ವರದಿಯನ್ನು ಮಾಹೆಯಾನ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ http://swachhbharaturban.gov.in ಹಾಗು ರಾಜ್ಯ ಸರ್ಕಾರದ ಕೆ.ಎಂ.ಡಿ.ಎಸ್ ವೆಬ್‌ಪೋರ್ಟಲ್ (http://www.mrc.gov.in/CMSMTDP/dmawelcome.do) ಗಳಲ್ಲಿ ಅಪ್‌ಡೇಟ್ ಮಾಡಲಾಗುತ್ತಿದೆ.
ಇ)	ಹಾಗಿದ್ದಲ್ಲಿ ವರದಿಯ ಪ್ರತಿಯನ್ನು ನೀಡುವುದು?	ಕೇಂದ್ರ ಹಾಗು ರಾಜ್ಯ ಸರ್ಕಾರದ ವೆಬ್‌ಪೋರ್ಟಲ್ ಗಳಲ್ಲಿ ಅಪ್‌ಡೇಟ್ ಮಾಡಿರುವ ಫೆಬ್ರವರಿ 2020 ರ ಮಾಹೆಯ ಪ್ರಗತಿ ವರದಿಯ ಪ್ರತಿ ಲಗತ್ತಿಸಿದೆ.

ಸಂಖ್ಯೆ: ನಅಇ 75 ಸಿಎಸ್ಎಸ್ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 11 ಡಬ್ಲ್ಯೂಎಲ್‌ಎ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:10.03.2020.

88
OIS
10/3/20

ಇವರಿಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ವಿಕಾಸ ಸೌಧ,
ಬೆಂಗಳೂರು–560001.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು–560001.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಲಿಂಗೇಶ ಕೆ.ಎಸ್ (ಬೇಲೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127ಕ್ಕೆ ಉತ್ತರ ಒದಗಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1127/2020, ದಿ:29.02.2020.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಲಿಂಗೇಶ ಕೆ.ಎಸ್ (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ತಮಗೆ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಎನ್.ಕೇಶವಪ್ರಕಾಶ್)
ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ–4)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1127
2.	ಸದಸ್ಯರ ಹೆಸರು	:	ಶ್ರೀ ಲಿಂಗೇಶ ಕೆ.ಎಸ್ (ಬೇಲೂರು)
3.	ಉತ್ತರಿಸಬೇಕಾದ ದಿನಾಂಕ	:	10.03.2020
4.	ಉತ್ತರಿಸುವ ಸಚಿವರು	:	ಜಲಸಂಪನ್ಮೂಲ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ವಿಶ್ವೇಶ್ವರಯ್ಯ ಜಲನಿಗಮದ ವತಿಯಿಂದ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ವಿಭಾಗವಾರು ಕಾಮಗಾರಿಗಳಿಗೆ ಎಷ್ಟು ಟೆಂಡರ್ ಆಹ್ವಾನಿಸಲಾಗಿದೆ (ವಿವರಗಳನ್ನು ನೀಡುವುದು);	ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ 13 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ವಿಭಾಗವಾರು ವಿವರ **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
ಆ)	ಸದರಿ ಜಲನಿಗಮದ ವತಿಯಿಂದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳು ಯಾವುವು (ವಿವರಗಳನ್ನೊಳಗೊಂಡಂತಹ ನಡವಳಿಗಳನ್ನು ನೀಡುವುದು);	ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ 3 ನಿರ್ದೇಶಕರ ಮಂಡಳಿಯ ಸಭೆಗಳು ನಡೆದಿದ್ದು, ಸದರಿ ಸಭೆಗಳಲ್ಲಿ ಒಟ್ಟಾರೇ 10 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. 3 ಸಂಖ್ಯೆ ನಡುವಳಿಗಳ ಪ್ರತಿಗಳನ್ನು ಒದಗಿಸಲಾಗಿದೆ. ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.
ಇ)	ಸದರಿ ಜಲನಿಗಮದ ವತಿಯಿಂದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ನಡೆದಿರುವ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದನೆಗೊಂಡಿರುವ ಹೆಚ್ಚುವರಿ ಆರ್ಥಿಕ ಹೊರೆಯ ಪ್ರಸ್ತಾವನೆಗಳೆಷ್ಟು ಹಾಗೂ ಆರ್ಥಿಕ ಹೊರೆ ಎಷ್ಟು (ಸಂಪೂರ್ಣ ವಿವರಗಳನ್ನು ನೀಡುವುದು);	ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ನಡೆದಿರುವ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯ ಪ್ರಸ್ತಾವನೆಗಳನ್ನು ಮಂಡಿಸಿ ಅನುಮೋದನೆ ಪಡೆದಿರುವುದಿಲ್ಲ.
ಈ)	ವಿಶ್ವೇಶ್ವರಯ್ಯ ಜಲನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಲ್ಲಿ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ಅನುಮೋದನೆಗೊಂಡಿರುವ ಟೆಂಡರ್‌ಗಳು ಎಷ್ಟು ಹಾಗೂ ಹೆಚ್ಚುವರಿ ಆರ್ಥಿಕ ಹೊರೆ ಪರಿಣಾಮದ ಪ್ರಸ್ತಾವನೆಗಳೆಷ್ಟು (ವಿವರಗಳನ್ನು ನೀಡುವುದು);	ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಲ್ಲಿ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ಅನುಮೋದನೆಗೊಂಡಿರುವ ಟೆಂಡರ್‌ಗಳು 3 ಹಾಗೂ 1 ಹೆಚ್ಚುವರಿ ಆರ್ಥಿಕ ಹೊರೆ ಪರಿಣಾಮದ ಪ್ರಸ್ತಾವನೆಗಳು ವಿವರಗಳನ್ನು **ಅನುಬಂಧ-3**ರಲ್ಲಿ ಒದಗಿಸಲಾಗಿದೆ.
ಉ)	ಸದರಿ ಜಲನಿಗಮ ವತಿಯಿಂದ ದಿನಾಂಕ:05.08.2019ರಿಂದ ಇಲ್ಲಿಯವರೆಗೆ ವಿಭಾಗವಾರು ಎಷ್ಟು ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗಿದೆ; ವಿಭಾಗವಾರು ಹಣ ಭರವಸೆ ಪತ್ರ ಬಿಡುಗಡೆ ಮಾಡುವಾಗ ಗುತ್ತಿಗೆದಾರರಿಗೆ ಯಾವ ಆಧಾರದ ಮೇಲೆ ಬಿಲ್ಲುಗಳನ್ನು ನಿಯಮಾನುಸಾರ ತೀರುವಳಿ ಮಾಡಲಾಗಿದೆಯೇ; ನಿಯಮಾನುಸಾರ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿ ಮಾಡದಿದ್ದಲ್ಲಿ, ಅಧಿಕಾರಿಗಳ ವಿರುದ್ಧ ಯಾವ ರೀತಿ ಕ್ರಮ ಜರುಗಿಸಲಾಗಿದೆ (ಸಂಪೂರ್ಣ ವಿವರ ನೀಡುವುದು);	ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ವಿಭಾಗವಾರು ಒಟ್ಟು ರೂ. 2716.82 ಕೋಟಿಗಳ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗಿದೆ. ವಿಭಾಗವಾರು ವಿವರಗಳನ್ನು **ಅನುಬಂಧ-4**ರಲ್ಲಿ ಒದಗಿಸಲಾಗಿದೆ. ಗುತ್ತಿಗೆದಾರರಿಗೆ ಅನುದಾನವನ್ನು ನಿಗಮವು ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಬಿಡುಗಡೆ ಮಾಡಲಾಗುತ್ತಿದೆ; 1. ಯೋಜನೆಗಳ ಅಡಿ ನೀರಾವರಿ ಸೃಜಿಸುವ (ಭೌತಿಕ) ಕಾರ್ಯಕ್ರಮ. 2. ರಾಜ್ಯದ ನೀರಿನ ಪಾಲನ್ನು ಸಂಪೂರ್ಣವಾಗಿ ಉಪಯೋಗಿಸುವುದು.

ಕ್ರಸಂ.	ಪ್ರಶ್ನೆಗಳು	ಉತ್ತರಗಳು
		3. ಯೋಜನೆಗಳನ್ನು ಪೂರ್ಣಗೊಳಿಸುವ ಕಾಲಮಿತಿ. 4. ಕೇಂದ್ರ ಸರ್ಕಾರದಿಂದ ಧನ ಸಹಾಯ ಪಡೆಯುವ ಯೋಜನೆಗಳು. 5. ನಬಾರ್ಡ್ ಡ್ರಿಪ್ ಯೋಜನೆ ಮತ್ತು ವಿಶೇಷ ಅಭಿವೃದ್ಧಿ ಯೋಜನೆ ಹಾಗೂ ಮತ್ತಿತರ ವಿಶೇಷ ಸ್ಕೀಂಗಳ ಅನುಸಾರ ಆಧ್ಯತೆ. 6. ಭೂಸ್ವಾಧೀನಕ್ಕಾಗಿ ಬೇಕಾಗುವ ಅನುದಾನ 16(1) & 19 (1), Court Case, Executive Petition, Lok-Adalat ಇತ್ಯಾದಿಗಳಿಗೆ ಆಧ್ಯತೆ. 7. ಬಾಕಿ ಬಿಲ್ಲುಗಳ ಮೊತ್ತ. 8. ಕುಡಿಯುವ ನೀರು ಹಾಗೂ ನೀರಿನ ಅಂತರ್ಜಲ ಮರು ಪೂರ್ಣಗೊಳಿಸುವ ಯೋಜನೆಗಳು. 9. ಯೋಜನೆಗಳ ಪ್ರಗತಿಯ ಆಧಾರದ ಮೇಲೆ, ಚಾಲ್ತಿಯಲ್ಲಿರುವ ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನ, ಹೊಸ ಕಾಮಗಾರಿಗಳಿಗೆ ಬೇಕಾಗುವ ಅನುದಾನ ಮತ್ತು ಅಂತಿಮವಾದ ಟೆಂಡರುಗಳ ಕಾಮಗಾರಿ ಅನುಷ್ಠಾನಕ್ಕೆ ಬೇಕಾಗುವ ಅನುದಾನದ ಬೇಡಿಕೆ. ನಿಯಮಾನುಸಾರ ಗುತ್ತಿಗೆದಾರರಿಗೆ ಬಿಲ್ಲುಗಳನ್ನು ಪಾವತಿ ಮಾಡದೇ ಇರುವ ಪ್ರಕರಣಗಳು ನಿಗಮದಲ್ಲಿ ವರದಿಯಾಗಿರುವುದಿಲ್ಲ.
ಊ)	ಈ ಜಲ ನಿಗಮದ ವತಿಯಿಂದ ದಿನಾಂಕ 05.08.2019ರಿಂದ ಇಲ್ಲಿಯವರೆಗೆ ಯಾವುದೇ ಭೂಸ್ವಾಧಿನ ಇಲ್ಲದೆ ಇದ್ದರೂ ಟೆಂಡರ್ ಕರೆದಿರುವ ಕಾಮಗಾರಿಗಳು ಎಷ್ಟು (ಸಂಪೂರ್ಣ ಮಾಹಿತಿ ನೀಡುವುದು)	ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ದೃಷ್ಟಿಯಿಂದ ಭೂಸ್ವಾಧೀನ ಪ್ರಕ್ರಿಯೆಯ ಜೊತೆಗೆ ಟೆಂಡರ್ ಆಹ್ವಾನಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.
ಋ)	ಭೂಸ್ವಾಧೀನ ಅನುಮೋದನೆ ನೀಡಿ ಕಾಮಗಾರಿಗಳನ್ನು ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆಯೇ? (ಸಂಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಜಸಂಇ 11 ಡಬ್ಲ್ಯೂಎಲ್ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು
(ಬೃಹತ್ ಮತ್ತು ಮಧ್ಯಮ ನೀರಾವರಿ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127ಗೆ ಅನುಬಂಧ-1

ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ಆಹ್ವಾನಿಸಲಾದ ಟೆಂಡರ್ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ಕ್ರಮ ಸಂ	ಕಾಮಗಾರಿಯ ಹೆಸರು	ಟೆಂಡರ್ ಗಿಟ್ಟಿ ಮೊತ್ತ	ಟೆಂಡರ್ ಆಹ್ವಾನಿಸಿದ ದಿನಾಂಕ	ಪ್ರಸ್ತುತ ಹಂತ
I	ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ			
i	ಬಿ.ಆರ್.ಪ್ರಾಜೆಕ್ಟ್ ವಿಭಾಗ			
1	Providing Protective works to the project affected area & providing additional facility by improving Infrastructure under Satkoli and Doddinatale hamlets of Kusuburu village in N.R.PuraTaluk under the Jurisdiction of UBP Package-I	4.99	29.11.2019	ದಿನಾಂಕ: 06.03.2020 ರಂದು ಟೆಂಡರ್ ಅನುಮೋದನೆ ನೀಡಲಾಗಿದೆ.
ii	ಅಜ್ಜಂಪುರ ವಿಭಾಗ			
2	Watershed Development Scheme on the lines of Integrated Mission for sustaianable Development for the watershed of Ajjampura Tunnel area	8.29	11-12-2019	ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.
iii	ಚಳ್ಳಕೆರೆ ವಿಭಾಗ			
3	"Survey, Investigation, Design, Supply, Installation Testing and Commissioning of Lift System (Head works consisting of construction of Intake canal, Jack well cum pump house, Power supply including terminal bays, Substation, 33 KV transmission lines) Rising main with pressure distribution system, Construction of Gravity Distribution System in **PavagadaTaluk** (Filling of Tanks 40 No's) and **ChallakereTaluk** (Filling of Tanks 21 No's) Under Upper Bhadra Project including Operation and Maintanance for a period of 5 Years after successful completion of work" **(INDENT NO:1336)**	527.74	23.10.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.
4	"Construction of Challakere-Molkalmuru gravity main piped distribution network for tank filling from chitradurga branch canal under upper bhadra project including operation and maintainance for 5 years after successful completion of work" (INDENT NO:1333)	441.28	23.10.2019	ಗುತ್ತಿಗೆದಾರರಿಗೆ ಎಲ್ಒಐ ನೀಡಿದ್ದು, ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿದೆ.
5	"Construction of Ranikere Gravity Main Piped Distribution Network For Tank Filling From Chitradurga Branch Canal under Upper Bhadra Project including Operation and Maintenance for 5 years after successful completion of work" (Indent: 1347)	88.64	23.10.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.

6	"Construction of Sanikere-Belegere gravity main piped distribution network for tank filling from chitradurga branch canal under upper bhadra project including operation and maintainance for 5 years after successful completion of work" (INDENT NO:1348)	48.29	23.10.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.
iv	ಶಿರಾ ವಿಭಾಗ			
7	Construction of Tumkur Branch Canal including earthwork, excavation, embankment, CC lining using mechanical paver, cross drainage works / road bridges/ cart track crossings from Ch.108.00 Km to Ch. 135.00 Km (27 Km Length) including aqueduct from Ch.121.195 Km to Ch.122.744 Km - Under Upper Bhadra Project (Package No. VIII of TBC under UBP)	142.69	20.09.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.
8	Construction of Tumkur Branch Canal including earthwork, excavation, embankment, CC lining using mechanical paver, cross drainage works / road bridges/ cart track crossings from Ch.135.00 Km to Ch. 159.684 Km (24.684 Km Length) including aqueduct from Ch.138.150 Km to Ch.140.352 Km, Ch:143.650 Km Ch: 144.798 Km & from Ch: 157.543 Km to Ch: 158.123Km and Tunnel from Ch: 140.808 Km to Ch: 141.522 Km Under Upper Bhadra Project (Package No. IX of TBC under UBP)	138.10	20.09.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.
9	Supply, installation, testing and commissioning of gravity piped distribution network for tank filling from the gravity feeder pipeline froCh: 0.00 Km to Ch: 80.269 Km including sub-feeders under Tumkur Branch Canal of Upper Bhadra Project in Sira and Hiriyurtaluka including Operation and Maintenance for 5 years	898.01	20.02.2020	ಟೆಂಡರ್ ಕರೆಯಲಾಗಿದೆ.
II	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನಾ ವಲಯ ತುಮಕೂರು			
i	ಮಧುಗಿರಿ ವಿಭಾಗ			
10	Construction of Gravity Canal from Km 240.00 to Km 244.35 comprising of Earthwork Excavation, Formation of Embankment, CC Lining using Mechanical Paver, including construction of CD works, Aqueducts and other structures under Yettinahole Project. (YGC-PKG-XXIII)	390.99	30.09.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.
11	Construction of Gravity Canal from Km 244.35 to Km 249.15 comprising of Earthwork Excavation, Formation of Embankment, CC Lining using Mechanical Paver, including construction of CD works, Tunnels, Aqueducts and other structures under Yettinahole Project.(YGC-PKG-XXIV)	133.21	30.09.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.

12	Construction of Gravity Canal from Km 249.15 to Km 255.00 comprising of Earthwork Excavation, Formation of Embankment, CC Lining using Mechanical Paver, including construction of CD works, Tunnels and other structures under Yettinahole Project. (YGC-PKG-XXV)	144.14	12.10.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.
13	Construction of Gravity Canal from Km 255.00 to Km 258.97 comprising of Earthwork Excavation, Formation of Embankment, CC Lining using Mechanical Paver, including construction of CD works, Tunnels, Aqueducts and other structures under Yettinahole Project. (YGC-PKG-XXVI)	108.11	30.09.2019	ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ಕಾಮಗಾರಿ ಪ್ರಾರಂಭಿಕ ಹಂತದಲ್ಲಿದೆ.

*****

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127ಗೆ ಅನುಬಂಧ-2

ವಿಶ್ವೇಶ್ವರಯ್ಯ ಜಲ ನಿಗಮದಡಿಯಲ್ಲಿ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಅನುಮೋದನೆ ನೀಡಿದ ಮಂಡಳಿಯ ಸಭೆಯ ಸಂಖ್ಯೆ ಮತ್ತು ದಿನಾಂಕ
1	Construction of Gowribidanur Gravity Feeder from Km 0.000 to Km 81.600 Comprising of Supply, Installation, Testing and Commissioning of Gravity MS Pipe, including Structures, under Yettinahole Project (Indent No.1221)	13ನೇ ಸಭೆ / 20.09.2019
2	Construction of Tumkur Branch Canal including earthwork, excavation, embankment, CC lining using mechanical paver, cross drainage works /road bridges/ cart track crossings fromCh.108.00 Km to Ch. 135.00 Km (27 Km Length) includingaqueduct from Ch.121.195 Km to Ch.122.744 Km -Under Upper Bhadra Project." (Package VIII)"	14ನೇ ಸಭೆ / 04.12.2019
3	Construction of Tumkur Branch Canal including earthwork, excavation, embankment, CC lining using mechanical paver, cross drainage works / road bridges/cart track crossings from Ch.135.000 Km to ch.159.684 Km (24.684Km Length) including aqueducts from Ch.138.150 Km to Ch.140.352 Km, Ch.143.650 Km to C h.144.78 Km & from Ch.157.543 Km to Ch.158.123 Km and Tunnel from Ch.140.808 Km to Ch.141.522 Km Under Upper Bhadra Project (Package IX)"	14ನೇ ಸಭೆ / 04.12.2019
4	Construction of Gravity Canal from Km 240.00 to Km 244.350 comprising of Earthwork Excavation, Formation of Embankment, CC Lining using Mechanical Paver including CD works, Tunnels, Aqueduct and other structures under Yettinahole Project (YGC-PKG-XXIII) (Indent No. 1327)	14ನೇ ಸಭೆ / 04.12.2019
5	Construction of Gravity Canal from Km 244.350 to Km 249.150 comprising of Earthwork Excavation, Formation of Embankment, CC Lining using Mechanical Paver including CD works, Tunnels, Aqueduct and other structures under Yettinahole Project (YGC-PKG-XXIV) (Indent No. 1328)	14ನೇ ಸಭೆ/ 04.12.2019
6	Construction of Gravity Canal from Km 255.00 to Km 258.970 comprising of Earthwork Excavation, Formation of Embankment, CC Lining using Mechanical Paver including CD works, Tunnels, Aqueduct and other structures under Yettinahole Project (YGC-PKG-XXVI) (Indent No. 1330)	14ನೇ ಸಭೆ / 04.12.2019
7	Construction of Challakere - Molakalmur Gravity Main piped distribution network from Chitradurga Branch Canal Under Upper Bhadra Project including Operation & Maintenance for 5 years after successful completion of work"	14ನೇ ಸಭೆ / 04.12.2019
8	Construction of Ranikere Gravity Main piped distribution network from Chitradurga Branch Canal Under Upper Bhadra Project including Operation and Maintenance for 5 years after successful completion of the work"	14ನೇ ಸಭೆ/ 04.12.2019

ಕ್ರ ಸಂ	ಕಾಮಗಾರಿಯ ಹೆಸರು	ಅನುಮೋದನೆ ನೀಡಿದ ಮಂಡಳಿಯ ಸಭೆಯ ಸಂಖ್ಯೆ ಮತ್ತು ದಿನಾಂಕ
9	Construction of Sanikere – Belagere Gravity Main piped distribution network from Chitradurga Branch Canal Under Upper Bhadra Project including Operation and Maintenance for 5 years after successful completion of the work	14ನೇ ಸಭೆ / 04.12.2019
10	Survey, Investigation, Design, Supply, Installation Testing and Commissioning of Lift System (Head Works consisting of construction of Intake canal, Jack well cum pump house, Power supply including terminal bays, substation, 33 KV transmission lines) Rising Main with Pressure distribution system, Construction of Gravity Distribution System in PavagadaTaluk (Filling of Tanks 38 Nos) and ChallakereTaluk (Filling of Tanks 21 No's) Under Upper Bhadra Project including Operation and Maintenance for a period of 5 years after successful completion of work."	14ನೇ ಸಭೆ / 04.12.2019

*****

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ, ನಂ.148, ನೆಲ ಮಹಡಿ, ಎಂಬೆಸಿ ಸ್ಕ್ವೇರ್,
ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು-560 001.

-:ನಿರ್ದೇಶಕರ ಮಂಡಳಿಯ ಇನ್ನೂರನೇ ಸಭೆಯ ನಡಾವಳಿಗಳು:-

ದಿನ	:	ಬುಧವಾರ
ದಿನಾಂಕ	:	18.09.2019
ವೇಳೆ	:	ಅಪರಾಹ್ನ 3.30 ಗಂಟೆ.
ಸ್ಥಳ	:	"<u>ಸಮಿತಿ ಕೊಠಡಿ</u>" (ಸಂಖ್ಯೆ:313) "ವಿಧಾನ ಸೌಧ" ಮೂರನೇ ಮಹಡಿ ಬೆಂಗಳೂರು.

<u>ಉಪಸ್ಥಿತಿ:-</u>

1. ಶ್ರೀ. ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ., : ಸಭೆಯ ಅಧ್ಯಕ್ಷರು
2. ಶ್ರೀ. ರಾಕೇಶ್ ಸಿಂಗ್, ಭಾ.ಆ.ಸೇ. : ನಿರ್ದೇಶಕರು
3. ಶ್ರೀಮತಿ ಡಾ: ಶಾಲಿನಿ ರಜನೀಶ್, ಭಾ.ಆ.ಸೇ., : ನಿರ್ದೇಶಕರು
4. ಶ್ರೀ. ಎನ್.ಲಕ್ಷ್ಮಣರಾವ್ ಪೇಶ್ವೆ, ಕ.ಇ.ಸೇ. : ವ್ಯವಸ್ಥಾಪಕ ನಿರ್ದೇಶಕರು
5. ಶ್ರೀ.ಆರ್.ಚೆಲುವರಾಜು : ಸ್ವತಂತ್ರ ನಿರ್ದೇಶಕರು
6. ಪ್ರೊ.ಶ್ರೀ.ಟಿ.ಗಂಗಾಧರಯ್ಯ : ಸ್ವತಂತ್ರ ನಿರ್ದೇಶಕರು

<u>ಅನುಪಸ್ಥಿತಿಗೆ ಮಂಜೂರಾತಿ ಪಡೆದ ನಿರ್ದೇಶಕರುಗಳು:</u>

1. ಶ್ರೀ. ಬಿ.ಎಸ್.ಯಡಿಯೂರಪ್ಪ, : ಅಧ್ಯಕ್ಷರು
2. ಶ್ರೀ. ಟಿ.ಎಂ. ವಿಜಯ್ ಭಾಸ್ಕರ್, ಭಾ.ಆ.ಸೇ., : ನಿರ್ದೇಶಕರು
3. ಶ್ರೀ.ಪಿ.ರವಿಕುಮಾರ್, ಭಾ.ಆ.ಸೇ., : ನಿರ್ದೇಶಕರು
4. ಶ್ರೀ.ಡಿ.ಎನ್.ದೇಸಾಯಿ : ಸ್ವತಂತ್ರ ನಿರ್ದೇಶಕರು

<u>ಹಾಜರಿದ್ದ ಅಧಿಕಾರಿಗಳು:-</u>

1. ಶ್ರೀ. ಜಿ.ಎಸ್. ಪ್ರಕಾಶ್, : ಕಂಪನಿ ಕಾರ್ಯದರ್ಶಿ
2. ಶ್ರೀಮತಿ ಜ್ಯೋತಿ ಡಿ.ಕುಂದರ್, : ಪ್ರಧಾನ ವ್ಯವಸ್ಥಾಪಕರು-ಹಣಕಾಸು

ಮಾನ್ಯ ಸಭೆಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ನಿರ್ದೇಶಕರುಗಳನ್ನು ಶ್ರೀ ಎನ್.ಲಕ್ಷ್ಮಣರಾವ್ ಪೇಶ್ವೆ, ವ್ಯವಸ್ಥಾಪಕ ನಿರ್ದೇಶಕರು ಸ್ವಾಗತಿಸಿದರು.

ಶ್ರೀ. ಬಿ.ಎಸ್.ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಿಗಮದ ಅಧ್ಯಕ್ಷರು ಕಾರಣಾಂತರಗಳಿಂದಾಗಿ ಉಪಸ್ಥಿತರಿರಲು ಸಾಧ್ಯವಾಗಲಿಲ್ಲವಾದ್ದರಿಂದ ಉಪಸ್ಥಿತರಿದ್ದ ನಿರ್ದೇಶಕರುಗಳ ಕೋರಿಕೆಯ ಮೇರೆಗೆ ಶ್ರೀ.ಐ.ಎಸ್.ಎನ್.ಪ್ರಸಾದ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಹಾಗೂ ನಿರ್ದೇಶಕರು ಸಭೆಯ ಅಧ್ಯಕ್ಷತೆ ವಹಿಸಿದರು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಿಕ ಸರ್ಕಾರದ ಒಂದು ಉದ್ಯಮ)

ಭಾಗ-ಎ: ಸಾಮಾನ್ಯ ವಿಷಯಗಳು:

ವಿಷಯ ಸಂಖ್ಯೆ:1: ದಿನಾಂಕ: 28.06.2019 ರಂದು ನಡೆದ 11ನೇ ನಿರ್ದೇಶಕರ ಮಂಡಳಿ ಸಭೆಯ ನಡಾವಳಿಯ ಸ್ಥಿರೀಕರಣ.

ದಿನಾಂಕ 28.06.2019 ರಂದು ನಡೆದ ಹನ್ನೊಂದನೇ ನಿರ್ದೇಶಕರ ಮಂಡಳಿಯ ನಡಾವಳಿಗಳನ್ನು ದೃಢೀಕರಿಸಲಾಯಿತು.

ವಿಷಯ ಸಂಖ್ಯೆ:2: ದಿನಾಂಕ:28.06.2019 ರಂದು ನಡೆದ 11ನೇ ನಿರ್ದೇಶಕರ ಮಂಡಳಿ ಸಭೆಯ ನಡಾವಳಿಗಳಿಗೆ ಪಾಲನಾ ವರದಿ ಕುರಿತು.

ಅವಗಾಹಿಸಲಾಯಿತು.

ವಿಷಯ ಸಂಖ್ಯೆ:3: ಶ್ರೀ.ಎನ್.ಲಕ್ಷ್ಮಣರಾವ್ ಪೇಶ್ವೆ, ಇವರನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಶ್ರೀ.ಕೆ.ಜೈಪ್ರಕಾಶ್ ಇವರ ಜಾಗದಲ್ಲಿ ನೇಮಿಸಿರುವ ಕುರಿತು.

ಶ್ರೀ. ಎನ್ ಲಕ್ಷ್ಮಣರಾವ್ ಪೇಶ್ವೆ, ಮುಖ್ಯ ಅಭಿಯಂತರರು, (ಸ್ವಂತಂತ್ರ ಪ್ರಭಾರ), ಆಡಳಿತಾಧಿಕಾರಿ, ಕಾಡಾ, ಶಿವಮೊಗ್ಗ ಇವರನ್ನು ಸರ್ಕಾರವು ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಬೆಂಗಳೂರು ಶ್ರೀ. ಕೆ.ಜೈಪ್ರಕಾಶ್, ಇವರು ನಿರ್ವಹಿಸುತ್ತಿರುವ ಹುದ್ದೆಗೆ ವರ್ಗಾಯಿಸಿ, ನೇಮಿಸಲಾಗಿರುವುದನ್ನು ಮಂಡಳಿಗೆಯು ಗಮನಿಸಿ ಈ ಕೆಳಗಿನ ಗೊತ್ತುವಳಿಗಳನ್ನು ಆಂಗ್ಲ ಭಾಷೆಯಲ್ಲಿ ಅಂಗೀಕರಿಸಿತು.

"RESOLVED:

1. to note the appointment of Sri. N. Lakshmanrao Peshve, as Managing Director of the Company, as per the Government Notifications No.SeAaSuEe 160 Se.Mu.Ee 2018, dt.05.08.2019 in place of Sri K.Jaiprakash and Sri. N. Lakshmanrao Peshve, K.E.S. taking over charge as Managing Director with effect from 06.08.2019.
2. Pursuant to provisions of Section 203 and other applicable provisions, if any, of the Companies Act, 2013, (including any statutory modifications or re-enactment(s) thereof, and rules made thereunder, consent of the Board of Director be and is hereby accorded for the appointment of Sri. N. Lakshmanrao Peshve, K.E.S. Managing Director as a Key Managerial Personnel under the said section.
3. that Sri. N. Lakshmanrao Peshve, Managing Director, be and is hereby nominated as Member Secretary on the Technical Sub-Committee and as Member on the Finance Committee, of the Board of Directors and also authorised to operate all the existing delegation of powers and Bank Accounts of the Nigam for smooth functioning of the Nigam's work; and
4. to transfer Two Equity shares held by Sri K. Jaiprakash, in favour of Sri N. Lakshmanrao Peshve, Managing Director;

3.2 ಶ್ರೀ. ಕೆ.ಜೈಪ್ರಕಾಶ್ ರವರು ತಮ್ಮ ಅಧಿಕಾರದ ಅವಧಿಯಲ್ಲಿ ನಿಗಮಕ್ಕೆ ಸಲ್ಲಿಸಿದ ಸೇವೆಗೆ ಮಂಡಳಿಯು ಪ್ರಶಂಸೆಯನ್ನು ದಾಖಲಿಸಿತು.

ವಿಷಯ ಸಂ.4: ಕಂಪನಿಯ ನಿರ್ದೇಶಕರುಗಳ ಮಂಡಳಿ ಹಾಗೂ ನಿಗಮದ ವಿವಿಧ ಉಪ ಸಮಿತಿಗಳ ಪುನರ್ ರಚನೆ ಕುರಿತು.

(ಅ) ನಿಗಮದ ನಿರ್ದೇಶಕರ ಮಂಡಳಿಗೆ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ನಾಮ ನಿರ್ದೇಶನ ಮಾಡಿರುವ ಆದೇಶಕ್ಕೆ ಮಂಡಳಿಯ ಅನುಸಮರ್ಥನೆ ಕೋರಿರುವ ಕುರಿತು.

ಮತ್ತು

(ಆ) ನಿಗಮದ ವಿವಿಧ ಉಪಸಮಿತಿಗಳನ್ನು ಪುನರ್‌ರಚಿಸಿರುವ ಪ್ರಸ್ತಾವನೆಗೆ ಅನುಸಮರ್ಥನೆ ಕೋರಿರುವ ಕುರಿತು.

(ಅ)4.1 ಸರ್ಕಾರವು ನಿಗಮದ ನಿರ್ದೇಶಕರ ಮಂಡಳಿಯಲ್ಲಿ ಮಾಡಿರುವ ಈ ಕೆಳಕಂಡ ಬದಲಾವಣೆಗಳನ್ನು ಮಂಡಳಿಯು ಗಮನಿಸಿತು ಹಾಗೂ ತತ್ಸಂಬಂಧವಾಗಿ ಸಂಬಂಧಪಟ್ಟ ನಿರ್ದೇಶಕರ ಷೇರು ವರ್ಗಾವಣೆಯನ್ನು ಅನುಮೋದಿಸಿತು.

4.2 ಸರ್ಕಾರದ ಅಧಿಸೂಚನೆ ದಿನಾಂಕ: 29.07.2019ರಿಂದ ಜಾರಿಗೆ ಬರುವಂತೆ ನಿಗಮದ ಮಂಡಳಿಯಲ್ಲಿ ಈಗಾಗಲೇ ನಾಮನಿರ್ದೇಶನ ಮಾಡಲಾಗಿರುವ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಅಧಿಕಾರೇತರ ನಿರ್ದೇಶಕರುಗಳ ಅವದಿ ಕೊನೆಗೊಂಡಿರುವುದು.

4.3. ಶ್ರೀ ಬಿ.ಎಸ್.ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು, ರವರನ್ನು ಮಂಡಳಿಯ ಅಧ್ಯಕ್ಷರಾಗಿ ಶ್ರೀ. ಹೆಚ್.ಡಿ.ಕುಮಾರಸ್ವಾಮಿ, ರವರ ಸ್ಥಾನದಲ್ಲಿ ನಾಮನಿರ್ದೇಶನ ಮಾಡಿರುವುದು.

4.4 ಶ್ರೀ ಪಿ. ರವಿಕುಮಾರ್, ಭಾ.ಆ.ಸೇ., ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಇವರನ್ನು ಮಂಡಳಿಯ ನಿರ್ದೇಶಕರನ್ನಾಗಿ ಡಾ.ಇ.ವಿ.ರಮಣರೆಡ್ಡಿ, ಭಾ.ಆ.ಸೇ., ಇವರ ಸ್ಥಾನದಲ್ಲಿ ನಾಮನಿರ್ದೇಶನ ಮಾಡಿರುವುದು. ಮುಂದುವರೆಯುತ್ತಾ, ಡಾ.ಇ.ವಿ. ರಮಣರೆಡ್ಡಿ, ಭಾ.ಆ.ಸೇ., ಇವರು ಹೊಂದಿದ್ದ ಒಂದು ಈಕ್ವಿಟಿ ಷೇರುನ್ನು ಶ್ರೀ. ಪಿ. ರವಿಕುಮಾರ್, ಭಾ.ಆ.ಸೇ., ಇವರಿಗೆ ವರ್ಗಾಯಿಸುವುದು.

4.5 ಈಗಾಗಲೇ ನಿಗಮದ ನಿರ್ದೇಶಕರ ಮಂಡಳಿಯಲ್ಲಿ ಪ್ರಸ್ತುತ ನಾಮ ನಿರ್ದೇಶನವಾಗಿರುವ ಮೂರು (3) ಸ್ವತಂತ್ರ ನಿರ್ದೇಶಕರಾದ ಶ್ರೀ ಡಿ.ಎನ್.ದೇಸಾಯಿ, ಪ್ರೊ: ಟಿ.ಗಂಗಾಧರಯ್ಯ ಮತ್ತು ಶ್ರೀ. ಆರ್ ಚಲುವರಾಜು ರವರನ್ನು ನಿಗಮದ ನಿರ್ದೇಶಕರ ಮಂಡಳಿಯಲ್ಲಿ ಸ್ವತಂತ್ರ ನಿರ್ದೇಶಕರುಗಳನ್ನಾಗಿ ಪುನರ್ ನಾಮನಿರ್ದೇಶನ ಮಾಡಿರುವುದು.

4.6 ಈ ಹಿಂದೆ ಮಂಡಳಿಯ ಅಧ್ಯಕ್ಷರಾಗಿ ಶ್ರೀ. ಹೆಚ್.ಡಿ. ಕುಮಾರಸ್ವಾಮಿ ಮತ್ತು ಉಪಾಧ್ಯಕ್ಷರಾಗಿ ಶ್ರೀ. ಡಿ.ಕೆ.ಶಿವಕುಮಾರ್ ಹಾಗೂ ನಿಗಮದ ನಿರ್ದೇಶಕರಾಗಿದ್ದ ಡಾ.ಇ.ವಿ. ರಮಣರೆಡ್ಡಿ, ಭಾ.ಆ.ಸೇ., ರವರು ತಮ್ಮ ಅವಧಿಯಲ್ಲಿ ನಿಗಮಕ್ಕೆ ಸಲ್ಲಿಸಿದ ಸೇವೆಗೆ ಮಂಡಳಿಯು ತನ್ನ ಪ್ರಶಂಸೆಯನ್ನು ದಾಖಲಿಸಿತು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

(ಆ) 4.7 ಸರ್ಕಾರದ ಆದೇಶ ಸಂಖ್ಯೆ: ಜಸಂಇ 124 ಕೆಬಿಎನ್ 2018, ದಿನಾಂಕ: 07.09.2019 ರಲ್ಲಿ ನಿಗಮದ ತಾಂತ್ರಿಕ ಉಪ ಸಮಿತಿಗೆ ಅಧ್ಯಕ್ಷರು, ಸದಸ್ಯರು ಹಾಗೂ ವಿಶೇಷ ಆಹ್ವಾನಿತರುಗಳನ್ನು, ಅಂದಾಜು ಪರಿಶೀಲನಾ ಸಮಿತಿ ಹಾಗೂ ಟೆಂಡರ್ ಪರಿಶೀಲನಾ ಸಮಿತಿಗಳಿಗೆ ಸದಸ್ಯರುಗಳನ್ನು ನೇಮಿಸಿ ಆದೇಶಿಸಲಾಗಿದ್ದು, ಅದರಂತೆ, ಈ ಕೆಳಕಂಡಂತೆ ತಾಂತ್ರಿಕ ಉಪ ಸಮಿತಿಯನ್ನು ಪುನರ್ ರಚಿಸಿರುವುದಕ್ಕೆ ಮಂಡಳಿಯು ಅನುಸಮರ್ಥನೆ ನೀಡಿತು.

ತಾಂತ್ರಿಕ ಉಪ ಸಮಿತಿ: **(Technical Sub Committee)**

ಕ್ರ. ಸಂ.	ಈ ಹಿಂದೆ ಇದ್ದ ಸದಸ್ಯರುಗಳ ವಿವರ		ಹಾಲಿ ಪುನರ್‌ರಚಿಸಿರುವ ಸದಸ್ಯರುಗಳು	
	ವಿವರ	ಪದನಾಮ	ವಿವರ	ಪದನಾಮ
1.	ಶ್ರೀ ಡಿ.ಎನ್.ದೇಸಾಯಿ, ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು	ಅಧ್ಯಕ್ಷರು	ಶ್ರೀ ಡಿ.ಎನ್.ದೇಸಾಯಿ, ನಿವೃತ್ತ ಸರ್ಕಾರದ ಕಾರ್ಯದರ್ಶಿಗಳು	ಅಧ್ಯಕ್ಷರು
2.	ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.	ಸದಸ್ಯರು	ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.	ಸದಸ್ಯರು
3.	ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.	ಸದಸ್ಯ ಕಾರ್ಯದರ್ಶಿ	ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.	ಸದಸ್ಯ ಕಾರ್ಯದರ್ಶಿ
4.	ಶ್ರೀ.ಆರ್.ಚೆಲುವರಾಜು, ನಿವೃತ್ತ ಮುಖ್ಯ ಇಂಜಿನಿಯರ್	ಸದಸ್ಯರು	ಶ್ರೀ.ಆರ್.ಚೆಲುವರಾಜು, ನಿವೃತ್ತ ಮುಖ್ಯ ಇಂಜಿನಿಯರ್	ಸದಸ್ಯರು
5.	ಪ್ರೊ:ಟಿ.ಗಂಗಾಧರಯ್ಯ, ಪ್ರೊಫೇಸರ್, ಎಸ್. ಐ.ಟಿ, ತುಮಕೂರು.	ಸದಸ್ಯರು	ಪ್ರೊ:ಟಿ.ಗಂಗಾಧರಯ್ಯ, ಪ್ರೊಫೇಸರ್, ಎಸ್. ಐ.ಟಿ, ತುಮಕೂರು.	ಸದಸ್ಯರು
6.	ಶ್ರೀ.ಎಸ್.ಎಸ್.ಮುಗದಾಳ, ನಿವೃತ್ತ ಮುಖ್ಯ ಇಂಜನೀಯರ್, K.P.W.D.	ಸದಸ್ಯರು	ಶ್ರೀ. ರಾಮ್‌ಪ್ರಸಾದ್ ಎಂ.ಎಸ್, ನಿವೃತ್ತ ಮುಖ್ಯ ಇಂಜಿನಿಯರ್.	ವಿಶೇಷ ಆಹ್ವಾನಿತರು

4.8 ಮೇಲ್ಕಂಡ ಸರ್ಕಾರದ ಆದೇಶ ಸಂಖ್ಯೆ: ಜಸಂಇ 124 ಕೆಬಿಎನ್ 2018, ದಿನಾಂಕ: 07.09.2019ರನ್ವಯ ವಿವಿಧ ಮಟ್ಟದಲ್ಲಿ ಅಂದಾಜು ಮತ್ತು ಟೆಂಡರ್ ಪರಿಶೀಲನಾ ಸಮಿತಿಗಳಿಗೆ ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರುಗಳನ್ನು ಒಳಗೊಂಡಂತೆ ಸಮಿತಿಗಳನ್ನು ಪುನರ್ ರಚಿಸಿದ್ದು, ಇದರನ್ವಯ ದಿನಾಂಕ:09.09.2019 ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರುಗಳನ್ನು ಒಳಗೊಂಡ ವಿವಿಧ ಸಮಿತಿಗಳನ್ನು ಅಜೆಂಡಾ ಟಿಪ್ಪಣಿ ಅನುಬಂಧ-1ರಲ್ಲಿರುವಂತೆ ಸಮಗ್ರವಾಗಿ ಪುನರ್ ರಚಿಸಿ ಹೊರಡಿಸಿರುವ ಆದೇಶಕ್ಕೆ ಮಂಡಳಿಯು ಅನುಸಮರ್ಥನೆ ನೀಡಿತು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವಿಷಯ ಸಂ.5: 31.03.2019 ಕ್ಕೆ ಅಂತ್ಯಗೊಂಡ ನಿಗಮದ ಮೂರನೇ ಆರ್ಥಿಕ ವರ್ಷ 2018–19 ನೇ ಸಾಲಿನ ಲೆಕ್ಕ ತಃಖ್ತೆಗಳ (Financial Statements) ಅನುಮೋದನೆ ಹಾಗೂ ನಿಗಮದ ಮೂರನೇ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆ (Annual General Meeting) ಕರೆಯುವ ಕುರಿತು.

ನಿಗಮದ 5ನೇ ಲೆಕ್ಕ ಪರಿಶೋಧನಾ ಸಮಿತಿಯು ಪರಿಶೀಲಿಸಿದ ನಿಗಮದ 2018–19ನೇ ಸಾಲಿನ ಹಣಕಾಸಿನ ತಃಖ್ತೆ (ಲೆಕ್ಕಪತ್ರ) ಮತ್ತು ಅದೇ ವರ್ಷದ ವಾರ್ಷಿಕ ವರದಿಯನ್ನು, ಸದರಿ ಸಾಲಿನ ಲೆಕ್ಕ ಪತ್ರಗಳ ಮುಖ್ಯ ಅಂಶಗಳನ್ನು ಹಾಗೂ 3ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಕಂಪನಿ ಕಾಯ್ದೆಯಡಿ ನಿಗದಿ ಪಡಿಸಿರುವ ವೇಳಾ ಮಿತಿಯಲ್ಲಿ ಕರೆಯುವ ಬಗ್ಗೆ ಚರ್ಚಿಸಲಾಯಿತು.

5.2 ಚರ್ಚೆಯ ನಂತರ ಈ ಕೆಳಕಂಡ ಗೊತ್ತುವಳಿಗಳನ್ನು ಆಂಗ್ಲ ಭಾಷೆಯಲ್ಲಿ ಅಂಗೀಕರಿಸಲಾಯಿತು.

"RESOLVED THAT:-

i. the draft Financial Statement consisting of Balance Sheet as at 31.03.19 and the Statement of Profit & Loss for the year ended 31st March, 2019, the Cash Flow Statement for the year ended 31st March, 2019, Statement of Change in Equity for the year ended 31st March, 2019, notes forming part of the Financial Statements, Additional information to the Financial Statements, Disclosure requirements as per Accounting Standards specified under Section 133 of Companies Act, 2013 read with Companies (Indian Accounting Standard) Rules, 2015 and all other relevant statements disclosures required under the Companies Act, 2013 be and are hereby approved and the Managing Director and any one of the Directors of the Company, the General Manager-Finance/CFO and the Company Secretary be and are hereby authorized to sign the said Accounts for the year 2018-19 and that the signed accounts be presented to the Statutory Auditors for their report thereon;

ii. the Managing Director be and is hereby authorized to fix a date for convening 3rd Annual General Meeting of the Company on or before 30-09-2019 in consultation with the Chairman by issuing short notice as permitted under Section 101 of the Companies Act, 2013 and the draft notice to convene 3rd Annual General Meeting of the Company by issuing notice as permitted under Section 101 of the Companies Act, 2013 be and is hereby approved and the Company Secretary be authorized to issue notice to the members;

iii. the Report of the Directors to the Shareholders as placed before the meeting together, Directors Responsibility Statement in terms of Section

134 (5) of theCompanies Act, 2013 and all other information as per Section 134 of the CompaniesAct, 2013 and rules made thereunder, be and is hereby considered, approved subject to such changes and modifications as may be required relating to disclosures and comments arising out of statutory and other requirements including the addendum if any to the Directors Report under sub-section 3(f) of Section 134 of the Companies act which the Managing Director is authorised to incorporate and that the same be issued to the Shareholders under the signature of Chairman of the Company.

RESOLVED FURTHER THAT, *after approval of the 2018-19 Accounts and if there is any delay in getting the finalised Auditors' Report and Comments from C&AG consequently delaying the convening of the 3rd Annual General Meeting beyond 30th September, 2019, the Managing Director and the Company Secretary be and are hereby authorised to take necessary action to approach the Registrar of Companies, Karnataka, for approval of extension of time in holding the 3rd AGM of the Company as permitted under Section 96(1) of the Companies Act, 2013."*

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/-
(ಎನ್.ಲಕ್ಷ್ಮಣರಾವ್ ಪೇಶ್ವೆ)
ವ್ಯವಸ್ಥಾಪಕ ನಿರ್ದೇಶಕರು

ಸಹಿ/-
(ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ.,)
ಸಭೆಯ ಅಧ್ಯಕ್ಷರು

Certified True Copy

Company Secretary
Visvesvaraya Jala Nigam Ltd.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ, ನಂ.148, ನೆಲ ಮಹಡಿ, ಎಂಬೆಸಿ ಸ್ಕ್ವೇರ್,
ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು–560 001.

-:ನಿರ್ದೇಶಕರ ಮಂಡಳಿಯ ಹದಿಮೂರನೇ ಸಭೆಯ ನಡಾವಳಿಗಳು:-

ದಿನ	:	ಶುಕ್ರವಾರ
ದಿನಾಂಕ	:	20.09.2019
ವೇಳೆ	:	ಸಂಜೆ 5.00 ಗಂಟೆ.
ಸ್ಥಳ	:	"ಕೃಷ್ಣಾ" ಮಾನ್ಯ ಮುಖ್ಯ ಮಂತ್ರಿಯವರ ಗೃಹ ಕಛೇರಿ, ಕುಮಾರ ಕೃಪ ರಸ್ತೆ, ಬೆಂಗಳೂರು

ಉಪಸ್ಥಿತಿ:-

1.	ಶ್ರೀ. ಬಿ.ಎಸ್.ಯಡಿಯೂರಪ್ಪ,	: ಅಧ್ಯಕ್ಷರು
2	ಶ್ರೀ. ಪಿ.ರವಿಕುಮಾರ್, ಭಾ.ಆ.ಸೇ.,	: ನಿರ್ದೇಶಕರು
3	ಶ್ರೀ. ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ.,	: ನಿರ್ದೇಶಕರು
4	ಶ್ರೀ. ರಾಕೇಶ್ ಸಿಂಗ್, ಭಾ.ಆ.ಸೇ.	: ನಿರ್ದೇಶಕರು
5	ಶ್ರೀಮತಿ ಡಾ: ಶಾಲಿನಿ ರಜನೀಶ್, ಭಾ.ಆ.ಸೇ.,	: ಮಹಿಳಾ ನಿರ್ದೇಶಕರು
6.	ಶ್ರೀ. ಎನ್.ಲಕ್ಷ್ಮಣರಾವ್ ಪೇಶ್ವೆ, ಕ.ಇ.ಸೇ.	: ವ್ಯವಸ್ಥಾಪಕ ನಿರ್ದೇಶಕರು
7.	ಶ್ರೀ.ಡಿ.ಎನ್.ದೇಸಾಯಿ	: ಸ್ವತಂತ್ರ ನಿರ್ದೇಶಕರು
8.	ಶ್ರೀ.ಆರ್.ಚಲುವರಾಜು	: ಸ್ವತಂತ್ರ ನಿರ್ದೇಶಕರು
9.	ಪ್ರೊ.ಶ್ರೀ.ಟಿ.ಗಂಗಾಧರಯ್ಯ	: ಸ್ವತಂತ್ರ ನಿರ್ದೇಶಕರು

ಅನುಪಸ್ಥಿತಿಗೆ ಮಂಜೂರಾತಿ ಪಡೆದ ನಿರ್ದೇಶಕರುಗಳು:

1.	ಶ್ರೀ. ಟಿ.ಎಂ. ವಿಜಯ್ ಭಾಸ್ಕರ್, ಭಾ.ಆ.ಸೇ.,	: ನಿರ್ದೇಶಕರು

ಹಾಜರಿದ್ದ ಅಧಿಕಾರಿಗಳು:-

1.	ಶ್ರೀ. ಜಿ.ಎಸ್. ಪ್ರಕಾಶ್,	: ಕಂಪನಿ ಕಾರ್ಯದರ್ಶಿ
2.	ಶ್ರೀಮತಿ ಜ್ಯೋತಿ ಡಿ.ಕುಂದರ್,	: ಪ್ರಧಾನ ವ್ಯವಸ್ಥಾಪಕರು–ಹಣಕಾಸು

ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಉಪಸ್ಥಿತರಿದ್ದ ನಿರ್ದೇಶಕರುಗಳನ್ನು ಶ್ರೀ. ಎನ್.ಲಕ್ಷ್ಮಣರಾವ್ ಪೇಶ್ವೆ, ವ್ಯವಸ್ಥಾಪಕ ನಿರ್ದೇಶಕರು ಸ್ವಾಗತಿಸಿದರು.

ಭಾಗ–ಎ: ಸಾಮಾನ್ಯ ವಿಷಯಗಳು:

ವಿಷಯ ಸಂಖ್ಯೆ.1: ಮಂಡಳಿಯ ಉಪ ಸಮಿತಿಗಳ ನಡಾವಳಿಗಳು ಮಂಡಳಿಯ ಅವಗಾಹನೆಗಾಗಿ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

(ಅ) ದಿನಾಂಕ:09.09.2019 ರಂದು ನಡೆದ 5ನೇ ಲೆಕ್ಕ ಪರಿಶೋಧನಾ ಸಮಿತಿ ಸಭೆಯ ನಡಾವಳಿಗಳು.

ಅವಗಾಹಿಸಲಾಯಿತು.

(ಆ) ದಿನಾಂಕ:09.09.2019 ರಂದು ನಡೆದ 4ನೇ ಆರ್ಥಿಕ ಸಮಿತಿ ಸಭೆಯ ನಡಾವಳಿಗಳು.

ಅವಗಾಹಿಸಲಾಯಿತು.

ವಿಷಯ ಸಂ.2: ಮಾರ್ಚ್ 2020ರಲ್ಲಿ ನಿವೃತ್ತಿಯಾಗುತ್ತಿರುವ ಶ್ರೀ.ಎಂ.ಜಿ.ಶಿವಕುಮಾರ್, ಮುಖ್ಯ ಇಂಜನೀಯರ್ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ ರವರು ಟೆಂಡರ್‌ಗಳನ್ನು ಅನುಮೋದಿಸುವ ಕುರಿತು.

KTPP ಕಾಯ್ದೆ ಸೆಕ್ಷನ್ 13ರ ಪ್ರಕಾರ ಯಾವುದೇ ಒಬ್ಬ ಅಧಿಕಾರಿ ಟೆಂಡರ್‌ಗಳಿಗೆ ಅನುಮೋದನೆ ನೀಡುವ ಅಧಿಕಾರ ಹೊಂದಿದ್ದು, ಈ ಅಧಿಕಾರಿ ನಿವೃತ್ತಿ ಹೊಂದುವ 6 ತಿಂಗಳ ಪೂರ್ವದ ಅವಧಿಯಲ್ಲಿ ಟೆಂಡರ್‌ಗಳಿಗೆ ಅನುಮೋದನೆ ನೀಡಬೇಕಿದ್ದಲ್ಲಿ ಸಕ್ಷಮ ಪ್ರಾಧಿಕಾರದ (Procurement entity) ಅನುಮೋದನೆ ಪಡೆಯುವುದು ಅಗತ್ಯವಿದ್ದು, ಈ ಕುರಿತು ಶ್ರೀ.ಎಂ.ಜಿ.ಶಿವಕುಮಾರ್, ಮುಖ್ಯ ಇಂಜನೀಯರ್ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ ರವರು ತಾವು ಮಾರ್ಚ್ 2020ರಲ್ಲಿ ನಿವೃತ್ತಿ ಹೊಂದುತ್ತಿರುವುದರಿಂದ ದಿನಾಂಕ:01.10.2019ರ ನಂತರ ಟೆಂಡರ್‌ಗಳನ್ನು ಅನುಮೋದಿಸಲು ಅನುಮತಿ ನೀಡಲು ಇಲ್ಲವೇ ಬೇರೊಬ್ಬ ಅಧಿಕಾರಿಗೆ ಭದ್ರಾ ಮೇಲ್ದಂಡೆ ಯೋಜನಾ ವಲಯದ ಟೆಂಡರ್‌ನ್ನು ಅನುಮೋದಿಸಲು ಅಧಿಕಾರ ನೀಡಲು ಕೋರಿರುತ್ತಾರೆಂದು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

2. ಭದ್ರಾ ಮೇಲ್ದಂಡೆ ಯೋಜನಾ ವಲಯದಡಿ ಹಲವಾರು ಕಾಮಗಾರಿಗಳನ್ನು ನಿರ್ವಹಿಸುತ್ತಿದ್ದು ಯೋಜನೆಯ ಪ್ರಗತಿ ಹಾಗೂ ಶೀಘ್ರದಲ್ಲಿ ಪೂರ್ಣಗೊಳಿಸುವ ದೃಷ್ಟಿಯಿಂದ ಪ್ರಸ್ತುತದಲ್ಲಿ ನಿಗಮದ ಅಧಿಕಾರ ಪ್ರತ್ಯೋಜನೆಯ ಪ್ರಕಾರ ಮುಖ್ಯ ಇಂಜನೀಯರ್ ರವರಿಗೆ ನೀಡಿರುವ ಅಧಿಕಾರವನ್ನು ಶ್ರೀ.ಎಂ.ಜಿ.ಶಿವಕುಮಾರ್, ಮುಖ್ಯ ಇಂಜನೀಯರ್, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಭದ್ರಾ ಮೇಲ್ದಂಡೆ ಯೋಜನಾ ವಲಯ ರವರು ಮಾರ್ಚ್ 2020ರಲ್ಲಿ ನಿವೃತ್ತಿ ಹೊಂದುವವರೆಗೂ ಟೆಂಡರ್‌ಗಳನ್ನು ಅನುಮೋದಿಸಲು KTPP ಕಾಯ್ದೆ ಸೆಕ್ಷನ್ 13ರ ಪ್ರಕಾರ ನಿರ್ದೇಶಕರ ಮಂಡಳಿಯು ಪೂರ್ವಾನುಮತಿ ನೀಡಿತು.

<u>ಭಾಗ-ಬಿ: ಆರ್ಥಿಕ ಬಿಡ್ ಮೌಲ್ಯೀಕರಣ.</u>

ವಿಷಯ ಸಂ.3: **"Construction of Gowribidanur Gravity Feeder from Km 0.000 to Km 81.600 Comprising of Supply, Installation, Testing and Commissioning of Gravity MS Pipe, including Structures, under**

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

Yettinahole Project (Indent No.1221) (Call-2)" ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನ ವರದಿ ಕುರಿತು.

ಎತ್ತಿನಹೊಳೆ ಯೋಜನೆಯ 2ನೇ ಹಂತದ ಮುಖ್ಯ ನಾಲೆಯ ಸರಪಳಿ:258.570 ಕಿ.ಮೀ ನಲ್ಲಿ ಕವಲೊಡೆಯುತ್ತಿರುವ ಸ್ಥಳದಲ್ಲಿ ಪ್ರಸ್ತಾಪಿತ ಕಾಮಗಾರಿಯು ಬರುತ್ತಿದ್ದು, ಸದರಿ ಕಾಮಗಾರಿಯಡಿ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ 0.506 ಟಿ.ಎಂ.ಸಿ ಮತ್ತು ಮಧುಗಿರಿ, ಕೊರಟಗೆರೆ, ಗೌರಿಬಿದನೂರು ಹಾಗೂ ದೊಡ್ಡಬಳ್ಳಾಪುರ ತಾಲ್ಲೂಕುಗಳ ಒಟ್ಟು 107 ಕೆರೆಗಳನ್ನು ಅವುಗಳ ಸಾಮರ್ಥ್ಯದ ಪ್ರತಿಶತ 50 ಮೀರದಂತೆ ತುಂಬಿಸಲು 1.32 ಟಿ.ಎಂ.ಸಿ ನೀರು ಪೂರೈಸಲು ಉದ್ದೇಶಿಸಲಾಗಿರುವುದನ್ನು ಹಾಗೂ ಪ್ರಸ್ತುತ ಟೆಂಡರ್ ಕಾಮಗಾರಿಯ ವಿವರಗಳನ್ನು ವ್ಯವಸ್ಥಾಪಕ ನಿರ್ದೇಶಕರು ಪ್ರಾತ್ಯಕ್ಷಿಕೆಯ ಮೂಲಕ ಮಂಡಳಿಗೆ ತಿಳಿಸಿದರು. ಈ ಕಾಮಗಾರಿಗೆ ಇಬ್ಬರು ಬಿಡ್‌ದಾರರಾದ M/s ADU Infra-M/s. Shankarnarayana Construction Pvt. Ltd. (JV) ಮತ್ತು M/s Mega Engineering & Infrastructures Ltd ಇವರುಗಳು ಭಾಗವಹಿಸಿದ್ದು, ಕನಿಷ್ಠ ಬಿಡ್‌ದಾರರಾದ M/s ADU Infra-M/s. Shankarnarayana Construction Pvt. Ltd. (JV) ರವರು ರೂ.770,96,11,117.54 ಮೊತ್ತದ ಬಿಡ್ ಸಲ್ಲಿಸಿದ್ದು, ಇದು ಪರಿಷ್ಕೃತ ಟೆಂಡರಿಗಿಟ್ಟ ಮೊತ್ತ ರೂ. 717,71,82,255/-ಗಳ ಮೇಲೆ ಶೇ.7.42 ರಷ್ಟು ಹೆಚ್ಚುವರಿಯಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

3.2 ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತದ ಅಂದಾಜು ಪಟ್ಟಿಯನ್ನು 2018-19ನೇ ಸಾಲಿನ ಜಲ ಸಂಪನ್ಮೂಲ ಇಲಾಖೆಯ ಹಾಗೂ ಲೋಕೋಪಯೋಗಿ ಇಲಾಖೆಯ ಬೆಂಗಳೂರು ದಕ್ಷಿಣ ವಲಯದ ದರಪಟ್ಟಿಯನುಸಾರ ಮತ್ತು 2018-19ನೇ ಸಾಲಿನ 4ನೇ ತ್ರೈಮಾಸಿಕ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ವಯ ತಯಾರಿಸಿ ಫೆಬ್ರವರಿ-2019ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುವುದು ಕಂಡುಬಂದಿದ್ದು, ಸದರಿ ಕಾಮಗಾರಿಯ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ:24.06.2019 ಆಗಿದ್ದು, ಅದರನ್ವಯ 2019-20ನೇ ಸಾಲಿನ ಮೊದಲನೇ ತ್ರೈಮಾಸಿಕದ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ನು ಅಳವಡಿಸಿ ಟೆಂಡರಿಗಿಟ್ಟ ಮೊತ್ತವನ್ನು ಕೆ.ಟಿ.ಪಿ.ಪಿ ನಿಯಮಾವಳಿಯನ್ವಯ ಮುಖ್ಯ ಇಂಜನೀಯರ್‌ರವರು ಪರಿಷ್ಕರಿಸಿ, ಪರಿಷ್ಕೃತ ಅಂದಾಜು ಮೊತ್ತವಾದ ರೂ.717,71,82,255/-ಗಳ ಮೇಲೆ ಬಿಡ್‌ದಾರರು ನಮೂದಿಸಿರುವ ಟೆಂಡರ್ ಮೊತ್ತವು ಶೇ.7.42 ರಷ್ಟು ಹೆಚ್ಚಾಗಿರುವುದನ್ನು ಹಾಗೂ ಪರಿಷ್ಕೃತ ಟೆಂಡರ್ ಮೊತ್ತದಲ್ಲಿ ಜಿ.ಎಸ್.ಟಿ. ಒಳಗೊಂಡಿರುವುದಿಲ್ಲದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

3.3 ಮುಂದುವರೆದು, ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ನಮೂದಿಸಿದ ಪೂರ್ವಾರ್ಹತಾ ಷರತ್ತನ್ನು ಎಲ್-1 ಬಿಡ್‌ದಾರರಾದ M/s ADU Infra-M/s. Shankarnarayana Construction Pvt. Ltd. (JV) ಪಾಲನೆ ಕುರಿತು ಬಿಡ್‌ನಲ್ಲಿ ಭಾಗವಹಿಸಿದ ಇನ್ನೊಬ್ಬ ಗುತ್ತಿಗೆದಾರರಾದ M/s Mega Engineering & Infrastructures Ltd ಇವರು ಆಕ್ಷೇಪಣೆ ಸಲ್ಲಿಸಿದ್ದು, ಈ ಬಗ್ಗೆ ಕೆಳಕಂಡ ಸ್ಪಷ್ಟೀಕರಣವನ್ನು ಆಧರಿಸಿ ಪ್ರಸ್ತುತ ಬಿಡ್‌ನ ಮೌಲ್ಯಮಾಪನವನ್ನು ಕೈಗೊಂಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಯ ಗಮನಕ್ಕೆ ತಂದರು;

- ✓ **4.2 i.e., Similar Nature of work done:**

  ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಅರ್ಹರಾದ M/s ADU Infra-M/s. Shankarnarayana Construction Pvt. Ltd. (JV) ಬಿಡ್‌ದಾರರು Similar Nature of work ಮಾಡಿಲ್ಲವೆಂಬ ಇನ್ನೊಬ್ಬ ಅರ್ಹ ಬಿಡ್‌ದಾರರಾದ M/s Mega Engineering & Infrastructures Ltd ಇವರ ಆಕ್ಷೇಪಣೆ ಪರಿಗಣಿಸಿರುವುದಿಲ್ಲ ಏಕೆಂದರೆ ಷರತ್ತಿನ ಪ್ರಕಾರ "ಗುತ್ತಿಗೆದಾರರು ಜಂಟಿಯಾಗಿ ಸ್ಪರ್ಧೆ ಮಾಡಿದಲ್ಲಿ, ಒಬ್ಬ ಗುತ್ತಿಗೆದಾರರು ಹಿಂದಿನ 5 ವರ್ಷಗಳಲ್ಲಿ ಇದೇ ರೀತಿಯ ಒಂದು ಕಾಮಗಾರಿ ಅಂದರೆ Lift irrigation Scheme

ಅಥವಾ MS pipe line work ಅಥವಾ water transmission projects with pumining station which includes MS pipe line works etc. Including supply, laying, testing and commissioning ಅಥವಾ Bulk water supply pipe involving components such as valves, valve chambers, specials, tunnel and other structures with all arrangements ನ್ನು ಪೂರ್ಣಗೊಳಿಸಿರಬೇಕಾಗಿರುತ್ತದೆ. ಪ್ರಸ್ತುತ ಬಿಡ್‌ದಾರರು JV ರೂಪದಲ್ಲಿ ಬಿಡ್ ಸಲ್ಲಿಸಿದ್ದು, ಜಂಟಿ ಪಾಲುದಾರರ ಪೈಕಿ ಒಬ್ಬರಾದ M/s. Shankarnarayana Construction Pvt. Ltd. ರವರು ನಿರ್ವಹಿಸಿದ ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆಯ ಕಾಮಗಾರಿ ನಿರ್ವಹಣಾ ಪತ್ರವನ್ನು ಅರ್ಹತೆಗಾಗಿ ಪರಿಗಣಿಸಲಾಗಿದೆ.

✓ **3(v) ರನ್ವಯ IT returns ಸಲ್ಲಿಸುವ ಬಗ್ಗೆ:**

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಅರ್ಹರಾದ M/s ADU Infra-M/s. Shankarnarayana Construction Pvt. Ltd. (JV) ಬಿಡ್‌ದಾರರು ಟೆಂಡರ್ ಅಧಿಸೂಚನೆಯ ಅರ್ಹತಾ ಷರತ್ತಿನನ್ವಯ ಹಿಂದಿನ 5 ವರ್ಷಗಳ IT returns ವಿವರಗಳನ್ನು ಸಲ್ಲಿಸಬೇಕಾಗಿದ್ದು, ಜಂಟಿ ಪಾಲುದಾರರ ಪೈಕಿ ಒಬ್ಬರ ಹಿಂದಿನ 5 ವರ್ಷಗಳ IT returns ವಿವರಗಳನ್ನು ಸಲ್ಲಿಸಿರುವುದನ್ನು ಇನ್ನೊಬ್ಬ ಅರ್ಹ ಬಿಡ್‌ದಾರರಾದ M/s Mega Engineering & Infrastructures Ltd ಇವರು ಆಕ್ಷೇಪಿಸಿದ್ದು, ಈ ಕುರಿತು ಪಡೆದ ಈ ಕೆಳಕಂಡ ಕಾನೂನಿನ ಅಭಿಪ್ರಾಯದಂತೆ ಸದರಿ ಆಕ್ಷೇಪಣೆಯನ್ನು ಪರಿಗಣಿಸಿರುವುದಿಲ್ಲ.

> *".....In view of the fact that ADU infra has taken over the business of M.Y.Kattimani with assets and liabilities as a going concern, and as such has become successor in interest, and accordingly the Income Tax Retuns submitted by one of the partners of the Firm Sri. M.Y.Kattimani could be taken into consideration for the purpose of satisfying the criteria stipulated under Clause 3 of NIT, regarding submission of Icome Tax Returns for the last five years."*

3.4 ಸದರಿ ಕಾಮಗಾರಿಯ ಅಂದಾಜುಪಟ್ಟಿಯಲ್ಲಿನ ಈ ಕೆಳಕಂಡ ಬಾಬ್ತುಗಳನ್ನು ಮಂಡಳಿಯ ಗಮನಕ್ಕೆ ತರಲಾಯಿತು.

Sl No	Type of work	Cost of work (SR 2018-19) (Amount in Rs.)	Percentage of work as per CSR 2018-19-4th Qtr Issue rates of Cement and Steel
1	EWE & Embankment	88,77,31,427.00	12.05%
2	Concrete	87,08,14,313.67	11.81%
3	Steel	29,64,98,482.34	4.02%
4	Steel flat (Pipe)	521,49,91,809.24	70.75%
5	HDPE pipe	10,12,33,800.00	1.37%

3.5 ಟೆಂಡರ್ ಪರಿಶೀಲನಾ ಸಮಿತಿಯು ಕಾಮಗಾರಿಯ ಟೆಂಡರ್‌ನ್ನು ಮಂಡಳಿಯ ಅನುಮೋದನೆಗೆ ಶಿಫಾರಸ್ಸುಮಾಡಲು ಪರಿಗಣಿಸಿರುವ ಈ ಕೆಳಕಂಡ ಅಂಶಗಳನ್ನು ಸಹ ವ್ಯವಸ್ಥಾಪಕ ನಿರ್ದೇಶಕರು ಮಂಡಳಿಯ ಗಮನಕ್ಕೆ ತಂದರು.

- ✓ ಸದರಿ ಕಾಮಗಾರಿಯು 81 ಕಿ.ಮೀ ಉದ್ದದ ಎಂ.ಎಸ್. ಪೈಪು ಅಳವಡಿಸುವ, 53.68 ಕಿ.ಮೀ ಉದ್ದದ ಹೆಚ್.ಡಿ.ಪಿ.ಇ ಅಳವಡಿಸುವ ಹಾಗೂ 283 ಮೀ ಉದ್ದದ ಸುರಂಗ ನಿರ್ಮಾಣ ಕಾಮಗಾರಿಯನ್ನು ಒಳಗೊಂಡಿದ್ದು ಇದು ಟೆಂಡರ್‌ಗಿಟ್ಟ ಮೊತ್ತದ ಶೇ.72.12 ರಷ್ಟು ಇರುತ್ತದೆ.
- ✓ ಇದು ಸ್ಪರ್ಧಾತ್ಮಕ ಟೆಂಡರ್ ಆಗಿರುತ್ತದೆ.

3.6 ಮೇಲಿನ ವಿವರಗಳನ್ನು ಹಾಗೂ ವಿಷಯಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ, ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

<u>ನಿರ್ಣಯ:</u> ನಿಗಮದ ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಪರಿಷ್ಕೃತ ಟೆಂಡರ್‌ಗಿಟ್ಟ ಮೊತ್ತವಾದ ರೂ.717,71,82,255/- ಗಳ ಮೇಲೆ ಪ್ರತಿಶತ 7.42 ರಷ್ಟು ಹೆಚ್ಚು ಟೆಂಡರ್ ಪ್ರೀಮಿಯಂನೊಂದಿಗೆ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಗುತ್ತಿಗೆದಾರರಾದ **M/s ADU Infra-M/s. Shankarnarayana Construction Pvt. Ltd. (JV)** *ಇವರಿಗೆ ಸದರಿ ಕಾಮಗಾರಿಯ ಗುತ್ತಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.*

<u>ಭಾಗ-ಸಿ: ಇತರೆ ವಿಷಯಗಳು:</u>

ವಿಷಯ ಸಂ.4: ಭದ್ರಾ ಮೇಲ್ದಂಡೆ ಯೋಜನೆ ಪ್ಯಾಕೇಜ್-04ರ ಚಿತ್ರದುರ್ಗ ಶಾಖಾ ಕಾಲುವೆಯ ಕಾಮಗಾರಿಗಾಗಿ ಭೂಸ್ವಾಧೀನಗೊಂಡಿರುವ ಅಜ್ಜಂಪುರ ತಾ|| ಶಿವನಿ ಹೋಬಳಿ ಅಬ್ಬಿನಹೊಳಲು ಗ್ರಾಮದ ಜಮೀನುಗಳಿಗೆ ನಿಗದಿಯಾಗಿರುವ ಅವಾರ್ಡ್ ಮೊತ್ತವನ್ನು ಪಕ್ಕದ ಗ್ರಾಮವಾದ ಹೆಬ್ಬೂರು ಗ್ರಾಮದ ಜಮೀನುಗಳಿಗೆ ನಿಗದಿಯಾಗಿರುವ ದರದಲ್ಲಿ ಪರಿಷ್ಕರಿಸುವ ಕುರಿತು.

ವಿಷಯದ ಪ್ರಸ್ತಾವನೆ ಕುರಿತಂತೆ ಈ ಕೆಳಕಂಡ ಅಂಶಗಳನ್ನು ವ್ಯವಸ್ಥಾಪಕ ನಿರ್ದೇಶಕರವರು ಮಂಡಳಿಗೆ ತಿಳಿಸಿದರು.

- ✓ ಭದ್ರಾ ಮೇಲ್ದಂಡೆ ಯೋಜನೆಯ ಪ್ಯಾಕೇಜ್-4ರ ಚಿತ್ರದುರ್ಗ ಶಾಖಾ ಕಾಲುವೆಯ ಕಾಮಗಾರಿಗಾಗಿ ಭೂಸ್ವಾಧೀನಗೊಳ್ಳುತ್ತಿರುವ ಅಜ್ಜಂಪುರ ತಾ|| ಶಿವನಿ ಹೋಬಳಿ ಅಬ್ಬಿನಹೊಳಲು ಗ್ರಾಮದ ಜಮೀನುಗಳಿಗೆ ನಿಗದಯಾಗಿರುವ ಅವಾರ್ಡ್ ಮೊತ್ತವನ್ನು ಪಕ್ಕದ ಗ್ರಾಮವಾದ ಹೆಬ್ಬೂರು ಗ್ರಾಮದ ಜಮೀನುಗಳಿಗೆ ನಿಗದಿಯಾಗಿರುವ ದರದಂತೆ ನಿಗದಿಪಡಿಸಲು ಭೂಮಾಲೀಕರು ಒತ್ತಾಯಿಸಿ ಕಾಮಗಾರಿ ನಿರ್ವಹಣೆಗೆ ಅಡ್ಡಿಪಡಿಸುತ್ತಿರುವುದು.
- ✓ ಪ್ರಸಕ್ತ ಸಾಲಿನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಡಿ ಮೊದಲನೇ ಹಂತದಲ್ಲಿ ಭದ್ರಾ ಜಲಾಶಯದಿಂದ ನೀರನ್ನೆತ್ತಿ ಅಜ್ಜಂಪುರ ಸುರಂಗ ಮಾರ್ಗದ ಮುಖಾಂತರ ವಾಣಿವಿಲಾಸ ಸಾಗರ ಜಲಾಶಯಕ್ಕೆ ಪ್ರಾಯೋಗಿಕವಾಗಿ ನೀರು ಪೂರೈಸಲು ಯೋಜಿಸಿದ್ದು, ಈ ಗುರಿ ಸಾಧನೆಗಾಗಿ

ಪ್ಯಾಕೇಜ್-4ರ ಚಿತ್ರದುರ್ಗ ಶಾಖಾ ಕಾಲುವೆಯ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವ ಅವಶ್ಯಕತೆ.

✓ ಅಬ್ಬಿನಹೊಳಲು ಮತ್ತು ಅಕ್ಕಪಕ್ಕದ ಹೆಬ್ಬೂರು ಹಾಗೂ ಮುಗಳಿ ಗ್ರಾಮದ ಜಮೀನಿನ ಮಾರುಕಟ್ಟೆ ದರಗಳು ಈ ಕೆಳಗಿನಂತೆ ಇರುವುದು.

- ಹೆಬ್ಬೂರು ಗ್ರಾಮದ ಖುಷ್ಕಿ ಜಮೀನಿನ ದರ ಗುಂಟೆ ಒಂದಕ್ಕೆ ರೂ.13569/-
- ಅಬ್ಬಿನಹೊಳಲು ಗ್ರಾಮದ ಖುಷ್ಕಿ ಜಮೀನಿನ ದರ ಗುಂಟೆ ಒಂದಕ್ಕೆ ರೂ.2505/-
- ಮುಗಳಿ ಗ್ರಾಮದ ಖುಷ್ಕಿ ಜಮೀನಿನ ದರ ಗುಂಟೆ ಒಂದಕ್ಕೆ ರೂ.26324/-

✓ ಅಬ್ಬಿನಹೊಳಲು ಗ್ರಾಮದ 44ಎ-20ಗು ಜಮೀನನ್ನು ಹೊಸ ಭೂಸ್ವಾಧೀನ ಕಾಯ್ದೆ ಅನ್ವಯ ಸ್ವಾಧೀನಪಡಿಸಿಕೊಳ್ಳಲು ರೂ.2,30,51,189/-ಗಳಾಗುತ್ತದೆ. ಆದರೆ, ಅಬ್ಬಿನಹೊಳಲು ಗ್ರಾಮದ ಭೂಮಾಲಿಕರು ಆಸುಪಾಸಿನ ಗ್ರಾಮುಗಳ ದರಗಳನ್ನು ನೀಡಲು ಆಗ್ರಹಿಸುತ್ತಿರುವುದು.

✓ 2013ರ ಭೂಸ್ವಾಧೀನ ಕಾಯ್ದೆಯ ಕಲಂ 26 ರಡಿ ಹೆಬ್ಬೂರು ಗ್ರಾಮದ ಜಮೀನಿನ ದರಕ್ಕೆ ಹೋಲಿಸಿ ಭೂಸ್ವಾಧೀನಾಧಿಕಾರಿ & ಉಪವಿಭಾಗಾಧಿಕಾರಿ, ತರೀಕೆರೆ ಉಪವಿಭಾಗ, ತರೀಕೆರೆ ಇವರು ಅಬ್ಬಿನಹೊಳಲು ಗ್ರಾಮದ 44ಎ-20ಗು ಜಮೀನುಗಳಿಗೆ ನಿಗದಿಯಾಗಿರುವ ಅವಾರ್ಡ್ ಮೊತ್ತವನ್ನು ಪರಿಷ್ಕರಿಸಿ ವ್ಯತ್ಯಾಸವಾಗುವ ಹೆಚ್ಚುವರಿ ರೂ.8,92,35,010/-ಗಳ ಮೊತ್ತವನ್ನು ಭೂಕೋರಿಕೆ ಸಂಸ್ಥೆ ಅಂದರೆ ನಿಗಮವು ಪಾವತಿಸಲು ಸಹಮತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುವುದು.

✓ ಅಬ್ಬಿನಹೊಳಲು ಗ್ರಾಮದ ಜಮೀನಿನಲ್ಲಿ ನಿರ್ವಹಿಸಬೇಕಾದ ಕಾಮಗಾರಿ ಚಿತ್ರದುರ್ಗ ಶಾಖಾ ಕಾಲುವೆಯ ಪ್ರಾರಂಭಿಕದಲ್ಲಿ ಬರುತ್ತಿದ್ದು, ಕಾಲುವೆಯ ಮುಂದಿನ ರೀಚ್‌ನ ಕಾಮಗಾರಿಗಳು ಪೂರ್ಣಗೊಂಡಿದ್ದು, ಕಾಲುವೆಯಲ್ಲಿ ನೀರು ಹರಿಸಲು ಸದರಿ ಜಮೀನಿನಲ್ಲಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕಾಗಿರುವ ಅಗತ್ಯತೆ ಇರುವುದು.

4.2 ಚರ್ಚೆಯ ನಂತರ ಮೇಲಿನ ಅಂಶಗಳನ್ನು ಪರಿಗಣಿಸಿ ಮಂಡಳಿಯು ಅಬ್ಬಿನಹೊಳಲು ಗ್ರಾಮದ ಭೂಮಾಲೀಕರ/ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ಇನ್ನು ಮುಂದೆ ಇದೇ ರೀತಿಯ ಪ್ರಕರಣಗಳಲ್ಲಿ ಪೂರ್ವ ನಿರ್ದೇಶನ ಉಂಟಾಗದಂತೆ ಸೂಕ್ತ ಪರಿಹಾರಧನವನ್ನು ನಿರ್ಧರಿಸಿ ವಿತರಿಸುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರವರು ಪರಿಶೀಲಿಸಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಮಂಡಳಿಯು ಸೂಚಿಸಿತು.

ವಿಷಯ ಸಂ.5: ಸಕಲೇಶಪುರ ತಾಲ್ಲೂಕು ಹೆಬ್ಬಸಾಲೆ ಗ್ರಾಮದ ಸರ್ವೆ ನಂ.48/2 ರಲ್ಲಿ 21 ಗುಂಟೆ ಜಮೀನನ್ನು ರೂ.10.00 ಲಕ್ಷ One time licence fee ಪಾವತಿಸಿ Right of Use ಮೂಲಕ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಜಮೀನು ಪಡೆಯಲು ಅನುಮೋದನೆ ನೀಡುವ ಕುರಿತು.

ವಿಷಯದ ಪ್ರಸ್ತಾವನೆ ಕುರಿತಂತೆ ಈ ಕೆಳಕಂಡ ವಿವರಗಳನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

✓ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಪ್ಯಾಕೇಜ್ 1, 2 ಮತ್ತು 5 ರ ಪೈಪ್ ಲೈನ್ ಸಕಲೇಶಪುರ ತಾಲ್ಲೂಕು ಕಸಬಾ ಹೋಬಳಿ ಹೆಬ್ಬಸಾಲೆ ಗ್ರಾಮದ ಮುಖಾಂತರ

ಹಾದು ಹೋಗುತ್ತಿದ್ದು, ಸದರಿ ಪಂಕ್ತೀಕರಣವನ್ನು ತಾಂತ್ರಿಕವಾಗಿ ಎಲ್ಲಾ ಪರ್ಯಾಯ ಮಾರ್ಗಗಳನ್ನು ಪರಿಶೀಲಿಸಿದ ನಂತರ ಅಂತಿಮಗೊಳಿಸಲಾಗಿರುತ್ತದೆ.

- ✓ ಹೆಬ್ಬಸಾಲೆ ಗ್ರಾಮದಲ್ಲಿರುವ ಶ್ರೀ ಎನ್.ಪಿ.ಮಲ್ಲೇಶ್ ಹಾಗೂ ಶ್ರೀಮತಿ ಎಸ್.ಎಂ.ಇಂಪಾ ರವರಿಗೆ ಸೇರಿದ ವಿವಿಧ ಸರ್ವೆ ನಂಬರ್‌ಗಳಲ್ಲಿನ 2ಎ-38ಗು ಹಾಗೂ 1ಎ-27ಗು ಜಮೀನನ್ನು ಯೋಜನೆಗೆ ನೀಡಲು ವಿರೋಧಿಸಿ ಉಚ್ಛ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ.
- ✓ ಸಧರಿಯವರು ನೇರ ಖರೀದಿಗೆ ಒಪ್ಪದೇ ಇದ್ದುದರಿಂದ, ಸದರಿ ಜಮೀನಿನ ಭೂಸ್ವಾಧೀನಕ್ಕಾಗಿ 11(1) ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.
- ✓ ಇವರನ್ನು ನೇರ ಖರೀದಿಗೆ ಒಪ್ಪಿಸಲು ಅನೇಕ ಬಾರಿ ಪ್ರಯತ್ನಿಸಿದ್ದು, ಸದರಿಯವರು ದಿ: 09.04.2019 ರಂದು 0-21ಗು ಜಮೀನನ್ನು ಹೊರತುಪಡಿಸಿ ಉಳಿದ ಜಮೀನನ್ನು ನೇರ ಖರೀದಿಯ ಮೂಲಕ ಕಾಮಗಾರಿಗೆ ನೀಡಲು ಒಪ್ಪಿಕೊಂಡಿರುತ್ತಾರೆ. ಸದರಿ 0-21ಗು ಜಮೀನು ಅವರ ಉಳಿದ ಜಮೀನು ಮತ್ತು ಸ್ವತ್ತುಗಳಿಗೆ ದಾರಿಯಾಗಿರುವುದರಿಂದ ಈ ಜಮೀನಿನಲ್ಲಿ ಪೈಪುಗಳನ್ನು ಅಳವಡಿಸಲು ರೂ.10.00 ಲಕ್ಷ One time licence fee ಪಾವತಿಸಿ ಕಾಮಗಾರಿ ನಿರ್ವಹಿಸಲು ಸಹಮತಿ ವ್ಯಕ್ತಪಡಿಸಿ ಇದಕ್ಕಾಗಿ Right of Use ಮೂಲಕ ಯೋಜನೆಗೆ ಸದರಿ ಜಮೀನನ್ನು ನೀಡಲು ಭೂಮಾಲೀಕರಾದ ಶ್ರೀ ಎನ್.ಪಿ.ಮಲ್ಲೇಶ್ ರವರು ಒಪ್ಪಿರುತ್ತಾರೆ. ಅಲ್ಲದೆ, ಸದರಿಯವರು ಉಚ್ಛ ನ್ಯಾಯಾಲಯದಲ್ಲಿ ಹೂಡಿದ ದಾವೆಯನ್ನು ಹಿಂಪಡೆಯಲು ಒಪ್ಪಿರುತ್ತಾರೆ.
- ✓ ಈ ಕುರಿತಂತೆ, ನಿಗಮವು ಸದರಿ ಜಮೀನು ಮಾಲೀಕರ ಜೊತೆ ನಿಗಮದ ಹಿತಾಸಕ್ತಿ ಕಾಪಾಡಲು ಹಲವಾರು ಷರತ್ತುಗಳನ್ನು ವಿಧಿಸಿ MOU ಮಾಡಿಕೊಳ್ಳಲಾಗಿರುತ್ತದೆ. ಇದರನ್ವಯ, ಸದರಿ 0-21 ಗುಂಟೆ ಜಮೀನಿಗೆ ರೂ.10.00 ಲಕ್ಷ One time licence fee ಪಾವತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

5.2 ಚರ್ಚೆಯ ನಂತರ ವ್ಯವಸ್ಥಾಪಕ ನಿರ್ದೇಶಕರು Right of Use ಆಧಾರದ ಮೇಲೆ 0-21 ಗುಂಟೆ ಜಮೀನನ್ನು ಶ್ರೀ ಎನ್.ಪಿ.ಮಲ್ಲೇಶ್ ರವರಿಂದ ರೂ.10.00 ಲಕ್ಷ One time licence fee ಪಾವತಿಸಿ ಪಡೆಯಲು ತೆಗೆದುಕೊಂಡ ಮೇಲಿನ ಕ್ರಮಕ್ಕೆ ಮಂಡಳಿಯು ಘಟನೋತ್ತರ ಅನುಮೋದನೆ ನೀಡಿತು.

<u>ಹೆಚ್ಚುವರಿ ವಿಷಯ:</u>

ವಿಷಯ ಸಂ.6:ಕರ್ನಾಟಕ ಸರ್ಕಾರಕ್ಕೆ ಈಕ್ವಿಟಿ ಷೇರುಗಳ ಹಂಚಿಕೆ.

ನಿಗಮದ ಅಧಿಕೃತ ಷೇರು ಬಂಡವಾಳವು ರೂ. 5,000 ಕೋಟಿಗಳಾಗಿದ್ದು, ನಿಗಮದ ಯೋಜನೆಗಳ ಅನುಷ್ಠಾನಕ್ಕಾಗಿ ಹಾಗೂ ಸಾಲ ಮರುಪಾವತಿಗಾಗಿ ಸರ್ಕಾರವು ತನ್ನ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನಕ್ಕೆ ಎದುರಾಗಿ ನಿಗಮವು ಕರ್ನಾಟಕ ಸರ್ಕಾರಕ್ಕೆ ಕಾಲಕಾಲಕ್ಕೆ ಈಕ್ವಿಟಿ ಷೇರುಗಳನ್ನು ಹಂಚಿಕೆ ಮಾಡುತ್ತಿದ್ದು, ಇಲ್ಲಿಯವರೆಗೆ ಸ್ವೀಕರಿಸಿದ ರೂ.3,60,734.27 ಲಕ್ಷಗಳಿಗೆ ದಿನಾಂಕ:28.06.2019ರ ವರೆಗೆ ರೂ.3,15,765.76 ಲಕ್ಷ ಮೊತ್ತದ ಈಕ್ವಿಟಿ ಷೇರುಗಳನ್ನು ಸರ್ಕಾರಕ್ಕೆ ಹಂಚಿಕೆ ಮಾಡಿದ್ದು, ಬಾಕಿ ಇರುವ ರೂ.44,968.51 ಲಕ್ಷಗಳ ಮೊತ್ತಕ್ಕೆ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನವಾದ ರೂ. 26,006.97 ಲಕ್ಷಗಳ ಮೊತ್ತವನ್ನು ಹೊರತುಪಡಿಸಿ ಉಳಿಕೆ ರೂ. 18,961.54 ಲಕ್ಷಗಳ ಮೊತ್ತಕ್ಕೆ ಸರ್ಕಾರಕ್ಕೆ ಈಕ್ವಿಟಿ ಷೇರುಗಳನ್ನು ಹಂಚಿಕೆ ಮಾಡಲು ಪ್ರಸ್ತಾಪಿಸಿರುವಂತೆ ಮಂಡಳಿಯು ಈ ಕೆಳಕಂಡ ಗೊತ್ತುವಳಿಯನ್ನು ಆಂಗ್ಲ ಭಾಷೆಯಲ್ಲಿ ಸ್ವೀಕರಿಸಿತು.

(i) "**RESOLVED THAT**, 18,96,154 equity shares of Rs.1,000 each be and are hereby issued and allotted to the Government of Karnataka towards the outstanding amount of grants received up to 20.09.2019."

(ii) "**FURTHER RESOLVED THAT**, Sri G.S. Prakash, Company Secretary, VJNL be is hereby authorized to file Return of allotment with Registrar of Companies, Bangalore".

(iii) "**RESOLVED FURTHER THAT** the share certificates be issued to the allottees under the Common Seal of the company be affixed in accordance with the Article 135 of the Articles of Association of the Company"

ವಿಷಯ ಸಂ.7: ಮೈಸೂರು ಮೆರ್ಕಂಟೈಲ್ ಕಂ. ಲಿಮಿಟೆಡ್ ರವರು ತಮ್ಮ ಸಂಸ್ಥೆಯ ಕಿರು ಜಲ ವಿದ್ಯುತ್ ಸ್ಥಾವರದ ಪ್ರದೇಶದಲ್ಲಿ ಎತ್ತಿನಹೊಳೆ ಕಾಮಗಾರಿಯಿಂದ ಹಾನಿ ಉಂಟಾಗುತ್ತಿದೆ ಎಂದು ಆಪಾದಿಸಿ ಅದನ್ನು ಸರಿಪಡಿಸುವ ಕುರಿತು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಿಸಿರುವ ದಿನಾಂಕ:20.09.2019 ರ ಮನವಿ ಕುರಿತು.

7.1 ಎಂ.ಎಂ.ಸಿ.ಎಲ್ ಸಂಸ್ಥೆ ವಿಷಯದ ಮನವಿಯಲ್ಲಿ ಮಾಡಿರುವ ಆಪಾದನೆಗಳು ಈ ಕೆಳಕಂಡ ವಿವರಣೆಯಿಂದಾಗಿ ಸತ್ಯಕ್ಕೆ ದೂರವಾಗಿರುವುದನ್ನು ಹಾಗೂ ಈ ಸಂಸ್ಥೆ ಎತ್ತಿನಹೊಳೆ ಯೋಜನೆಯ ಅನುಷ್ಠಾನಕ್ಕೆ ಅಡೆತಡೆ ಉಂಟು ಮಾಡುತ್ತಿರುವುದನ್ನು ಮಂಡಳಿಯ ಗಮನಕ್ಕೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ತಂದರು.

i) ಮೊಟ್ಟ ಮೊದಲಿಗೆ ಹೇಳುವುದಾದರೆ ಎಂ.ಎಂ.ಸಿ.ಎಲ್ ಸಂಸ್ಥೆಯು ಎತ್ತಿನಹೊಳೆ ಯೋಜನೆಯ ಪ್ರಾರಂಭಿಕ ಹಂತದಲ್ಲಿಯೇ ಈ ಯೋಜನೆಯ ಅನುಷ್ಠಾನವನ್ನು ಪ್ರಮುಖವಾಗಿ ನೀರಿನ ಲಭ್ಯತೆ ಪ್ರಶ್ನಿಸಿ ವಿರೋಧಿಸಿರುತ್ತಾರೆ. ಈ ಕುರಿತು ಕರ್ನಾಟಕ ಮತ್ತು ಭಾರತ ಸರ್ಕಾರದ ಹಲವಾರು ಪ್ರಾಧಿಕಾರಗಳಿಗೆ ಕಾನೂನಿನ ನೋಟಿಸನ್ನು ಫೆಬ್ರವರಿ 2016ರಲ್ಲಿ ನೀಡಿದ್ದು ಇವರು ವಿರೋಧಿಸಿರುವ ಎಲ್ಲಾ ಅಂಶಗಳಿಗೂ ನಿಗಮದ ವಕೀಲರಿಂದ ಸೂಕ್ತ ಉತ್ತರ ನೀಡಲಾಗಿದ್ದು, ಈ ಪ್ರಕ್ರಿಯೆಯನ್ನು ಅಂದಿನಂತೆ ಮುಕ್ತಾಯಗೊಳಿಸಲಾಗಿತ್ತು.

ii) ಎಂ.ಎಂ.ಸಿ.ಎಲ್‌ರವರು 3MW ಸಾಮರ್ಥ್ಯದ Mini Hydel Project ನಡೆಸಲು ಸರ್ಕಾರದಿಂದ ಸೆಪ್ಟೆಂಬರ್ 2009ರಲ್ಲಿ ಪರವಾನಗಿ ಪಡೆದಿದ್ದು, ಸರ್ಕಾರದ ಆದೇಶದಲ್ಲಿ ವಿಧಿಸಿದ ಕೆಲವು ಪ್ರಮುಖ ಷರತ್ತುಗಳನ್ನು ಪಾಲಿಸದೆ (ಸಿವಿಲ್ ಕಾಂಪೋನೆಂಟ್‌ಗಳ ವಿನ್ಯಾಸ ಮತ್ತು ನಕ್ಷೆಗಳಿಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಹಾಗೂ ಸಕ್ಷಮ ಪ್ರಾಧಿಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳುವುದು) ಸದರಿ ವಿದ್ಯುತ್ ಸ್ಥಾವರವನ್ನು ನಡೆಸಿದ್ದು, ಸರ್ಕಾರ ನೀಡಿದ್ದ ಪರವಾನಗಿಯು ದಿನಾಂಕ:08.07.2014ರಲ್ಲಿ ಮುಕ್ತಾಯಗೊಂಡಿದ್ದರೂ ಕೂಡಾ ವಿದ್ಯುತ್ ಸ್ಥಾವರವನ್ನು ಅನಧಿಕೃತವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

iii) ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರು ದಿನಾಂಕ: 24.07.2018ರ ಪತ್ರದಲ್ಲಿ ಮೆ|| ಮೈಸೂರ್ ಮರ್ಕಂಟೈಲ್ ಲಿ. ರವರು ಸರ್ಕಾರದ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪೂರ್ಣ ಪ್ರಮಾಣದಲ್ಲಿ ಪಾಲಿಸದೆ ಇರುವುದರಿಂದ ಸದರಿ ಕಂಪನಿಯವರ ಪರವಾನಗಿಯನ್ನು ನವೀಕರಿಸುವ ಅವಶ್ಯಕತೆ ಕಂಡುಬರುವುದಿಲ್ಲವೆಂದು ಹಾಗೂ ನೀರನ್ನು ಉಪಯೋಗಿಸಿರುವುದಕ್ಕೆ ರಾಜಧನವನ್ನು ಸಹ ಪಾವತಿಸದೆ ಇರುವುದರಿಂದ ಕಂಪನಿಗೆ ದಂಡ ವಿಧಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯವನ್ನು ಸರ್ಕಾರದ ಅವಗಾಹನೆಗೆ ಸಲ್ಲಿಸಿರುತ್ತಾರೆ.

iv) MMCL ರವರು ಸದರಿ ವಿದ್ಯುತ್ ಸ್ಥಾವರವನ್ನು ನಡೆಸಲು ನೀಡಿರುವ ಪರವಾನಗಿಯಲ್ಲಿ ವಿಧಿಸಿರುವ ಈ ಕೆಳಕಂಡ ಷರತ್ತುಗಳು ಗಮನಾರ್ಹವಾಗಿರುತ್ತವೆ:

- ಷರತ್ತಿನ ಕ್ರಮ ಸಂಖ್ಯೆ: 3 ಮುಂದೆ ಸರ್ಕಾರವು ಈ ಪ್ರದೇಶದಲ್ಲಿ ಯಾವುದೇ ನೀರಾವರಿ ಯೋಜನೆ ಅಥವಾ ಇನ್ನಾವುದೇ ಯೋಜನೆಯನ್ನು ಕೈಗೆತ್ತಿಕೊಂಡು ಸದರಿ ಜಲ ವಿದ್ಯುತ್ ಯೋಜನೆ ಮುಳುಗಡೆಯಾದಲ್ಲಿ ಸಂಸ್ಥೆಯವರು ಸರ್ಕಾರದಿಂದ ಯಾವುದೇ ಪರಿಹಾರ ಧನಕ್ಕೆ ಅರ್ಹರಿರುವುದಿಲ್ಲ.
- ಷರತ್ತಿನ ಕ್ರಮ ಸಂಖ್ಯೆ: 14. ಯಾವುದೇ ಕಾರಣಕ್ಕೂ, ಯಾವುದೇ ಸಮಯದಲ್ಲೂ ನದಿಯಲ್ಲಿ ನೀರಿಲ್ಲದೆ ವಿದ್ಯುತ್ ಸ್ಥಾವರ ಸ್ಥಗಿತಗೊಂಡಲ್ಲಿ, ಸದರಿ ನಷ್ಟಕ್ಕೆ ಸರ್ಕಾರದಿಂದ ಯಾವುದೇ ಪರಿಹಾರ ನೀಡಲಾಗುವುದಿಲ್ಲ.
- ಷರತ್ತಿನ ಕ್ರಮ ಸಂಖ್ಯೆ: 15. ಕಾಮಗಾರಿಗಳನ್ನು ನಿರ್ವಹಿಸುವಾಗ ಯಾವುದೇ ವಿವಾದಗಳು ಬಂದಲ್ಲಿ, ಜಲ ಸಂಪನ್ಮೂಲ ಇಲಾಖೆಯ ತೀರ್ಮಾನವೇ ಅಂತಿಮ. ಯಾವುದೇ ವಿವಾದಗಳು ಕಾಮಗಾರಿಗಳನ್ನು ನಿರ್ವಹಿಸುವಾಗ ಹಾಗೂ ಯೋಜನೆ ಕಾರ್ಯರೂಪದಲ್ಲಿದ್ದಾಗ ಉದ್ಭವಿಸಿದರೆ, ಈ ವಿವಾದಗಳನ್ನು ಕಂಪನಿಯೇ ಇತ್ಯರ್ಥಗೊಳಿಸಬೇಕಾಗುತ್ತದೆ. ಈ ಇತ್ಯರ್ಥದಲ್ಲಿ ಸರ್ಕಾರಕ್ಕೆ ತಗಲಬಹುದಾದ ವೆಚ್ಚವನ್ನು ಕಂಪನಿಯು ಸರ್ಕಾರಕ್ಕೆ ಭರಿಸತಕ್ಕದ್ದು.
- ಷರತ್ತಿನ ಕ್ರಮ ಸಂಖ್ಯೆ: 16. ಈ ಪರವಾನಗಿಯು ಸರ್ಕಾರಿ ಆದೇಶ ಹೊರಡಿಸಿದ ದಿನಾಂಕದಿಂದ 5 (ಐದು ವರ್ಷಗಳವರೆಗೆ) ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಪರವಾನಗಿಯನ್ನು ನವೀಕರಿಸಿಕೊಳ್ಳತಕ್ಕದ್ದು.
- ಷರತ್ತಿನ ಕ್ರಮ ಸಂಖ್ಯೆ: 17. ಈ ಐದು ವರ್ಷಗಳೊಳಗಾಗಿ ಯಾವುದೇ ಕಾರಣಗಳು ಉದ್ಭವಿಸಿದಲ್ಲಿ ಸರ್ಕಾರವು ಅಥವಾ ಅದರ ಪ್ರತಿನಿಧಿ ಯಾವುದೇ ಕಾರಣಗಳು ನೀಡದೆ ಪರವಾನಗಿಯನ್ನು ರದ್ದುಪಡಿಸಬಹುದು.

v) ನಿಗಮದ ಕಾಮಗಾರಿಯಿಂದ ಎಂ.ಎಂ.ಸಿ.ಎಲ್ ಸಂಸ್ಥೆಗೆ ಯಾವುದೇ ಹಾನಿಯಾಗಿರುವುದಿಲ್ಲ ಅದೂ ಅಲ್ಲದೆ ಮೇಲಿನ ಷರತ್ತುಗಳಿಂದಾಗಿ ಎಂ.ಎಂ.ಸಿ.ಎಲ್ ಸಂಸ್ಥೆಗೆ ಉಂಟಾಗುವ ಯಾವುದೇ ಹಾನಿಗೆ ನಿಗಮ/ಸರ್ಕಾರ ಹೊಣೆಯಾಗಿರುವುದಿಲ್ಲ.

vi) ಎಂ.ಎಂ.ಸಿ.ಎಲ್ ಸಂಸ್ಥೆಯವರು ವಿದ್ಯುತ್ ಸ್ಥಾವರವನ್ನು ನಡೆಸುವ ಕುರಿತಂತೆ ಸರ್ಕಾರ ದಿನಾಂಕ:23.08.2013ರ ಪತ್ರದಲ್ಲಿ ನೀಡಿರುವ ನಿರ್ದೇಶನ ಈ ಕೆಳಕಂಡಂತಿರುತ್ತದೆ.

ಸರ್ಕಾರವು ಎತ್ತಿನಹೊಳೆ ನದಿಗೆ ಅಡ್ಡಲಾಗಿ ಮೆ|| ಮೈಸೂರ್ ಮರ್ಕಂಟೈಲ್ ಲಿ. ರವರು ಈಗಾಗಲೇ ಕಿರು ವಿದ್ಯುತ್ ಯೋಜನೆಯನ್ನು ಪ್ರಾರಂಭ ಮಾಡಿ ವಿದ್ಯುತ್ ಉತ್ಪಾದಿಸುತ್ತಿದ್ದು, ಈ ಹಿನ್ನೆಲೆಯಲ್ಲಿ ಎತ್ತಿನಹೊಳೆ ತಿರುವು ಯೋಜನೆ ಪ್ರಾರಂಭ ಮಾಡುವ ವರೆಗೆ ಕಂಪನಿಯು ಜಲ ವಿದ್ಯುತ್‌ನ್ನು ಉತ್ಪಾದಿಸಬಹುದಾಗಿದ್ದು, ಒಂದು ವೇಳೆ ಎತ್ತಿನಹೊಳೆ ತಿರುವು ಯೋಜನೆಯ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಈ ಜಲ ವಿದ್ಯುತ್ ತಯಾರಿಕ ಘಟಕದಿಂದ ಏನಾದರು ತೊಂದರೆ ಆದಲ್ಲಿ ಮಾತ್ರ ಸದರಿ ಘಟಕವನ್ನು ಸ್ಥಗಿತಗೊಳಿಸಿ ಎತ್ತಿನಹೊಳೆ ತಿರುವು ಯೋಜನೆಯ ಕಾಮಗಾರಿಯನ್ನು ಕೈಗೊಳ್ಳಲು ಸಹಕರಿಸಬೇಕೆಂದು ಸೂಚಿಸಬಹುದಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕನೀನಿ ರವರು ದಿನಾಂಕ: 09.07.2013 ರಂದು ಮಾಡಿರುವ ಶಿಫಾರಸ್ಸಿನ ಅನುಸಾರ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

vii) MMCL ರವರು ಮಾನ್ಯ ಕರ್ನಾಟಕ ಲೋಕಾಯುಕ್ತದಲ್ಲಿ ಎರಡು ಬಾರಿ ಎತ್ತಿನಹೊಳೆ ಕಾಮಗಾರಿಯ ವಿರುದ್ಧ ಹಾಗೂ ತಮ್ಮ ಆಸ್ತಿಗೆ ನಷ್ಟವಾಗುತ್ತಿದೆ ಎಂದು ದೂರನ್ನು ಸಲ್ಲಿಸಿದ್ದು

ಇದನ್ನು ಮಾನ್ಯ ಕರ್ನಾಟಕ ಲೋಕಾಯುಕ್ತವು ವಿಲೇವಾರಿ ಮಾಡಿರುತ್ತದೆ. ಮೊದಲನೇ ದೂರಿನಲ್ಲಿ ಲೋಕಾಯುಕ್ತ ಈ ಕೆಳಕಂಡಂತೆ ತನ್ನ ಅಭಿಪ್ರಾಯವನ್ನು ದಾಖಲಿಸಿರುತ್ತದೆ.

> *"IT is also seen that the complainant had got some personal interest in the matter with regard to renewal of his Hydle Project of nearby the Yettinahole Project. The Yettinahole Project has been taken up by Government of Karnataka with a purpose to provide drinking water to many districts which have facing acute Drinking water problem. Since some years the project is being implemented and thousands of crores must have been invested by this time. Since the complainant has not specifically stated his real grievances with supporting material, it is not proper to take up the investigation. Because, if the investigation has taken up and notice is ordered, it may create the problem at the spot and the work may be hampered. However, if there are any deficiencies, lapses and it is causing injury or inconvenience to public, the complainant has got every right to approach this institution for necessary reliefs. But, at present the complainant has not produced any documents to show that anybody in the locality has raised objections with regard to any inconvenience due to implementation of the scheme. Except producing copies of photos which show the work being going on, no other material is placed to show that due to implementation of the project large number of people is facing problems.*
>
> *Therefore, at present it is not proper to take up the investigation."*

viii) ಎರಡನೇ ದೂರನ್ನು ನಿಗಮವು ಎಂ.ಎಂ.ಸಿ.ಎಲ್‌ರವರೊಡನೆ ಗುತ್ತಿಗೆದಾರರು ಸೇರಿದಂತೆ ಮಾಡಿಕೊಂಡಿರುವ ತ್ರಿಪಕ್ಷೀಯ ಕರಾರಿನನ್ವಯ ಎತ್ತಿನಹೊಳೆ ಕಾಮಗಾರಿಯಿಂದಾಗಿ MMCL ರವರ ಸ್ವತ್ತಿಗೆ ಏನಾದರೂ ಹಾನಿ ಉಂಟಾದಲ್ಲಿ ದುರಸ್ತಿ ಮಾಡಿ ಕೊಡಲಾಗುವುದೆಂಬ ಒಡಂಬಡಿಕೆ ಇರುವುದರಿಂದ ದೂರನ್ನು ಹಿಂಪಡೆದಿದ್ದು ಅದರಂತೆ ಮಾನ್ಯ ಲೋಕಾಯುಕ್ತರು ಆದೇಶಿಸಿರುತ್ತಾರೆ.

ix) MMCL ರವರು ತ್ರಿಪಕ್ಷೀಯ ಒಪ್ಪಂದವನ್ನು ಮಾಡಿಕೊಂಡಿದ್ದರೂ ಕೂಡ ನಿಗಮ/ಗುತ್ತಿಗೆದಾರರಿಗೆ ತ್ರಿಪಕ್ಷೀಯ ಒಪ್ಪಂದದ ಪ್ರಕಾರ ತಮ್ಮ ಕೆಲಸಗಳನ್ನು ಮಾಡಿಸಿಕೊಂಡು ನಿಗಮದ ಕಾಮಗಾರಿಯನ್ನು ಮಾಡಲು ಅವಕಾಶ ಕೊಡದೆ ನಿಗಮದ ಮೇಲೆ ಸುಳ್ಳು ಆರೋಪಹೊರಿಸಿ ನ್ಯಾಯಾಲಯದಲ್ಲಿ ದಾವೆ ಹೂಡಿ ಅವರ ಜಮೀನಿನಲ್ಲಿ ನಿಗಮದ ಕಾಮಗಾರಿಯನ್ನು ನಿರ್ವಹಿಸದಂತೆ ನಿರ್ಬಂಧನೆ ತಂದಿರುತ್ತಾರೆ. ಇದೂ ಅಲ್ಲದೆ ದಿನಂಪ್ರತಿ ತಮ್ಮ ಸ್ವತ್ತಿಗೆ ಹಾನಿ ಉಂಟಾಗುತ್ತಿದೆ ಎಂದು ಪತ್ರ ವ್ಯವಹಾರ ನಡೆಸುತ್ತಿರುತ್ತಾರೆ. ನಿಗಮವು MMCL ರವರ ಸ್ವತ್ತಿನಲ್ಲಿ ಯಾವುದೇ ಕಾಮಗಾರಿ ನಿರ್ವಹಿಸಲು ಅವಕಾಶ ನೀಡಿರುವುದಿಲ್ಲವಾಗಿ ಅವರು ಮಾಡುತ್ತಿರುವ ಆರೋಪ ಸತ್ಯಕ್ಕೆ ದೂರವಾದುದೆಂದು ಮತ್ತು ಅತಿವೃಷ್ಟಿಯಿಂದ ತಮ್ಮ ಸ್ಥಳದ ಯಾವುದೋ ದಿಕ್ಕಿನಲ್ಲಾದ ಭೂ ಕುಸಿತವನ್ನು ನಿಗಮದ ಕಾಮಗಾರಿಯ ವತಿಯಿಂದ ಉಂಟಾಗಿರುವ ಅನಾಹುತವೆಂದು ಆರೋಪ ಹೊರಿಸುತ್ತಿದ್ದಾರೆಂದು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು, ಹಲವಾರು ಬಾರಿ ತಿಳಿಸಿದ್ದರೂ ಕೂಡಾ ಸುಳ್ಳು ಆರೋಪವನ್ನು ಮೇಲಿಂದ ಮೇಲೆ ಮಾಡುತ್ತಾ, ಬಂದಿರುತ್ತಾರೆ.

x) MMCL ರವರು ಎತ್ತಿನಹೊಳೆ ಕಾಮಗಾರಿಗಳನ್ನು ನಿರ್ವಹಿಸಲು ಸಹಕಾರ ನೀಡದೆ ಕಾನೂನಾತ್ಮಕ ಕ್ರಮಗಳನ್ನು ನಿಗಮ/ಸರ್ಕಾರದ ವಿರುದ್ಧ ಜರುಗಿಸುತ್ತಿದ್ದಾರೆ. ಯೋಜನೆಯ ಮೊದಲನೇ ಹಂತದ ಲಿಫ್ಟಿಂಗ್ ಕಾಮಗಾರಿಗಳಿಗಾಗಿ ಸುಮಾರು 448 ಎಕರೆ ಖಾಸಗಿ ಜಮೀನು ಅಗತ್ಯವಿದ್ದು ಈ ಜಮೀನುಗಳ ಯಾವುದೇ ಮಾಲೀಕರು MMCL ರವರಂತೆ ಅಡೆ ತಡೆ ಮಾಡುವುದಾಗಲಿ ಅಥವಾ ಹಾನಿಗಾಗಿ ಪರಿಹಾರ ಕೇಳದೆ ಸಹಕರಿಸುತ್ತಿರುವುದರಿಂದ ಮೊದಲನೇ ಹಂತದ ಕಾಮಗಾರಿಗಳು ಮುಕ್ತಾಯ ಹಂತದಲ್ಲಿರುತ್ತವೆ. MMCL ರವರ ವ್ಯಾಪ್ತಿಯಲ್ಲಿ ಬರುವ ಕೇವಲ 10 ಗುಂಟೆ ಜಮೀನಲ್ಲಿ 4 ಪೈಪುಗಳು ಹಾದುಹೋಗಬೇಕಾಗಿದ್ದು ಅದಕ್ಕೆ ಬೇಕಾದ ಈ ಜಮೀನನ್ನು ಬಿಟ್ಟು ಕೊಡಲು ಸಹಕರಿಸದೇ ಅಡತಡೆಗಳನ್ನು ಉಂಟುಮಾಡಿ ಕಾಮಗಾರಿಗಳನ್ನು ಮುಕ್ತಾಯಗೊಳಿಸುವುದಕ್ಕೆ ಅತ್ಯಂತ ತೊಂದರೆ ತಂದೊಡ್ಡುತ್ತಿದ್ದಾರೆ. MMCL ರವರ ಜಮೀನನಲ್ಲಿ ಕಾಮಗಾರಿ ನಿರ್ವಹಿಸದೆ ಯೋಜನೆಯ ಮೊದಲನೇ ಹಂತದ ಕಾಮಗಾರಿಗಳು ಪೂರ್ಣಗೊಳ್ಳುವುದಿಲ್ಲ.

7.2 ಚರ್ಚೆಯ ನಂತರ ಮೇಲಿನ ವಿವರಣೆಯಲ್ಲಿನ ಅಂಶಗಳನ್ನು ಪರಿಗಣಿಸಿ ಮಂಡಳಿಯು ಮುಖ್ಯ ಇಂಜನೀಯರ್ ರವರು ಎಂ.ಎಂ.ಸಿ.ಎಲ್ ಸಂಸ್ಥೆಯೊಡನೆ ಸಮಾಲೋಚಿಸಿ ನಿರ್ದಿಷ್ಟ ಅವಧಿಯಲ್ಲಿ ಅವರ 10 ಗುಂಟೆ ಜಮೀನಿನನ್ನು ನಿಗಮ ವಿಧಿಸುವ ಷರತ್ತುಗಳಿಗೆ ಒಳಪಟ್ಟು Right of Use ಆಧಾರದ ಮೇಲೆ ನೀಡಲು ಒಪ್ಪಿ ಎತ್ತಿನಹೊಳೆ ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಿ ಪೂರ್ಣಗೊಳಿಸಲು ಸಹಕರಿಸಿದಲ್ಲಿ ಸದರಿ ಕಾಮಗಾರಿಯಿಂದಾಗಿ ನೇರವಾಗಿ ಎಂ.ಎಂ.ಸಿ.ಎಲ್ ಸಂಸ್ಥೆಯ ಸ್ವತ್ತಿಗೆ ಅಗತ್ಯವಿರುವ ರಕ್ಷಣಾತ್ಮಕ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಬೇಕೆಂದು. ಇಲ್ಲವಾದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಕಾಯ್ದೆಯಡಿ ಭೂಸ್ವಾಧೀನ ಪ್ರಕ್ರಿಯೆ ಮೂಲಕ ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲು ಮಂಡಳಿಯು ಸೂಚಿಸಿತು.

ವಿಷಯ ಸಂ.8: ನೇತ್ರಾವತಿ ನದಿಗೆ ಸೂಕ್ತ ಸ್ಥಳದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡಲು ರೂ.50 ಕೋಟಿ ಅನುದಾನ ಮಂಜೂರು ಮಾಡುವ ಕುರಿತು.

ಮಾನ್ಯ ಅಧ್ಯಕ್ಷರು, ಬೆಳ್ತಂಗಡಿಯ ಮೊಗ್ರು ಗ್ರಾಮದ ಬಳಿ ನೇತ್ರಾವತಿ ನದಿಗೆ ಅಡ್ಡಲಾಗಿ ಸುಮಾರು ರೂ.50 ಕೋಟಿ ಅಂದಾಜು ಮೊತ್ತಕ್ಕೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಪ್ರಸ್ತಾವನೆ ಸಣ್ಣ ನೀರಾವರಿ ಇಲಾಖೆಯ ಪರಿಶೀಲನೆಯಲ್ಲಿದ್ದು, ಈ ಇಲಾಖೆಯಲ್ಲಿ ಅನುದಾನದ ಕೊರತೆ ಇರುವುದರಿಂದ ಜಲ ಸಂಪನ್ಮೂಲ ಇಲಾಖೆಯಿಂದ ಅನುದಾನ ಒದಗಿಸಿಕೊಡಬೇಕೆಂದು ಶ್ರೀ. ಹರೀಶ್ ಪೂಂಜಾ, ಶಾಸಕರು, ಬೆಳ್ತಂಗಡಿ ವಿಧಾನ ಸಭಾ ಕ್ಷೇತ್ರ ರವರು ಸಲ್ಲಿಸಿರುವ ಕೋರಿಕೆಯನ್ನು ಮಂಡಳಿಯಲ್ಲಿ ಪ್ರಸ್ತಾಪಿಸಿದರು.

8.2 ಚರ್ಚೆಯ ನಂತರ ಪ್ರಸ್ತಾಪಿತ ಕಾಮಗಾರಿಗೆ ವಿವರವಾದ ಯೋಜನಾ ವರದಿಯನ್ನು (DPR) ತಯಾರಿಸಿ ಮಂಡಳಿಯ ಮುಂದೆ ಮಂಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಮಂಡಳಿಯು ಸೂಚಿಸಿತು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/
(ಎನ್.ಲಕ್ಷ್ಮಣರಾವ್ ಪೇಶ್ವೆ)
ವ್ಯವಸ್ಥಾಪಕ ನಿರ್ದೇಶಕರು

ಸಹಿ/
(ಬಿ.ಎಸ್.ಯಡಿಯೂರಪ್ಪ)
ಸಭೆಯ ಅಧ್ಯಕ್ಷರು

Certified True Copy

Company Secretary
Visvesvaraya Jala Nigam Ltd.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ, ನಂ.148, ನೆಲ ಮಹಡಿ, ಎಂಟಿಸಿ ಸ್ಕ್ವೇರ್,
ಇನ್ಫ್ಯಾಂಟ್ರಿ ರಸ್ತೆ, ಬೆಂಗಳೂರು–560 001.

-:ನಿರ್ದೇಶಕರ ಮಂಡಳಿಯ ಹದಿನಾಲ್ಕನೇ ಸಭೆಯ ನಡಾವಳಿಗಳು:-

ದಿನ	:	ಬುಧವಾರ
ದಿನಾಂಕ	:	04.12.2019
ವೇಳೆ	:	ಸಂಜೆ 5.30 ಗಂಟೆ.
ಸ್ಥಳ	:	"ಕೃಷ್ಣಾ" ಮಾನ್ಯ ಮುಖ್ಯ ಮಂತ್ರಿಯವರ ಗೃಹ ಕಛೇರಿ, ಕುಮಾರ ಕೃಪ ರಸ್ತೆ, ಬೆಂಗಳೂರು

__ಉಪಸ್ಥಿತಿ:-__

1. ಶ್ರೀ. ಬಿ.ಎಸ್.ಯಡಿಯೂರಪ್ಪ, : ಅಧ್ಯಕ್ಷರು
2. ಶ್ರೀ. ಟಿ.ಎಂ. ವಿಜಯ್ ಭಾಸ್ಕರ್, ಭಾ.ಆ.ಸೇ., : ನಿರ್ದೇಶಕರು
3. ಶ್ರೀ. ಪಿ.ರವಿಕುಮಾರ್, ಭಾ.ಆ.ಸೇ., : ನಿರ್ದೇಶಕರು
4. ಶ್ರೀ. ಐ.ಎಸ್.ಎನ್.ಪ್ರಸಾದ್, ಭಾ.ಆ.ಸೇ., : ನಿರ್ದೇಶಕರು
5. ಶ್ರೀ. ರಾಕೇಶ್ ಸಿಂಗ್, ಭಾ.ಆ.ಸೇ. : ನಿರ್ದೇಶಕರು
6. ಶ್ರೀಮತಿ ಡಾ: ಶಾಲಿನಿ ರಜನೀಶ್, ಭಾ.ಆ.ಸೇ., : ಮಹಿಳಾ ನಿರ್ದೇಶಕರು
7. ಶ್ರೀ. ಎನ್.ಲಕ್ಷ್ಮಣರಾವ್ ಪೇಶ್ವೆ, ಕ.ಇ.ಸೇ. : ವ್ಯವಸ್ಥಾಪಕ ನಿರ್ದೇಶಕರು
8. ಶ್ರೀ.ಆರ್.ಚಲುವರಾಜು : ಸ್ವತಂತ್ರ ನಿರ್ದೇಶಕರು
9. ಪ್ರೊ.ಶ್ರೀ.ಟಿ.ಗಂಗಾಧರಯ್ಯ : ಸ್ವತಂತ್ರ ನಿರ್ದೇಶಕರು

__ಅನುಪಸ್ಥಿತಿಗೆ ಮಂಜೂರಾತಿ ಪಡೆದ ನಿರ್ದೇಶಕರುಗಳು:__

1. ಶ್ರೀ.ಡಿ.ಎನ್.ದೇಸಾಯಿ : ಸ್ವತಂತ್ರ ನಿರ್ದೇಶಕರು

__ಹಾಜರಿದ್ದ ಅಧಿಕಾರಿಗಳು:-__

1. ಶ್ರೀ. ಜಿ.ಎಸ್. ಪ್ರಕಾಶ್, : ಕಂಪನಿ ಕಾರ್ಯದರ್ಶಿ
2. ಶ್ರೀ.ರಾಘವನ್ : ನಿರ್ದೇಶಕರು ತಾಂತ್ರಿಕ
3. ಶ್ರೀಮತಿ ಜ್ಯೋತಿ ಡಿ.ಕುಂದರ್, : ಪ್ರಧಾನ ವ್ಯವಸ್ಥಾಪಕರು–ಹಣಕಾಸು

ಮಾನ್ಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ನಿರ್ದೇಶಕರುಗಳನ್ನು ಶ್ರೀ.ಎನ್.ಲಕ್ಷ್ಮಣರಾವ್ ಪೇಶ್ವೆ, ವ್ಯವಸ್ಥಾಪಕ ನಿರ್ದೇಶಕರು ಸ್ವಾಗತಿಸಿದರು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಭಾಗ–ಎ: ಸಾಮಾನ್ಯ ವಿಷಯಗಳು:

ವಿಷಯ ಸಂಖ್ಯೆ:1: ನಿರ್ದೇಶಕರ ಮಂಡಳಿ ಸಭೆಯ ನಡಾವಳಿಗಳ ಸ್ಥಿರೀಕರಣ.

(ಅ) ದಿನಾಂಕ:18.09.2019 ರಂದು ನಡೆದ 12ನೇ ನಿರ್ದೇಶಕರ ಮಂಡಳಿ ಸಭೆಯ ನಡಾವಳಿಗಳು.

ಮತ್ತು

(ಆ) ದಿನಾಂಕ:20.09.2019 ರಂದು ನಡೆದ 13ನೇ ನಿರ್ದೇಶಕರ ಮಂಡಳಿ ಸಭೆಯ ನಡಾವಳಿಗಳು.

ದಿನಾಂಕ 19.09.2019 ರಂದು ನಡೆದ 12ನೇ ಮತ್ತು ದಿನಾಂಕ:20.09.2019 ರಂದು ನಡೆದ 13ನೇ ನಿರ್ದೇಶಕರ ಮಂಡಳಿಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

ವಿಷಯ ಸಂಖ್ಯೆ:2: ದಿನಾಂಕ:20.09.2019 ರಂದು ನಡೆದ 13ನೇ ನಿರ್ದೇಶಕರ ಮಂಡಳಿ ಸಭೆಯ ನಡಾವಳಿಗಳಿಗೆ ಪಾಲನಾ ವರದಿ.

ಅವಗಾಹಿಸಲಾಯಿತು.

ವಿಷಯ ಸಂಖ್ಯೆ:3: ದಿನಾಂಕ:13.09.2019 ಮತ್ತು 19.09.2019 ರಂದು ನಡೆದ ಐದನೇ ಮತ್ತು ಆರನೇ ತಾಂತ್ರಿಕ ಉಪ ಸಮಿತಿ ಸಭೆಯ ನಡಾವಳಿಗಳು ಮಂಡಳಿಯ ಅವಗಾಹನೆಗಾಗಿ.

ದಿನಾಂಕ: 13.09.2019 ಹಾಗೂ ದಿನಾಂಕ: 19.09.2019 ರಂದು ನಡೆದ ತಾಂತ್ರಿಕ ಉಪ ಸಮಿತಿಯ ಐದನೇ ಮತ್ತು ಆರನೇ ಸಭೆಯ ನಡವಳಿಗಳನ್ನು ಮಂಡಳಿಯು ಅವಗಾಹಿಸಿತು.

ವಿಷಯ ಸಂಖ್ಯೆ:4: ಕರ್ನಾಟಕ ಸರ್ಕಾರಕ್ಕೆ ಈಕ್ವಿಟಿ ಷೇರುಗಳ ಹಂಚಿಕೆ.

ನಿಗಮದ ಅಧಿಕೃತ ಷೇರು ಬಂಡವಾಳವು ರೂ.5,000 ಕೋಟಿಗಳಾಗಿದ್ದು, ನಿಗಮದ ಯೋಜನೆಗಳ ಅನುಷ್ಠಾನಕ್ಕಾಗಿ ಹಾಗೂ ಸಾಲ ಮರುಪಾವತಿಗಾಗಿ ಸರ್ಕಾರವು ತನ್ನ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನಕ್ಕೆ ಎದುರಾಗಿ ನಿಗಮವು ಕರ್ನಾಟಕ ಸರ್ಕಾರಕ್ಕೆ ಕಾಲಕಾಲಕ್ಕೆ ಈಕ್ವಿಟಿ ಷೇರುಗಳನ್ನು ಹಂಚಿಕೆ ಮಾಡುತ್ತಿದ್ದು, ಇಲ್ಲಿಯವರೆಗೆ ಸ್ವೀಕರಿಸಿದ ರೂ. 4,36,521.08 ಲಕ್ಷಗಳಿಗೆ ದಿನಾಂಕ:20.09.2019 ವರೆಗೆ ರೂ. 3,34,727.30 ಲಕ್ಷ ಮೊತ್ತದ ಈಕ್ವಿಟಿ ಷೇರುಗಳನ್ನು ಸರ್ಕಾರಕ್ಕೆ ಹಂಚಿಕೆ ಮಾಡಿದ್ದು, ದಿನಾಂಕ:01.12.2019ರ ವರೆಗೆ ಹಂಚಿಕೆಗಾಗಿ ಬಾಕಿ ಇರುವ ರೂ.1,01,793.78 ಲಕ್ಷಗಳ ಮೊತ್ತಕ್ಕೆ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನವಾದ ರೂ.33,021.99 ಲಕ್ಷಗಳ ಮೊತ್ತವನ್ನು ಹೊರತುಪಡಿಸಿ ಉಳಿಕೆ ರೂ.68771.79 ಲಕ್ಷಗಳ ಮೊತ್ತಕ್ಕೆ ಸರ್ಕಾರಕ್ಕೆ ಈಕ್ವಿಟಿ ಷೇರುಗಳನ್ನು ಹಂಚಿಕೆ ಮಾಡಲು ಪ್ರಸ್ತಾಪಿಸಿರುವಂತೆ ಮಂಡಳಿಯು ಈ ಕೆಳಕಂಡ ಗೊತ್ತುವಳಿಯನ್ನು ಆಂಗ್ಲ ಭಾಷೆಯಲ್ಲಿ ಸ್ವೀಕರಿಸಿತು.

(i) "**RESOLVED** that 68,77,179 equity shares of Rs.1,000 each be and are hereby issued and allotted to the Government of Karnataka towards the outstanding amount of grants received up to 01.12.2019."

(ii) "**Further Resolved** that Sri G.S. Prakash, Company Secretary, VJNL be is hereby authorized to file Return of allotment with Registrar of Companies, Bangalore"

(iii) "**Further Resolved** that the share certificates be issued to the allottees under the common seal of the company be affixed in accordance with the Article 135 of the Articles of Association of the Company"

<u>ಭಾಗ–ಬಿ: ಆರ್ಥಿಕ ಬಿಡ್ ಮೌಲ್ಯೀಕರಣ ವಿಷಯಗಳು ಅನುಮೋದನೆಗಾಗಿ:</u>

ವಿಷಯ ಸಂಖ್ಯೆ:5: **Construction of Tumkur Branch Canal including earthwork, excavation, embankment, CC lining using m echanical paver, cross drainage works /road bridges/ cart track crossings fromCh.108.00 Km to Ch. 135.00 K m (27 Km Length) includingaqueduct from Ch.121.195 Km to Ch.122.744 Km -Under Upper Bhadra Project." (Package VIII)"** ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನ ವರದಿ ಕುರಿತು.

ಭದ್ರಾ ಮೇಲ್ದಂಡೆ ಯೋಜನೆಯಡಿ ಒಟ್ಟು 159.684 ಕಿ.ಮೀ ಉದ್ದವಿರುವ ತುಮಕೂರು ಶಾಖಾ ಕಾಲುವೆ ನಿರ್ಮಾಣಮಾಡಬೇಕಿದ್ದು ಈ ಪೈಕಿ ಕಿ.ಮೀ.108 ವರೆಗಿನ ಕಾಮಗಾರಿಗಳ ಟೆಂಡರ್ ಅನುಮೋದನೆಗೊಂಡು ಪ್ರಾರಂಭಿಸಲಾಗಿದ್ದು, ಪ್ರಸ್ತುತ ಟೆಂಡರ್ ಕಿ.ಮೀ 108 ರಿಂದ ಕಿ.ಮೀ 135 ವರೆಗಿನ ಅಂದರೆ 27 ಕಿ.ಮೀ ಉದ್ದದ ಕಾಲುವೆ ನಿರ್ಮಾಣದ ಕಾಮಗಾರಿಯಾಗಿರುವ್ರದನ್ನು ಹಾಗೂ ಈ ಕಾಮಗಾರಿಗೆ ಭಾಗವಹಿಸಿದ ಐದು ಬಿಡ್‌ದಾರರಲ್ಲಿ ಇಬ್ಬರು ಪೂರ್ವಾರ್ಹತೆ ಷರತ್ತುಗಳನ್ನು ಪೂರೈಸಿದ್ದು ಕನಿಷ್ಠ ಬಿಡ್‌ದಾರರಾದ ಶ್ರೀ.ಜಿ.ಶಂಕರ್ ಗುತ್ತಿಗೆದಾರರು ರೂ.180,49,03,683/– ಬಿಡ್ ಸಲ್ಲಿಸಿದ್ದು ಇದು ಪರಿಷ್ಕೃತ ಟೆಂಡರ್‌ಗಿಟ್ಟು ಮೊತ್ತ ರೂ.142,69,38,030/–ಗಳ ಮೇಲೆ ಶೇ.26.487 ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

5.2. ಪ್ರಸ್ತಾಪಿಸಿದ ಕಾಮಗಾರಿಯ ಟೆಂಡರ್‌ಗಿಟ್ಟು ಮೊತ್ತ ರೂ.146,26,44,800.61ಗಳ ಅಂದಾಜು ಪಟ್ಟಿಗಳನ್ನು (ತೆರಿಗೆಗಳನ್ನು ಹೊರತುಪಡಿಸಿ) 2018–19 ಸಾಲಿನ ಜ.ಸಂ.ಇ ದರಪಟ್ಟಿ ಹಾಗೂ 2018–19ನೇ ಸಾಲಿನ ಕೊನೆಯ ತ್ರೈಮಾಸಿಕದ ಅನುಮೋದನೆಗೊಂಡ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ನು ಹಾಗೂ ಲೋಕೋಪಯೋಗಿ ಇಲಾಖೆಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ 2018–19ನೇ ಸಾಲಿನ ದರಪಟ್ಟಿಗಳಿಗನುಗುಣವಾಗಿ ತಯಾರಿಸಿ ಮಂಜೂರಾತಿ ಪಡೆದಿದ್ದು, ಪ್ರಸ್ತುತ ಟೆಂಡರಿಗಿಟ್ಟ ಮೊತ್ತವನ್ನು 2018–19ನೇ (2019–20ನೇ ಸಾಲಿಗೆ ಮುಂದುವರೆದ) ಸಾಲಿನ ಜ.ಸಂ. ಇಲಾಖೆಯ ದರಪಟ್ಟಿ ಹಾಗೂ 2019–20ನೇ ಸಾಲಿನ 3ನೇ ತ್ರೈಮಾಸಿಕದಲ್ಲಿ ಅನುಮೋದನೆಗೊಂಡ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ವಯ ಹಾಗೂ ಲೋಕೋಪಯೋಗಿ ಇಲಾಖೆಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ 2018–19ನೇ ಸಾಲಿನ ದರಪಟ್ಟಿಗಳಿಗನುಗುಣವಾಗಿ ರೂ. 142,69,38,030.46 ಗಳಿಗೆ ಪರಿಷ್ಕರಿಸಿದ್ದು, ಇದು

ಟೆಂಡರ್‌ಗಿಟ್ಟ ಮೊತ್ತಕ್ಕಿಂತ ರೂ. 3,57,06,770.15 (ಶೇಕಡಾ. 2.30) ರಷ್ಟು ಕಡಿಮೆಯಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

5.3 ಸದರಿ ಕಾಮಗಾರಿಯಡಿ ಬರುವ ಈ ಕೆಳಕಂಡ ವಿವಿಧ ಬಾಬ್ತುಗಳನ್ನು ಮಂಡಳಿಯ ಗಮನಕ್ಕೆ ತರಲಾಯಿತು.

ಕ್ರಮ ಸಂ.	ಕಾಮಗಾರಿಯ ವಿವರ (components of work)	ಮೊತ್ತ ರೂ. ಕೋಟಿಗಳಲ್ಲಿ	ಶೇ. ಪ್ರಮಾಣ
1.	ಕಾಲುವೆ ನಿರ್ಮಾಣದ ಕಾಮಗಾರಿಗಳು (ಅಗೆತ ಮತ್ತು ಏರಿ, ಪೇವರ್ ಲೈನಿಂಗ್ ಕಾಮಗಾರಿಗಳು)	81.03	56.79
2.	ಸಿ.ಡಿ.ಕಾಮಗಾರಿಗಳು	28.28	19.82
3.	ಮೇಲ್ಗಾಲುವೆ (ಉದ್ದ1.549 ಕಿಮಿ)	33.38	23.39
	ಒಟ್ಟು :	142.69	100.00

5.4 ಟೆಂಡರ್ ಪರಿಶೀಲನಾ ಸಮಿತಿಯು ಸದರಿ ಕಾಮಗಾರಿಯ ಟೆಂಡರ್‌ನ್ನು ಮಂಡಳಿಯ ಅನುಮೋದನೆಗೆ ಶಿಫಾರಸ್ಸುಮಾಡಲು ಪರಿಗಣಿಸಿರುವ ಈ ಕೆಳಕಂಡ ಅಂಶಗಳನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

- ✓ ಸದರಿ ಕಾಮಗಾರಿಯು 1.549 ಕಿಮೀ ಉದ್ದದ ಮೇಲ್ಗಾಲುವೆ ಒಳಗೊಂಡಿದ್ದು, ಇದು ಟೆಂಡರ್‌ಗಿಟ್ಟ ಮೊತ್ತದ ಶೇಕಡಾ 23.39 ರಷ್ಟು ಇರುವುದು. ಅಲ್ಲದೆ, ಮೇಲ್ಗಾಲುವೆ ನಿರ್ಮಾಣದ ಕಾಮಗಾರಿ ನಿರ್ವಹಿಸಲು sophisticated machineries & equipments, centering, shuttering and skilled personnels ನ ಅವಶ್ಯಕತೆ ಇರುವ ಅಂಶವನ್ನು ಸಮಿತಿಯು ಅವಲೋಕಿಸಿತು.
- ✓ ಸದರಿ ಟೆಂಡರ್‌ಸ್ಪರ್ಧಾತ್ಮಕವಾಗಿರುವುದು

5.5 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

ನಿರ್ಣಯ: ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಪರಿಷ್ಕೃತ ಟೆಂಡರ್‌ಗಿಟ್ಟ ಮೊತ್ತ ರೂ. 142,69,38,030/-ಗಳ ಮೇಲೆ ಶೇ.9.00 ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು ಶ್ರೀ ಜಿ.ಶಂಕರ್ ಇವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.

ವಿಷಯ ಸಂಖ್ಯೆ :6: **Construction of Tumkur Branch Canal including earthwork, excavation, embankment, CC lining using mechanical paver, cross drainage works / road bridges/ cart track crossings from Ch.135.000 Km to ch.159.684 Km (24.684 Km Length) including aqueducts from Ch.138.150 Km to Ch.140.352 Km, Ch.143.650 Km to C h.144.78 Km & from Ch.157.543 Km to Ch.158.123 Km and Tunnel from Ch.140.808**

Km to Ch.141.522 Km Under Upper Bhadra Project (Package IX)" ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನ ವರದಿ ಕುರಿತು.

ಭದ್ರಾ ಮೇಲ್ದಂಡೆ ಯೋಜನೆಯಡಿ ಒಟ್ಟು 159.684 ಕಿ.ಮೀ ಉದ್ದವಿರುವ ತುಮಕೂರು ಶಾಖಾ ಕಾಲುವೆ ನಿರ್ಮಾಣಮಾಡಬೇಕಿದ್ದು ಈ ಪೈಕಿ ಕಿ.ಮೀ.108 ವರೆಗಿನ ಕಾಮಗಾರಿಗಳ ಟೆಂಡರ್ ಅನುಮೋದನೆಗೊಂಡು ಪ್ರಾರಂಭಿಸಲಾಗಿದ್ದು, ಮೇಲಿನ ವಿಷಯ ಸಂಖ್ಯೆ:5ರನ್ವಯ ಕಿ.ಮೀ. 135 ವರೆಗಿನ 27 ಕಿ.ಮೀ ಉದ್ದದ ಕಾಲುವೆ ನಿರ್ಮಾಣದ ಕಾಮಗಾರಿಯ ಟೆಂಡರನ್ನು ಅನುಮೋದಿಸಲಾಗಿದ್ದು ಪ್ರಸ್ತುತ ಟೆಂಡರ್ ಕಿ.ಮೀ 135 ಕಿ.ಮೀ 159.684 ವರೆಗಿನ ಅಂದರೆ 24.684 ಕಿ.ಮೀ ಉದ್ದದ ಕಾಲುವೆ ನಿರ್ಮಾಣದ ಕಾಮಗಾರಿಯಾಗಿರುವುದನ್ನು ಹಾಗೂ ಈ ಕಾಮಗಾರಿಗೆ ಭಾಗವಹಿಸಿದ ಎಂಟು ಬಿಡ್‌ದಾರರಲ್ಲಿ ಇಬ್ಬರು ಪೂರ್ವಾರ್ಹತೆ ಷರತ್ತುಗಳನ್ನು ಪೂರೈಸಿದ್ದು ಕನಿಷ್ಠ ಬಿಡ್‌ದಾರರಾದ Sri.K. Doddahanumanthappa-M/s MAX Infra (I) Ltd (JV) ಗುತ್ತಿಗೆದಾರರು ರೂ. 176,59,67,901.98/- ಬಿಡ್ ಸಲ್ಲಿಸಿದ್ದು ಇದು ಪರಿಷ್ಕೃತ ಟೆಂಡರ್‌ಗಿಟ್ಟ ಮೊತ್ತ ರೂ. 138,10,72,838/- ಗಳ ಮೇಲೆ ಶೇ. 27.89 ರಷ್ಟು ಹೆಚ್ಚು ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

6.2 ಪ್ರಸ್ತಾಪಿಸಿದ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 141,97,02,469.64 ಗಳ ಅಂದಾಜು ಪಟ್ಟಿಗಳನ್ನು (ತೆರಿಗೆಗಳನ್ನು ಹೊರತುಪಡಿಸಿ) 2018-19 ಸಾಲಿನ ಜ.ಸಂ.ಇ ದರಪಟ್ಟಿ ಹಾಗೂ 2018-19ನೇ ಸಾಲಿನ ಕೊನೆಯ ತ್ರೈಮಾಸಿಕದ ಅನುಮೋದನೆಗೊಂಡ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ನು ಹಾಗೂ ಲೋಕೋಪಯೋಗಿ ಇಲಾಖೆಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ 2018-19ನೇ ಸಾಲಿನ ದರಪಟ್ಟಿಗಳಿಗನುಗುಣವಾಗಿ ತಯಾರಿಸಿ ಮಂಜೂರಾತಿ ಪಡೆದಿದ್ದು, ಪ್ರಸ್ತುತ ಟೆಂಡರಿಗಿಟ್ಟ ಮೊತ್ತವನ್ನು 2018-19ನೇ (2019-20ನೇ ಸಾಲಿಗೆ ಮುಂದುವರೆದ) ಸಾಲಿನ ಜ.ಸಂ.ಇಲಾಖೆಯ ದರಪಟ್ಟಿ ಹಾಗೂ 2019-20ನೇ ಸಾಲಿನ 3ನೇ ತ್ರೈಮಾಸಿಕದಲ್ಲಿ ಅನುಮೋದನೆಗೊಂಡ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ವಯ ಹಾಗೂ ಲೋಕೋಪಯೋಗಿ ಇಲಾಖೆಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ 2018-19ನೇ ಸಾಲಿನ ದರಪಟ್ಟಿಗಳಿಗನುಗುಣವಾಗಿ ರೂ.138,10,72,838.94 ಗಳಿಗೆ ಪರಿಷ್ಕರಿಸಿದ್ದು, ಇದು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ರೂ. 3,86,29,630.70 (ಶೇಕಡಾ. 2.72) ರಷ್ಟು ಕಡಿಮೆಯಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

6.3 ಸದರಿ ಕಾಮಗಾರಿಯಡಿ ಬರುವ ಈ ಕೆಳಕಂಡ ವಿವಿಧ ಬಾಬ್ತುಗಳನ್ನು ಮಂಡಳಿಯ ಗಮನಕ್ಕೆ ತರಲಾಯಿತು.

ಕ್ರಮ ಸಂ.	ಕಾಮಗಾರಿಯ ವಿವರ (components of work)	ಮೊತ್ತ ರೂ. ಕೋಟಿಗಳಲ್ಲಿ	ಶೇ. ಪ್ರಮಾಣ
1.	ಕಾಲುವೆ ನಿರ್ಮಾಣದ ಕಾಮಗಾರಿಗಳು (ಅಗೆತ ಮತ್ತು ಏರಿ, ಪೇವರ್ ಲೈನಿಂಗ್ ಕಾಮಗಾರಿಗಳು)	47.11	34.11
2.	ಸಿ.ಡಿ.ಕಾಮಗಾರಿಗಳು	13.05	9.45
3.	ಮೇಲ್ಗಾಲುವೆಗಳು (3 ಸಂಖ್ಯೆ ಒಟ್ಟು ಉದ್ದ 3.93 ಕಿ.ಮೀ)	54.92	39.77
4	ಸುರಂಗ ಮಾರ್ಗ (ಉದ್ದ 714 ಮೀ)	23.03	16.67
	ಒಟ್ಟು :	138.11	100

6.4 ಟೆಂಡರ್ ಪರಿಶೀಲನಾ ಸಮಿತಿಯು ಸದರಿ ಕಾಮಗಾರಿಯ ಟೆಂಡರ್‌ನ್ನು ಮಂಡಳಿಯ ಅನುಮೋದನೆಗೆ ಶಿಫಾರಸ್ಸುಮಾಡಲು ಪರಿಗಣಿಸಿರುವ ಈ ಕೆಳಕಂಡ ಅಂಶಗಳನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

- ✓ ಸದರಿ ಕಾಮಗಾರಿಯು 3 ಸಂಖ್ಯೆ ಒಟ್ಟು 3.93 ಕಿ.ಮೀ ಉದ್ದದ ಮೇಲ್ಗಾಲುವೆ ಹಾಗೂ 714 ಮೀ ಉದ್ದ ಸುರಂಗ ಮಾರ್ಗ ಒಳಗೊಂಡಿದ್ದು, ಇದು ಟೆಂಡರ್‌ಗಿಟ್ಟ ಮೊತ್ತದ ಶೇಕಡಾ 56.44 ರಷ್ಟು ಇರುತ್ತದೆ. ಅಲ್ಲದೆ, ಮೇಲ್ಗಾಲುವೆ ಮತ್ತು ಸುರಂಗ ನಿರ್ಮಾಣದ ಕಾಮಗಾರಿ ನಿರ್ವಹಿಸಲು sophisticated machineries & equipments, centering, shuttering and skilled personnels ನ ಅವಶ್ಯಕತೆ ಇರುವ ಅಂಶವನ್ನು ಸಮಿತಿಯು ಅವಲೋಕಿಸಿತು.
- ✓ ಸದರಿ ಟೆಂಡರ್ ಸ್ಪರ್ಧಾತ್ಮಕವಾಗಿರುವುದು.

6.5 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

ನಿರ್ಣಯ: ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಪರಿಷ್ಕೃತ ಟೆಂಡರ್‌ಗಿಟ್ಟ ಮೊತ್ತ ರೂ. 138,10,72,838/–ಗಳ ಮೇಲೆ ಶೇ.9.00ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು Sri.K. Doddahanumanthappa- M/s MAX Infra (I) Ltd (JV) ಇವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.

ವಿಷಯ ಸಂ.7: Construction of Gravity Canal from Km 240.00 to Km 244.350 comprising of Earthwork Excavation, Formation of Embankment, CC Lining using Mechanical Paver including CD works, Tunnels, Aqueduct and other structures under Yettinahole Project (YGC-PKG-XXIII) (Indent No. 1327) ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನಾ ವರದಿಗೆ ಅನುಮೋದನೆ ನೀಡುವ ಬಗ್ಗೆ.

ಎತ್ತಿನಹೊಳೆ ಯೋಜನೆಯ ಕಾಮಗಾರಿಗಳ ಪ್ರಸ್ತುತ ಹಂತವನ್ನು ಮಂಡಳಿಗೆ ವಿವರಿಸುತ್ತಾ, ಮೊದಲನೇ ಹಂತದ ಲಿಫ್ಟ್ ಕಾಮಗಾರಿಗಳನ್ನು ಒಟ್ಟು 3716.49 ಕೋಟಿ ಮೊತ್ತದಲ್ಲಿ 5 ಪ್ಯಾಕೇಜ್‌ಗಳಲ್ಲಿ ಮಾರ್ಚ್ 2016ರಲ್ಲಿ ಕೈಗೊಂಡಿದ್ದು ಈ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, ಹಾಗೂ ಲಿಫ್ಟ್ ಕಾಮಗಾರಿಗಳಿಗೆ ಅವಶ್ಯವಿರುವ 219.44 ಮೆ.ವ್ಯಾ. ವಿದ್ಯುತ್‌ಶಕ್ತಿ ಪೂರೈಸುವ ಸಬ್ ಸ್ಟೇಷನ್ ಮತ್ತು ಟ್ರಾನ್ಸ್‌ಮಿಷನ್ ಲೈನ್ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿದ್ದು ಮೊದಲನೇ ಹಂತದ Lift Componant ಕಾಮಗಾರಿಗಳನ್ನು ಪೂರ್ಣಗೊಳಿಸಿ ಮುಂದಿನ ಮುಂಗಾರು ಹಂಗಾಮಿನಲ್ಲಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲು ಕಾರ್ಯಕ್ರಮ ರೂಪಿಸಿಕೊಳ್ಳಲಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

7.2 ಮುಂದುವರೆಯುತ್ತಾ, ಯೋಜನೆಯ ಎರಡನೇ ಹಂತದ ಗುರುತ್ವಾ ಕಾಲುವೆಯು 260 ಕಿ.ಮೀ ಉದ್ದಕ್ಕೆ ಕ್ರಮಿಸಿ ಬೈರಗೊಂಡ್ಲು ಜಲಾಶಯದಲ್ಲಿ ಕೊನೆಗೊಳ್ಳುತ್ತಿದ್ದು ಈ ಪೈಕಿ ಸರಪಳಿ 0,00 ಕಿ.ಮೀ ನಿಂದ 240 ಕಿ.ಮೀ ವರೆಗಿನ ಕಾಲುವೆ ನಿರ್ಮಾಣ ಕಾಮಗಾರಿಗಳು, ಗುರುತ್ವಾ ಕಾಲುವೆಯ ಸರಪಳಿ 240.90 ನಿಂದ ಹೊರಡುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ನೆಲಮಂಗಲ ತಾಲ್ಲೂಕಿನ 2 ಕೆರೆಗಳನ್ನು ತುಂಬಿಸುವ ರಾಮನಗರ ಫೀಡರ್ ಕಾಲುವೆಯ ರೂ.1325.96 ಕೋಟಿ ಮೊತ್ತದ ಕಾಮಗಾರಿಗಳು, ತುಮಕೂರು ಕೊರಟಗೆರೆ ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಒದಗಿಸಲು ಮತ್ತು ಈ ಭಾಗದ 79 ಸಣ್ಣ ನೀರಾವರಿ ಕೆರೆಗಳಿಗೆ ನೀರನ್ನು ಒದಗಿಸುವ ಗುರುತ್ವಾ ಕಾಲುವೆಯ ಸರಪಳಿ 230.940 ರಿಂದ ಹೊರಡುವ ಮಧುಗಿರಿ ಫೀಡರ್ ಕಾಲುವೆಯ ರೂ.1052.55 ಕೋಟಿ ಮೊತ್ತದ ಕಾಮಗಾರಿ ಹಾಗೂ ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರನ್ನು ಒದಗಿಸುವ ಮತ್ತು ಗೌರಿಬಿದನೂರು, ಕೊರಟಗೆರೆ, ಮಧುಗಿರಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ ಕೆರೆಗಳಿಗೆ ನೀರನ್ನು ಒದಗಿಸುವ ಗುರುತ್ವಾ ಕಾಲುವೆಯ ಸರಪಳಿ 258.57 ಕಿ.ಮೀ ನಿಂದ ಹೊರಡುವ ಗೌರಿಬಿದನೂರು ಫೀಡರ್ ಕಾಲುವೆಯ ರೂ.863.48 ಕೋಟಿ ಮೊತ್ತದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿರುವುದನ್ನು ಹಾಗೂ ಗುರುತ್ವಾ ಕಾಲುವೆಯ ಅಂತ್ಯದಲ್ಲಿ ಬರುವ ಬೈರಗೊಂಡ್ಲು ಜಲಾಶಯದ ನಿರ್ಮಾಣದ ಕಾಮಗಾರಿ ಟೆಂಡರ್ ಅನುಮೋದನೆ ಗೊಂಡಿದ್ದು, ಪ್ರಾರಂಭಿಕ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

7.3 ಪ್ರಸ್ತಾಪಿತ ಟೆಂಡರ್ ಕಾಮಗಾರಿಯು ಗುರುತ್ವಾ ಕಾಲುವೆಯ ಕಿ.ಮೀ.240 ರಿಂದ ಕಿ.ಮೀ 244.350 ಕಾಲುವೆ ನಿರ್ಮಾಣದ ಕಾಮಗಾರಿಯಾಗಿದ್ದು, ಈ ಕಾಮಗಾರಿಗೆ ಇಬ್ಬರು ಬಿಡ್‌ದಾರರು ಭಾಗವಹಿಸಿದ್ದು, ಈ ಪೈಕಿ ಏಕೈಕ ಬಿಡ್‌ದಾರರಾದ M/s BSR Infratech India Ltd. ರವರು ಪೂರ್ವಾರ್ಹತೆ ಹೊಂದಿದ್ದು ಇವರು ರೂ.444,13,68,994/- ಬಿಡ್ ಸಲ್ಲಿಸಿದ್ದು ಇದು ಟೆಂಡರ್‌ಗಿಟ್ಟ ಮೊತ್ತ ರೂ. 390,99,99,995/- ಗಳ ಮೇಲ್ಪಟ್ಟ ಶೇ. 13.59 ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

7.4 ಸದರಿ ಕಾಮಗಾರಿಯ ಅಂದಾಜು ಪಟ್ಟಿಗಳನ್ನು 2018-19ನೇ ಸಾಲಿನ ಜಲಸಂಪನ್ಮೂಲ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳ ಅನ್ವಯ (without GST) ಹಾಗೂ 2019-20ನೇ ಸಾಲಿನಲ್ಲಿ 3ನೇ ತ್ರೈಮಾಸಿಕಕ್ಕೆ ಅಧೀಕ್ಷಕ ಇಂಜಿನಿಯರ್ ರವರು ಅನುಮೋದಿಸಿರುವ ಸಿಮೆಂಟ್ ಮತ್ತು ಸ್ಟೀಲ್‌ನ ಮಾರುಕಟ್ಟೆ ದರಗಳನ್ವಯ (without GST) ತಯಾರಿಸಲಾಗಿದ್ದು ಸದರಿ ಕಾಮಾಗಾರಿಯ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ:16.11.2019 ರಂದು ನಿಗದಿಪಡಿಸಲಾಗಿದ್ದರಿಂದ, ಅಂದಾಜು ಪಟ್ಟಿ ಮಂಜೂರಾತಿ ಸಮಯದಲ್ಲೇ ಸಿಮೆಂಟ್ ಮತ್ತು ಸ್ಟೀಲ್‌ಗೆ 2019-20ನೇ ಸಾಲಿನ 3ನೇ ತ್ರೈಮಾಸಿಕದ ದರಗಳನ್ನು ಪರಿಗಣಿಸಿರುವುದರಿಂದ ಟೆಂಡರಿಗಿಟ್ಟ ಮೊತ್ತವನ್ನು ಪರಿಷ್ಕರಿಸುವ ಅವಶ್ಯಕತೆ ಇಲ್ಲವೆಂದು ಮುಖ್ಯ ಇಂಜಿನಿಯರ್ ರವರು ವರದಿ ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

7.5 ಸದರಿ ಕಾಮಗಾರಿಯಡಿ ಬರುವ ಈ ಕೆಳಕಂಡ ವಿವಿಧ ಬಾಬ್ತುಗಳನ್ನು ಮಂಡಳಿಯ ಗಮನಕ್ಕೆ ತರಲಾಯಿತು.

ಕ್ರ. ಸಂ.	ಕಾಮಗಾರಿಯ ವಿವರ (components of work)	ಮೊತ್ತ ರೂ. ಕೋಟಿಗಳಲ್ಲಿ	ಶೇ. ಪ್ರಮಾಣ
1.	ಮೇಲ್ಗಾಲುವೆ ನಿರ್ಮಾಣ (2.250 ಕಿ.ಮೀ)	337.74	86.38
2.	ಕಾಲುವೆ ನಿರ್ಮಾಣ	29.57	7.56
3.	ಇತರೆ ಅಡ್ಡಮೋರಿ ಕಾಮಗಾರಿಗಳು	23.68	6.06
	ಒಟ್ಟು	390.99	100.00

7.6 ಟೆಂಡರ್ ಪರಿಶೀಲನಾ ಸಮಿತಿಯು ಸದರಿ ಕಾಮಗಾರಿಯ ಟೆಂಡರ್‌ನ್ನು ಮಂಡಳಿಯ ಅನುಮೋದನೆಗೆ ಶಿಫಾರಸ್ಸುಮಾಡಲು ಪರಿಗಣಿಸಿರುವ ಈ ಕೆಳಕಂಡ ಅಂಶಗಳನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

- ✓ ಸದರಿ ಕಾಮಗಾರಿಯು 2.250 ಕಿ.ಮೀ ಉದ್ದದ ಮೇಲ್ಗಾಲುವೆ ಕಾಮಗಾರಿ, ಕಾಲುವೆ ಹಾಗೂ ಅದರಡಿ ಬರುವ ಸಿಡಿ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿದ್ದು, ಮೇಲ್ಗಾಲುವೆ ನಿರ್ಮಾಣದ ಪ್ರಮಾಣವು ಶೇ.86.38 ರಷ್ಟು, ಕಾಲುವೆ ಕಾಮಗಾರಿಯ ಪ್ರಮಾಣವು ಶೇ.7.56 ರಷ್ಟು ಮತ್ತು ಸಿಡಿ ಕಾಮಗಾರಿಗಳ ಪ್ರಮಾಣವು ಶೇ.6.06 ರಷ್ಟು ಇರುತ್ತದೆ.
- ✓ ಪ್ರಸ್ತಾಪಿತ ಪ್ಯಾಕೇಜ್ ಕಾಮಗಾರಿಯ ವ್ಯಾಪ್ತಿಯಲ್ಲಿ 2.250 ಕಿ.ಮೀ ಉದ್ದದ ಮೇಲ್ಗಾಲುವೆಯು ಇರಕಸಂದ್ರ ಕೆರೆಯ ಮಧ್ಯದಲ್ಲಿ ಹಾದುಹೋಗುತ್ತಿದ್ದು, ನೀರಿನಲ್ಲಿ ಸದರಿ ಮೇಲ್ಗಾಲುವೆ ಕಾಮಗಾರಿಯನ್ನು ನಿರ್ಮಿಸಬೇಕಾಗಿರುವುದರಿಂದ ಇದೊಂದು ವಿಶೇಷ ಕಾಮಗಾರಿಯಾಗಿದ್ದು, ಇದಕ್ಕೆ ಅನುಭವದಾರಿ ನುರಿತ ಮಾನವಸಂಪನ್ಮೂಲ ಮತ್ತು ಅತ್ಯಾಧುನಿಕ ತಂತ್ರಜ್ಞಾನವನ್ನು ಹಾಗೂ ಯಂತ್ರೋಪಕರಣಗಳನ್ನು ಬಳಸಿ ನಿರ್ಮಿಸಬೇಕಾಗಿರುವ ಅವಶ್ಯಕತೆ ಇರುತ್ತದೆ.
- ✓ It is a competitive tender.

7.7 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

ನಿರ್ಣಯ: ಪ್ರಸ್ತುತ ಟೆಂಡರ್ ಕಾಮಗಾರಿಯಲ್ಲಿ 2.250 ಉದ್ದದ ಮೇಲ್ಗಾಲುವೆಯು ಇರಕಸಂದ್ರ ಕೆರೆಯ ಮಧ್ಯದಲ್ಲಿ ಹಾದು ಹೋಗುತ್ತಿದ್ದು ನೀರಿನಲ್ಲಿ ಮೇಲ್ಗಾಲುವೆ ಕಾಮಗಾರಿಯನ್ನು ನಿರ್ಮಿಸಬೇಕಾಗಿರುವುದರಿಂದ ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಇದೊಂದು ವಿಶೇಷ ಕಾಮಗಾರಿ ಎಂದು ಪರಿಗಣಿಸಿ ಟೆಂಡರ್‌ಗಿಟ್ಟ ಮೊತ್ತ ರೂ.390,99,99,995/-ಗಳ ಮೇಲೆ ಶೇ.13ರ ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು M/s BSR Infratech India Ltd. ಇವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.

ವಿಷಯ ಸಂ.8: Construction of Gravity Canal from Km 244.350 to Km 249.150 comprising of Earthwork Excavation, Formation of Embankment, CC Lining using Mechanical Paver including CD works, Tunnels, Aqueduct and other structures under Yettinahole Project (YGC-PKG-XXIV) (Indent No. 1328)

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನಾ ವರದಿಗೆ ಅನುಮೋದನೆ ನೀಡುವ ಬಗ್ಗೆ.

ಪ್ರಸ್ತಾಪಿತ ಕಾಮಗಾರಿಯು ಎತ್ತಿನಹೊಳೆ ಯೋಜನೆಯ ಎರಡನೇ ಹಂತದಲ್ಲಿ ನಿರ್ಮಾಣಗೊಳ್ಳುತ್ತಿರುವ 260 ಕಿ.ಮೀ ಉದ್ದದ ಗುರುತ್ವಾ ಕಾಲುವೆಯ ಕಿ.ಮೀ.244.350 ಯಿಂದ 249.150 ವರೆಗಿನದಾಗಿದ್ದು, ಈ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಕನಿಷ್ಠ ಬಿಡ್‌ದಾರರಾದ M/s Sarala Project Works Pvt. Ltd. – M/s V.I.Shetty & Company (JV) ಗುತ್ತಿಗೆದಾರರು ರೂ. 154,52,70,439/– ಬಿಡ್ ಸಲ್ಲಿಸಿದ್ದು ಇದು ಟೆಂಡರ್‌ಗಿಟ್ಟ ಮೊತ್ತ ರೂ. 133,21,29,689/–ಗಳ ಮೇಲೆ ಶೇ.16 ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

8.2 ಸದರಿ ಕಾಮಗಾರಿಯ ಅಂದಾಜು ಪಟ್ಟಿಗಳನ್ನು 2018–19ನೇ ಸಾಲಿನ ಜಲಸಂಪನ್ಮೂಲ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳ ಅನ್ವಯ (without GST) ಹಾಗೂ 2019–20ನೇ ಸಾಲಿನಲ್ಲಿ 3ನೇ ತ್ರೈಮಾಸಿಕಕ್ಕೆ ಅಧೀಕ್ಷಕ ಇಂಜಿನಿಯರ್ ರವರು ಅನುಮೋದಿಸಿರುವ ಸಿಮೆಂಟ್ ಮತ್ತು ಸ್ಟೀಲ್‌ನ ಮಾರುಕಟ್ಟೆ ದರಗಳನ್ವಯ (without GST) ತಯಾರಿಸಲಾಗಿದ್ದು ಸದರಿ ಕಾಮಗಾರಿಯ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ:16.11.2019 ರಂದು ನಿಗದಿಪಡಿಸಲಾಗಿದ್ದರಿಂದ, ಅಂದಾಜು ಪಟ್ಟಿ ಮಂಜೂರಾತಿ ಸಮಯದಲ್ಲೇ ಸಿಮೆಂಟ್ ಮತ್ತು ಸ್ಟೀಲ್‌ಗೆ 2019–20ನೇ ಸಾಲಿನ 3ನೇ ತ್ರೈಮಾಸಿಕದ ದರಗಳನ್ನು ಪರಿಗಣಿಸಿರುವುದರಿಂದ ಟೆಂಡರಿಗಿಟ್ಟ ಮೊತ್ತವನ್ನು ಪರಿಷ್ಕರಿಸುವ ಅವಶ್ಯಕತೆ ಇಲ್ಲವೆಂದು ಮುಖ್ಯ ಇಂಜಿನಿಯರ್ ರವರು ವರದಿ ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

8.3 ಸದರಿ ಕಾಮಗಾರಿಯಡಿ ಬರುವ ಈ ಕೆಳಕಂಡ ವಿವಿಧ ಬಾಬ್ತುಗಳನ್ನು ಮಂಡಳಿಯ ಗಮನಕ್ಕೆ ತರಲಾಯಿತು.

ಕ್ರ ಸಂ.	ಕಾಮಗಾರಿಯ ವಿವರ (components of work)	ಮೊತ್ತ ರೂ. ಕೋಟಿಗಳಲ್ಲಿ	ಶೇ. ಪ್ರಮಾಣ
1.	ಮೇಲ್ಗಾಲುವೆ ನಿರ್ಮಾಣ (330 ಮೀ)	33.63	25.25
2.	ಸುರಂಗ ನಿರ್ಮಾಣ (180 ಮೀ)	20.09	15.08
3.	ಕಾಲುವೆ ನಿರ್ಮಾಣ	48.37	36.31
4.	ಇತರೆ ಅಡ್ಡಮೋರಿ ಕಾಮಗಾರಿಗಳು	31.12	23.36
	ಒಟ್ಟು	133.21	100.00

8.4 ಟೆಂಡರ್ ಪರಿಶೀಲನಾ ಸಮಿತಿಯು ಸದರಿ ಕಾಮಗಾರಿಯ ಟೆಂಡರ್‌ನ್ನು ಮಂಡಳಿಯ ಅನುಮೋದನೆಗೆ ಶಿಫಾರಸ್ಸುಮಾಡಲು ಪರಿಗಣಿಸಿರುವ ಈ ಕೆಳಕಂಡ ಅಂಶಗಳನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

- ✓ ಸದರಿ ಕಾಮಗಾರಿಯು 330 ಮೀ ಉದ್ದದ ಮೇಲ್ಗಾಲುವೆ ಕಾಮಗಾರಿ, 180 ಮೀ ಉದ್ದದ ಸುರಂಗ ಕಾಮಗಾರಿ ಕಾಲುವೆ ಹಾಗೂ ಅದರಡಿ ಬರುವ ಸಿಡಿ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿದ್ದು, ಮೇಲ್ಗಾಲುವೆ ನಿರ್ಮಾಣದ ಪ್ರಮಾಣವು ಶೇ.25.25 ರಷ್ಟು, ಸುರಂಗ

ನಿರ್ಮಾಣದ ಪ್ರಮಾಣವು ಶೇ. 15.08 ರಷ್ಟು, ಕಾಲುವೆ ಕಾಮಗಾರಿಯ ಪ್ರಮಾಣವು ಶೇ.36.31 ರಷ್ಟು ಮತ್ತು ಸಿಡಿ ಕಾಮಗಾರಿಗಳ ಪ್ರಮಾಣವು ಶೇ.23.36 ರಷ್ಟು ಇರುತ್ತದೆ. ಅಲ್ಲದೆ, ಮೇಲ್ಗಾಲುವೆ ಮತ್ತು ಸುರಂಗ ನಿರ್ಮಾಣದ ಕಾಮಗಾರಿ ನಿರ್ವಹಿಸಲು sophisticated machineries & equipments, centering, shuttering and skilled personnels ನ ಅವಶ್ಯಕತೆ ಇರುವ ಅಂಶವನ್ನು ಸಮಿತಿಯು ಅವಲೋಕಿಸಿತು.

✓ It is a competitive tender.

8.5 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

ನಿರ್ಣಯ:ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್‌ಗಿಟ್ಟ ಮೊತ್ತ ರೂ.133,21,29,689/- ಗಳ ಮೇಲೆ ಶೇ.9.00 ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು M/s Sarala Project Works Pvt. Ltd. – M/s V.I.Shetty & Company (JV) ಇವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.

ವಿಷಯ ಸಂ.9: Construction of Gravity Canal from Km 249.150 to Km 255.00 comprising of Earthwork Excavation, Formation of Embankment, CC Lining using Mechanical Paver including CD works, Tunnels and other structures under Yettinahole Project (YGC-PKG-XXV) (Indent No. 1329) ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನಾ ವರದಿಗೆ ಅನುಮೋದನೆ ನೀಡುವ ಬಗ್ಗೆ.

ಪ್ರಸ್ತಾಪಿತ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿದ್ದ ಮೂರು ಗುತ್ತಿಗೆದಾರರ ಪೈಕಿ ಒಬ್ಬ ಗುತ್ತಿಗೆದಾರನ ತಾಂತ್ರಿಕ ಬಿಡ್ ಪೂರ್ವಾರ್ಹತೆ ಇಲ್ಲದೇ ತಿರಸ್ಕೃತಗೊಂಡಿದ್ದರೂ ಕೂಡಾ ಇವರ ಆರ್ಥಿಕ ಬಿಡ್ ಇ-ಪೋರ್ಟಲ್‌ನ ತಾಂತ್ರಿಕ ದೋಷದಿಂದಾಗಿ ತೆರೆದಿದ್ದು, ಈ ಗುತ್ತಿಗೆದಾರರು ಕನಿಷ್ಟ ಬಿಡ್‌ದಾರರಾಗಿರುವುದರಿಂದ ಪ್ರಸ್ತಾವನೆಯಂತೆ 2ನೇ ಕನಿಷ್ಟ ಬಿಡ್‌ದಾರರಾದ Sri U.Rajesh Karanth- Shankaranarayana Constructions Pvt. Ltd. (JV) ಇವರಿಗೆ ಕಾಮಗಾರಿಯನ್ನು ವಹಿಸುವ ಪ್ರಸ್ತಾವನೆಯನ್ನು ಮಂಡಳಿಯು ತಿರಸ್ಕರಿಸಿ ಪುನರ್ ಟೆಂಡರ್ ಕರೆಯಲು ಸೂಚಿಸಿತು.

ವಿಷಯ ಸಂ.10: Construction of Gravity Canal from Km 255.00 to Km 258.970 comprising of Earthwork Excavation, Formation of Embankment, CC Lining using Mechanical Paver including CD works, Tunnels, Aqueduct and other structures under Yettinahole Project (YGC-PKG-XXVI) (Indent No. 1330) ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನಾ ವರದಿಗೆ ಅನುಮೋದನೆ ನೀಡುವ ಬಗ್ಗೆ.

ಪ್ರಸ್ತಾಪಿತ ಕಾಮಗಾರಿಯು ಎತ್ತಿನಹೊಳೆ ಯೋಜನೆಯ ಎರಡನೇ ಹಂತದಲ್ಲಿ ನಿರ್ಮಾಣಗೊಳ್ಳುತ್ತಿರುವ 260 ಕಿ.ಮೀ ಉದ್ದದ ಗುರುತ್ವಾ ಕಾಲುವೆಯ ಕಿ.ಮೀ.255.00 ಯಿಂದ

258.970 ವರೆಗಿನದಾಗಿದ್ದು, ಈ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಕನಿಷ್ಠ ಬಿಡ್‌ದಾರರಾದ M/s. Sadguru Infratech Pvt. Ltd- M/s P.Dasaratharama Reddy (JV) ಗುತ್ತಿಗೆದಾರರು ರೂ.123,79,64,679/- ಬಿಡ್ ಸಲ್ಲಿಸಿದ್ದು ಇದು ಟೆಂಡರ್‌ಗಿಟ್ಟ ಮೊತ್ತ ರೂ. 108,11,91,859/ಗಳ ಮೇಲೆ ಶೇ.14.5 ರಷ್ಟು ಹೆಚ್ಚು ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

10.2 ಸದರಿ ಕಾಮಗಾರಿಯ ಅಂದಾಜು ಪಟ್ಟಿಗಳನ್ನು 2018-19ನೇ ಸಾಲಿನ ಜಲಸಂಪನ್ಮೂಲ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳ ಅನ್ವಯ (without GST) ಹಾಗೂ 2019-20ನೇ ಸಾಲಿನಲ್ಲಿ 3ನೇ ತ್ರೈಮಾಸಿಕಕ್ಕೆ ಅಧೀಕ್ಷಕ ಇಂಜಿನಿಯರ್ ರವರು ಅನುಮೋದಿಸಿರುವ ಸಿಮೆಂಟ್ ಮತ್ತು ಸ್ಟೀಲ್‌ನ ಮಾರುಕಟ್ಟೆ ದರಗಳನ್ವಯ (without GST) ತಯಾರಿಸಲಾಗಿದ್ದು ಸದರಿ ಕಾಮಾಗಾರಿಯ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ:16.11.2019 ರಂದು ನಿಗದಿಪಡಿಸಲಾಗಿದ್ದರಿಂದ, ಅಂದಾಜು ಪಟ್ಟಿ ಮಂಜೂರಾತಿ ಸಮಯದಲ್ಲೇ ಸಿಮೆಂಟ್ ಮತ್ತು ಸ್ಟೀಲ್‌ಗೆ 2019-20ನೇ ಸಾಲಿನ 3ನೇ ತ್ರೈಮಾಸಿಕದ ದರಗಳನ್ನು ಪರಿಗಣಿಸಿರುವುದರಿಂದ ಟೆಂಡರಿಗಿಟ್ಟ ಮೊತ್ತವನ್ನು ಪರಿಷ್ಕರಿಸುವ ಅವಶ್ಯಕತೆ ಇಲ್ಲವೆಂದು ಮುಖ್ಯ ಇಂಜಿನಿಯರ್ ರವರು ವರದಿ ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗ ತಿಳಿಸಿದರು.

10.3 ಸದರಿ ಕಾಮಗಾರಿಯಡಿ ಬರುವ ಈ ಕೆಳಕಂಡ ವಿವಿಧ ಬಾಬ್ತುಗಳನ್ನು ಮಂಡಳಿಯ ಗಮನಕ್ಕೆ ತರಲಾಯಿತು.

ಕ್ರ ಸಂ.	ಕಾಮಗಾರಿಯ ವಿವರ (components of work)	ಮೊತ್ತ ರೂ. ಕೋಟಿಗಳಲ್ಲಿ	ಶೇ. ಪ್ರಮಾಣ
1.	ಮೇಲ್ಗಾಲುವೆ ನಿರ್ಮಾಣ (450 ಮೀ)	25.15	23.27
2.	ಸುರಂಗ ನಿರ್ಮಾಣ (390 ಮೀ)	35.22	32.57
3.	ಕಾಲುವೆ ನಿರ್ಮಾಣ	26.05	24.09
4.	ಇತರೆ ಅಡ್ಡಮೋರಿ ಕಾಮಗಾರಿಗಳು	21.70	20.07
	ಒಟ್ಟು	108.12	100.00

10.4 ಟೆಂಡರ್ ಪರಿಶೀಲನಾ ಸಮಿತಿಯು ಸದರಿ ಕಾಮಗಾರಿಯ ಟೆಂಡರ್‌ನ್ನು ಮಂಡಳಿಯ ಅನುಮೋದನೆಗೆ ಶಿಫಾರಸ್ಸುಮಾಡಲು ಪರಿಗಣಿಸಿರುವ ಈ ಕೆಳಕಂಡ ಅಂಶಗಳನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

- ✓ ಸದರಿ ಕಾಮಗಾರಿಯು 450 ಮೀ ಉದ್ದದ ಮೇಲ್ಗಾಲುವೆ ಕಾಮಗಾರಿ, 390 ಮೀ ಉದ್ದದ ಸುರಂಗ ಕಾಮಗಾರಿ ಕಾಲುವೆ ಹಾಗೂ ಅದರಡಿ ಬರುವ ಸಿಡಿ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿದ್ದು, ಮೇಲ್ಗಾಲುವೆ ನಿರ್ಮಾಣದ ಪ್ರಮಾಣವು ಶೇ.23.27 ರಷ್ಟು, ಸುರಂಗ ನಿರ್ಮಾಣದ ಪ್ರಮಾಣವು ಶೇ. 32.57 ರಷ್ಟು, ಕಾಲುವೆ ಕಾಮಗಾರಿಯ ಪ್ರಮಾಣವು ಶೇ.24.09 ರಷ್ಟು ಮತ್ತು ಸಿಡಿ ಕಾಮಗಾರಿಗಳ ಪ್ರಮಾಣವು ಶೇ.20.07 ರಷ್ಟು ಇರುತ್ತದೆ. ಅಲ್ಲದೆ, ಮೇಲ್ಗಾಲುವೆ ಮತ್ತು ಸುರಂಗ ನಿರ್ಮಾಣದ ಕಾಮಗಾರಿ ನಿರ್ವಹಿಸಲು sophisticated

machineries & equipments, centering, shuttering and skilled personnels ನ ಅವಶ್ಯಕತೆ ಇರುವ ಅಂಶವನ್ನು ಸಮಿತಿಯು ಅವಲೋಕಿಸಿತು.

✓ It is a competitive tender.

10.5 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

ನಿರ್ಣಯ: ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್‌ಗಿಟ್ಟ ಮೊತ್ತ ರೂ. 108,11,91,859/-ಗಳ ಮೇಲೆ ಶೇ.9.00 ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು **M/s. Sadguru Infratech Pvt. Ltd- M/s P.Dasaratharama Reddy (JV)** *ಇವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.*

<u>ಭಾಗ–ಸಿ: ಆಡಳಿತಾತ್ಮಕ ಅನುಮೋದನೆಗಳು:</u>

ವಿಷಯ ಸಂ. **11:Lift scheme for filling tanks in Tarikere, Kadur & Chikmagalur taluks of Chikmagalur district and Arasikere taluk of Hassan district from Bhadra sub-basin – Administrative Approval – reg.**

ಕರ್ನಾಟಕ ಸರ್ಕಾರದ 2019–20 ಸಾಲಿನ ಆಯವ್ಯಯದಲ್ಲಿ ಜಲ ಸಂಪನ್ಮೂಲ ಇಲಾಖೆಯಿಂದ ಚಿಕ್ಕಮಗಳೂರು ಜಿಲ್ಲೆ ಹಾಗೂ ತಾಲ್ಲೂಕಿನ ಹೆಬ್ಬೆಹಳ್ಳದಲ್ಲಿ ಲಭ್ಯವಿರುವ ಹೆಚ್ಚುವರಿ ನೀರನ್ನು ಮದಗದ ಕೆರೆ, ಅಯ್ಯನಕೆರೆ ಮತ್ತು ಕಡೂರು ತಾಲ್ಲೂಕಿನ 19 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಸದರಿ ಸಾಲಿನಲ್ಲಿ ರೂ.100 ಕೋಟಿಗಳಷ್ಟು ಅನುದಾನದ ಪ್ರಾವಿಧಾನ ಮಾಡಲಾಗಿದ್ದು ಸದರಿ ಯೋಜನೆಯು ಆರ್ಥಿಕ ದೃಷ್ಟಿಕೋನಗಳಿಂದ ಕಾರ್ಯಸಾಧುವಾಗಿರುವುದಿಲ್ಲವಾದ್ದರಿಂದ (Infeasible) ಯೋಜನೆಯನ್ನು ಕೈಬಿಟ್ಟು, ಚಿಕ್ಕಮಗಳೂರು ಮದಗದಕೆರೆ–ಐಯ್ಯನಕೆರೆ–ಬೆಳವಾಡಿಕೆರೆ ಸೇರಿದಂತೆ ಗುರುತ್ವಾಕರ್ಷಣೆ ಮೂಲಕ ಚಿಕ್ಕಮಗಳೂರು–ಕಡೂರು–ತರಿಕೆರೆ ಹಾಗೂ ಅರಿಸೀಕೆರೆಯ ಭಾಗದ 167 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಯನ್ನು ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ಅನುಷ್ಠಾನಗೊಳಿಸಲು ಜನಪ್ರತಿನಿಧಿಗಳು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಸ್ತಾಪಿಸಿದ್ದು, ಈ ಕುರಿತು ಸಮರ್ಪಕವಾದ ಹಾಗೂ ಪರಿಪೂರ್ಣವಾದ ಪ್ರಸ್ತಾವನೆಯನ್ನು ತಯಾರಿಸಿ ಸಚಿವ ಸಂಪುಟ ಸಭೆಗೆ ಮಂಡಿಸುವಂತೆ ಸನ್ಮಾನ್ಯ ಮುಖ್ಯಮಂತ್ರಿಗಳು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶಿಸಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಯ ಗಮನಕ್ಕೆ ತಂದರು.

11.2 ಅದರಂತೆ ಮುಖ್ಯ ಇಂಜಿನಿಯರವರು Lift scheme for filling tanks in Tarikere, Kadur & Chikmagalur taluks of Chikmagalur district and Arasikere taluk of Hassan district from Bhadra sub-basin ಯೋಜನೆಯ ಕಾರ್ಯಸಾಧ್ಯತಾ ವರದಿಯೊಂದಿಗೆ ರೇಖಾ ಅಂದಾಜನ್ನು ರೂ.1351.90 ಕೋಟಿಗಳಿಗೆ ತಯಾರಿಸಿ ಆಡಳಿತಾತ್ಮಕ ಅನುಮೋದನೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ದಿನಾಂಕ 02.12.2019 ರಂದು ನಡೆದ ನಿಗಮದ ಅಂದಾಜು ಪರಿಶೀಲನಾ ಸಮಿತಿಯ 30ನೇ ಸಭೆಯ ಮುಂದೆ ಮಂಡಿಸಲಾಗಿದ್ದು, ಸಮಿತಿಯು ಸುಧೀರ್ಘ ಚರ್ಚೆಯ ನಂತರ ಯೋಜನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ನಿಗಮದ ನಿರ್ದೇಶಕರ

ಮಂಡಳಿಯ ತಿರುವಳಿ ಪಡೆಯಲು ಶಿಫಾರಸ್ಸು ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸುತ್ತಾ, ಸಮಾಲೋಚಕ ಸಂಸ್ಥೆಯಿಂದ ಸದರಿ ಯೋಜನೆಯ ವಿವರವಾದ ಯೋಜನಾ ವರದಿ ತಯಾರಿಸಲಾಗಿದ್ದು ಇದರನ್ವಯ ಕಾಮಗಾರಿಗಳ ವಿವರ ಮತ್ತು 2019-20 ರಿಂದ 2022-23ರ ನಾಲ್ಕು ವಾರ್ಷಿಕ ಅವಧಿಯಲ್ಲಿ ಅನುಷ್ಠಾನದ ಕಾರ್ಯಕ್ರಮ ಈ ಕೆಳಕಂಡಂತಿರುವುದನ್ನು ಮಂಡಳಿಯ ಗಮನಕ್ಕೆ ತಂದರು.

ಕ್ರಸಂ	ಹಂತ	ಕಾಮಗಾರಿಗಳ ವಿವರ	ಕೆರೆಗಳ ಸಂಖ್ಯೆ	ಮೊತ್ತ (ಕೋಟಿ ರೂ ಗಳಲ್ಲಿ)
1	ಹಂತ-1	ಹೆಡ್ ವರ್ಕ್ಸ್, 1ನೇ ಲಿಫ್ಟ್- ಭದ್ರಾ ಮೇಲ್ದಂಡೆ ಯೋಜನ ಕಾಲುವೆಯಿಂದ ಡಿ, ನ-1. ತಂಗಳಿ, ವಿಷ್ಣು ಸಮುದ್ರ, ಹಾಗೂ ಮಲ್ಲಘಟ್ಟ ಕೆರೆಗಳನ್ನು ತುಂಬಿಸುವ ಗ್ರ್ಯಾವಿಟಿ ಪೈಪ್ ಲೂನ್ ನಿರ್ಮಾಣ, 2ನೇ ಲಿಫ್ಟ್-ತಂಗಳಿ ಕೆರೆಯಿಂದ ಅಯ್ಯನ ಕೆರೆ ಹಾಗೂ ಬೆಳವಾಡಿ ಕೆರೆ ತುಂಬಿಸಲು	84	957.70
2	ಹಂತ-2	1ನೇ ಲಿಫ್ಟ್ ರೈಸಿಂಗ್ ಮೇನ್ನ ಚೈನೇಜ್ 16+400 ಕಿ.ಮೀ ನಿಂದ ನೀರನ್ನು ಟ್ಯಾಪ್ಮಾಡಿ ತರೀಕೆರೆ ತಾಲೂಕಿನ ಕೆರೆಗಳನ್ನು ತುಂಬಿಸುವುದು. ಡಿ.ಸಿ, 1 ರಿಂದ ಬರುವ ಗ್ರ್ಯಾವಿಟಿ ಫೀಡರ್ ನಿಂದ ದೇನವಕೇರೆ ತುಂಬಿಸುವುದು, ಮುಂದರೆ ಬರುವ ಆಕ್ಸಿಲಾರಿ ಲಿಫ್ಟ್-2 ನಿಂದ ಮದಗದಕೆರೆಯನ್ನು ತುಂಬಿಸುವುದು, ಮದಡಗದ ಕೆರೆಯನ್ನು ಅಭಿವೃದ್ಧಿಪಡಿಸುವುದು. ಆಕ್ಸಿಲಾರಿ ಲಿಫ್ಟ್-3ರ ಮೂಲಕ ಮಲ್ಲಘಟ್ಟ ಕೆರೆ ಇಂದಿ ಬೀದರ ಗ್ರಾಮದ ಬಳಿ ಎತ್ತರದ ಮಟ್ಟದಲ್ಲಿರುವ ಪ್ರದೇಶಕ್ಕೆ ನೀರನ್ನು ಒಯ್ಯುವುದು, ನಂತರ ಗ್ರ್ಯಾವಿಟಿ ಪೈಪ್ ಜಾಲದಿಂದ ಮಲ್ಲಘಟ್ಟ ಕೆರೆಯನ್ನು ತುಂಬಿಸುವುದು ಹಾಗೂ ಈ ಕೆರೆಯನ್ನು ಅಭಿವೃದ್ಧಿ ಪಡಿಸುವುದು. ಆಕ್ಸಿಲಾರಿ ಲಿಫ್ಟ್-4ರ ಮೂಲಕ ಬೆಳವಾಡಿ ಕೆರೆಯಿಂದ ಒತ್ತಡದ ವಿತರಣಾ ಪೈಪ್ ಜಾಲ ನಿರ್ಮಾಣ. ಆಕ್ಸಿಲಾರಿ ಲಿಫ್ಟ್-5ರ ಮೂಲಕ ಉದಾರಕಟ್ಟೆ ಕೆರೆಯಿಂದ ಒತ್ತಡದ ವಿತರಣಾ ಪೈಪ್‌ಜಾಲ ನಿರ್ಮಾಣ ಹಾಗೂ ಕೆರೆಗಳ ಅಭಿವೃದ್ಧಿ ಪಡಿಸುವುದು.	113	394.20
		ಒಟ್ಟು	197	1351.90

ಅನುಷ್ಠಾನ ಕಾರ್ಯಕ್ರಮ

ಸಂ	ವರ್ಷ	1ನೇ ಹಂತ (ಮೊತ್ತ ಕೋಟಿ ರೂ.)	2ನೇ ಹಂತ (ಮೊತ್ತ ಕೋಟಿ ರೂ.)	ಒಟ್ಟು (ಮೊತ್ತ ಕೋಟಿ ರೂ.)
1	2019-20	10.00	-	10.00
2	2020-21	280.00	80.00	360.00
3	2021-22	280.00	160.00	440.00
4	2022-23	397.70	154.20	456.90
	ಒಟ್ಟು	957.70	394.20	1351.90

11.3 ವಿಷಯದ ಪ್ರಸ್ತಾವನೆಯ ಚರ್ಚೆಯ ಸಂದರ್ಭದಲ್ಲಿ ನಿರ್ದೇಶಕರು ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಈಗಾಗಲೇ ನಾಲ್ಕು ನಿಗಮಗಳಲ್ಲಿ ಹಲವಾರು

ಪ್ರಸ್ತಾವನೆಗಳು ಅನುಮೋದನೆ ಗೊಂಡಿರುವುದರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ಬದ್ಧತೆಯಿಂದ ಈ ರೀತಿ ಅಧಿಕ ಮೊತ್ತದ ಯೋಜನೆಗಳಿಗೆ ಸರ್ಕಾರ ಅನುದಾನ ಒದಗಿಸುವುದು ಕಷ್ಟ ಸಾಧ್ಯವೆಂದು ಅಭಿಪ್ರಾಯಿಸುತ್ತಾ, ಯೋಜನೆಗಳನ್ನು ಅನುದಾನದ ಲಭ್ಯತೆಯನ್ನು ಪರಿಗಣಿಸಿ ಆದ್ಯತೆಗೆ ಅನುಸಾರ ಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದರು.

11.4 ಚರ್ಚೆಯ ನಂತರ ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

- ✓ ಹೆಬ್ಬೆಹಳ್ಳ ತಿರುವು ಯೋಜನೆಯು ತಾಂತ್ರಿಕ ಮತ್ತು ಆರ್ಥಿಕ ದೃಷ್ಟಿಕೋನಗಳಿಂದ ಕಾರ್ಯಸಾಧುವಾಗಿರುವುದಿಲ್ಲವಾದ್ದರಿಂದ (Infeasible) ಯೋಜನೆಯನ್ನು ಕೈಬಿಡುವ ಪ್ರಸ್ತಾವನೆಯನ್ನು ಅನುಮೋದಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿತು.
- ✓ Lift scheme for filling tanks in Tarikere, Kadur & Chikmagalur taluks of Chikmagalur district and Arasikere taluk of Hassan district from Bhadra sub-basin ಯೋಜನೆಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕ ಸಂಸ್ಥೆಯ ಸೇವೆ ಪಡೆಯುವ ರೂ.4.15 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದ ಕ್ರಮಕ್ಕೆ ಘಟನೋತ್ತರವಾಗಿ ಅನುಮೋದನೆ ನೀಡಿತು.
- ✓ Lift scheme for filling tanks in Tarikere, Kadur & Chikmagalur taluks of Chikmagalur district and Arasikere taluk of Hassan district from Bhadra sub-basin ರೂ.1351.90 ಕೋಟಿಗಳ ಯೋಜನೆಗೆ ತೀರುವಳಿ ನೀಡಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಗೆ ಶಿಫಾರಸ್ಸು ಮಾಡುತ್ತಾ, ಪ್ರಸ್ತುತದಲ್ಲಿ ಅನುಷ್ಠಾನದ ಕಾರ್ಯಕ್ರಮದ ಮೊದಲನೇ ಹಂತದ ರೂ.957.70 ಕೋಟಿ ಮೊತ್ತದ ಕಾಮಗಾರಿಗಳನ್ನು ಮಾತ್ರ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿತು.

ವಿಷಯ ಸಂ. 12: Extension of Holalkere tank filling Scheme to Fill up 6 no of tanks in Talya Hobli under Upper Bhadra project in Holalkere Taluk of Chitradurga District" ಕಾಮಗಾರಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಭದ್ರಾ ಮೇಲ್ದಂಡೆ ಯೋಜನೆಯ ಎರಡನೇ ಹಂತದಲ್ಲಿ ಬರುವ ಚಿತ್ರದುರ್ಗ ಶಾಖಾ ಕಾಲುವೆಯ ಚೈ.28.42ಕಿ.ಮೀ ನಲ್ಲಿ ಕವಲೊಡೆಯುವ ಹೊಳಲ್ಕೆರೆ ಫೀಡರ್ ಕಾಲುವೆಯಿಂದ ಹೊಳಲ್ಕೆರೆ ತಾಲ್ಲೂಕಿನ 22 ಕೆರೆಗಳನ್ನು ತುಂಬಿಸುವ ಎರಡು ಪ್ಯಾಕೇಜ್ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಹೊಳಲ್ಕೆರೆ ವಿಧಾನಸಭಾ ಶಾಸಕರು ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ತಾಳ್ಯ ಹೋಬಳಿಯ 6 ಕೆರೆಗಳು ಸಮರ್ಪಕವಾಗಿ ಮಳೆ ಬಾರದ ಕಾರಣ ನೀರಿಲ್ಲದೇ ಇರುವುದರಿಂದ ಆ ಭಾಗದ ಅಂತರ್ಜಲ ಮಟ್ಟ ತೀವ್ರವಾಗಿ ಕಡಿಮೆಯಾಗಿದ್ದು, ಜನ ಜಾನುವಾರುಗಳಿಗೆ ಸಹ ಕುಡಿಯುವ ನೀರಿಗೆ ತುಂಬಾ ತೊಂದರೆಯುಂಟಾಗಿರುವುದರಿಂದ ಈ ಭಾಗದ ರೈತರಿಗೆ ಕನಿಷ್ಠ ಕುಡಿಯುವ ನೀರು ಒದಗಿಸುವ ಸಲುವಾಗಿ ಅನುಮೋದಿತ ಯೋಜನಾ ವರದಿಯಲ್ಲಿ ಸೇರಿರದ 6 ಹೆಚ್ಚುವರಿ ಕೆರೆಗಳನ್ನು ತುಂಬಿಸಲು ಮನವಿ ಮಾಡಿದ್ದು ಸದರಿ ಪ್ರಸ್ತಾವನೆಯನ್ನು ಮಂಡಳಿಯ ಮುಂದಿಟ್ಟು ಅನುಮೋದನೆ ಪಡೆದು ಕಾಮಗಾರಿಗೆ ತಗಲುವ ವೆಚ್ಚವನ್ನು ಭದ್ರಾ ಮೇಲ್ದಂಡೆ ಯೋಜನೆಯ ಪರಿಷ್ಕೃತ ಅಂದಾಜಿನಲ್ಲಿ

ಅಳವಡಿಸಿಕೊಳ್ಳುವಂತೆ ಸರ್ಕಾರವು ನಿರ್ದೇಶಿಸಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಯ ಗಮನಕ್ಕೆ ತಂದರು.

12.2 ಮುಂದುವರೆಯುತ್ತಾ, ಅನುಮೋದಿತ ಯೋಜನಾ ವರದಿಯಲ್ಲಿ ಹೊಳಲ್ಕೆರೆ ತಾಲ್ಲೂಕಿನ 22 ಕೆರೆಗಳನ್ನು ತುಂಬಿಸಲು 0.50 ಟಿ.ಎಂ.ಸಿ ನೀರಿನ ಅವಕಾಶವಿದ್ದು, ಈ ಪೈಕಿ, 22 ಕೆರೆಗಳನ್ನು ತುಂಬಿಸಲು 0.389 ಟಿ.ಎಂ.ಸಿ ನೀರಿನ ಅವಶ್ಯಕತೆ ಇದ್ದು, ಇದರಲ್ಲಿ 0.111 ಟಿ.ಎಂ.ಸಿ ನೀರಿನ ಉಳಿತಾಯವಾಗುವುದರಿಂದ ಈ ಉಳಿತಾಯದಲ್ಲಿ ಶಾಸಕರಿಂದ ಪ್ರಸ್ತಾಪಿಸಲ್ಪಟ್ಟ ತಾಳ್ಯ ಹೋಬಳಿಯ 6 ಕೆರೆಗಳಾದ ತಾಳ್ಯ, ಟಿ.ಎಮ್ಮಿಗಾಣೂರು, ಶಿವಗಂಗಾ, ಗುಡಿಕೆರೆ, ಹೊರಕೆರೆದೇವಪುರ ಮತ್ತು ಹಳೇಹಳ್ಳಿ ಕೆರೆಗಳನ್ನು ತುಂಬಿಸಲು ಸರಿದೂಗಿಸಬಹುದೆಂದು ಮತ್ತು ಈ ರೀತಿ ಸದರಿ 6 ಹೆಚ್ಚುವರಿ ಗಳಿಗೆ ನೀರು ಒದಗಿಸುವುದರಿಂದ ಅನುಮೋದಿತ ಯೋಜನಾ ವರದಿಯಲ್ಲಿ ಪರಿಗಣಿಸಿರುವ ಕೊನೆಯ ಭಾಗದ ಕೆರೆಗಳಿಗೆ ನೀರು ಒದಗಿಸುವಲ್ಲಿ ಯಾವುದೇ ತೊಂದರೆಗಳಾಗುವುದಿಲ್ಲವೆಂದು ಮುಖ್ಯ ಇಂಜಿನಿಯರ್ ರವರು ವರದಿಸಿದ್ದಾರೆಂದು ಮಂಡಳಿಗೆ ತಿಳಿಸಿದರು.

12.3 ಚರ್ಚೆಯ ನಂತರ ದಿನಾಂಕ: 02.12.2019 ರಂದು ಜರುಗಿದ ನಿಗಮದ ಅಂದಾಜು ಪರಿಶೀಲನಾ ಸಮಿತಿಯ 30ನೇ ಸಭೆಯಲ್ಲಿ ನೀಡಿರುವ ತೀರುವಳಿ ಅನುಸಾರ ಸದರಿ ಪ್ರಸ್ತಾವನೆಯ ಕಾರ್ಯಸಾಧ್ಯತಾ ವರದಿಯನ್ನು ಒಳಗೊಂಡ ರೂ.66.27 ಕೋಟಿಗಳ ರೇಖಾ ಅಂದಾಜು ಪಟ್ಟಿಗೆ ಮಂಡಳಿಯು ಆಡಳಿತಾತ್ಮಕ ಅನುಮೋದನೆ ನೀಡಿ ಸರ್ಕಾರದ ನಿರ್ದೇಶನದಂತೆ ಭದ್ರಾ ಮೇಲ್ದಂಡೆ ಯೋಜನೆಯ ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಿಕೊಳ್ಳಲು ಸೂಚಿಸಿತು.

ವಿಷಯ ಸಂ. 13:ಭದ್ರಾ ಮೇಲ್ದಂಡೆ ಯೋಜನಾ ವ್ಯಾಪ್ತಿಯ ಹಿಂದುಳಿದ ಪ್ರದೇಶದ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಈ ಕೆಳಕಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

i. ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಗುಡ್ಡದನೇರಲಕೆರೆ ಗ್ರಾಮದಲ್ಲಿ ರೂ 250.00 ಲಕ್ಷಗಳ ಮೊತ್ತದ ಕಾಂಕ್ರೀಟ್ ರಸ್ತೆ ಹಾಗೂ ಬಾಕ್ಸ್ ಚರಂಡಿ ನಿರ್ಮಾಣ
ii. ಕಡೂರು ತಾಲ್ಲೂಕಿನ ಕಸಬಾ ಹೋಬಳಿಯ ವಡೇರಹಳ್ಳಿ ಗ್ರಾಮದ ಶ್ರೀ ಬಯಲು ಬಸವೇಶ್ವರ ಸ್ವಾಮಿ ದೇವಾಲಯ ಆವರಣದಲ್ಲಿ ರೂ. 200.00 ಲಕ್ಷಗಳ ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ (ಉಳಿದ).
iii. ಶಿರಾ ತಾಲ್ಲೂಕಿನ ಮರಡಿ ರಂಗನಥ ಸ್ವಾಮಿ ದೇವಾಲಯ ಆವರಣದಲ್ಲಿ ರೂ. 250.00 ಲಕ್ಷಗಳ ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ.
iv. ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಗುಡ್ಡದನೇರಲಕೆರೆ ಗ್ರಾಮದಲ್ಲಿ ರೂ 150.00 ಲಕ್ಷಗಳ ಮೊತ್ತದ ಸಮುದಾಯ ಭವನ ನಿರ್ಮಾಣ ಕಾಮಗಾರಿ.

ವಿಷಯದ ಪ್ರಸ್ತಾವನೆಯ ಚರ್ಚೆಯ ನಂತರ ಭದ್ರಾ ಮೇಲ್ದಂಡೆ ಯೋಜನಾ ವ್ಯಾಪ್ತಿಯಲ್ಲಿ ಬರುವ ಹಿಂದುಳಿದ ಪ್ರದೇಶಗಳಲ್ಲಿ ಜನ ಪ್ರತಿನಿಧಿಗಳ ಕೋರಿಕೆಯಂತೆ ಮೂಲ ಭೂತ ಸೌಕರ್ಯಗಳನ್ನು ಕಲ್ಪಿಸುವ ರೂ.850.00 ಲಕ್ಷ ಮೊತ್ತದ ಈ ಕೆಳಕಂಡ ಕಾಮಗಾರಿಗಳಿಗೆ ಮಂಡಳಿಯು ಆಡಳಿತಾತ್ಮಕ ಅನುಮೋನದೆಯನ್ನು ನೀಡಿತು.

ಕ್ರ. ಸಂ.	ಕಾಮಗಾರಿಯ ಹೆಸರು	ಪ್ರಯೋಜನಾ ಪಡೆಯಲಿರುವ ವಿಧಾನ

		ಸಭಾ / ಲೋಕ ಸಭಾ ಕ್ಷೇತ್ರ
1	ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಗುಡ್ಡದನೇರಲಕೆರೆ ಗ್ರಾಮದಲ್ಲಿ ರೂ 250.00 ಲಕ್ಷಗಳ ಮೊತ್ತದ ಕಾಂಕ್ರೀಟ್ ರಸ್ತೆ ಹಾಗೂ ಬಾಕ್ಸ್ ಚರಂಡಿ ನಿರ್ಮಾಣ.	ಹೊಸದುರ್ಗ
2	ಕಡೂರು ತಾಲ್ಲೂಕಿನ ಕಸಬಾ ಹೋಬಳಿಯ ವಡೇರಹಳ್ಳಿ ಗ್ರಾಮದ ಶ್ರೀ ಬಯಲು-ಬಸವೇಶ್ವರ ಸ್ವಾಮಿ ದೇವಾಲಯ ಆವರಣದಲ್ಲಿ ರೂ. 200.00 ಲಕ್ಷಗಳ ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ.	ಕಡೂರು
3	ಶಿರಾ ತಾಲ್ಲೂಕಿನ ಮರಡಿ ರಂಗನಥ ಸ್ವಾಮಿ ದೇವಾಲಯ ಆವರಣದಲ್ಲಿ ರೂ. 250.00 ಲಕ್ಷಗಳ ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ.	ಶಿರಾ/ತುಮಕೂರು
4	ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಗುಡ್ಡದನೇರಲಕೆರೆ ಗ್ರಾಮದಲ್ಲಿ ರೂ 150.00 ಲಕ್ಷಗಳ ಮೊತ್ತದ ಸಮುದಾಯ ಭವನ ನಿರ್ಮಾಣ ಕಾಮಗಾರಿ	ಹೊಸದುರ್ಗ

ವಿಷಯ ಸಂ. 14: Setting up 7.5MW solar PV power generation plant on top of the Holalkere feeder Canal located in Chitradurga District ಕಾಮಗಾರಿಯ ಪರಿಕಲ್ಪನಾ ವರದಿ (Conceptual Report) ಗೆ ಅನುಮೋದನೆ ನೀಡುವ ಕುರಿತು.

ಶ್ರೀ ಎಂ ಚಂದ್ರಪ್ಪ, ಮಾನ್ಯ ಶಾಸಕರು ಹೊಳಲ್ಕೆರೆ ವಿಧಾನಸಭಾ ಕ್ಷೇತ್ರ ಇವರು ಹೊಳಲ್ಕೆರೆ ತಾಲ್ಲೂಕಿನ 22 ಕೆರೆಗಳನ್ನು ತುಂಬಿಸುವ ಹೊಳಲ್ಕೆರೆ ಫೀಡರ್ ಕಾಮಗಾರಿಯ ಪ್ರಾರಂಭದಲ್ಲಿ ಬರುವ 4.534 ಕಿಮೀ ನ ತೆರೆದ ಕಾಲುವೆಯಲ್ಲಿ ನೀರು ಹರಿಸಿದಾಗ ಅಕ್ಕಪಕ್ಕದ ರೈತರು ಅನಧಿಕೃತವಾಗಿ ನೀರನ್ನು ಪಂಪ್ ಮೂಲಕ ಎತ್ತಬಹುದಾದ ಸಾಧ್ಯತೆಗಳಿರುವುದರಿಂದ ಕೆರೆ ತುಂಬಿಸುವ ಉದ್ದೇಶವು ಸಫಲವಾಗುವುದಿಲ್ಲವೆಂದು, ಇದನ್ನು ತಡೆಯುವುದು ಕಷ್ಟಸಾಧ್ಯವಾಗುವುದಲ್ಲದೆ, ಭವಿಷ್ಯದಲ್ಲಿ ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಯಾಗುವುದರಿಂದ 22 ಕೆರೆ ತುಂಬಿಸುವ ಈ ಯೋಜನೆಯನ್ನು ಸಫಲಗೊಳಿಸುವ ಉದ್ದೇಶದಿಂದ, ಸದರಿ ಕಾಲುವೆಯನ್ನು ಕವರ್ ಮಾಡಿ ನೀರನ್ನು ಅನಧಿಕೃತವಾಗಿ ಎತ್ತುವುದನ್ನು ತಡೆಯಲು ಸೂಕ್ತ ಕ್ರಮ ಜರುಗಿಸುವಂತೆ ಕೋರಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಯ ಗಮನಕ್ಕೆ ತಂದರು.

14.2 ಮುಂದುವರೆಯುತ್ತಾ, ಸದರಿ ಪ್ರಸ್ತಾವನೆಯ ಕುರಿತು ಪರಿಶೀಲಿಸಿ ನೀರನ್ನು ಅನಧಿಕೃತವಾಗಿ ಎತ್ತುವುದನ್ನು ತಡೆಯಲು ಕಾಲುವೆಯ ಮೇಲ್ಭಾಗದಲ್ಲಿ ಕಾಂಕ್ರೀಟ್ ಶೆಲ್ ಅಳವಡಿಸಿ ಕಾಲುವೆ ಮುಚ್ಚಬಹುದಾಗಿದ್ದು ಇದರ ವೆಚ್ಚ ದುಬಾರಿ ಹಾಗು ನಿರುಪಯುಕ್ತವಾಗಿರುವುದರಿಂದ ಪರ್ಯಾಯವಾಗಿ ಸೋಲಾರ್ ಪ್ಯಾನಲ್ ಗಳನ್ನು ಕಾಲುವೆಯ ಮೇಲ್ಭಾಗದಲ್ಲಿ ಅಳವಡಿಸುವುದರಿಂದ ಕಾಲುವೆಯಲ್ಲಿ ಹರಿಯುವ ನೀರಿನ ಆವಿಯಾಗುವುದನ್ನು (evaporation loss) ತಡೆಗಟ್ಟಬಹುದಲ್ಲದೆ, ಜೊತೆಗೆ ವಿದ್ಯುತ್ ಉತ್ಪಾದನೆಯನ್ನೂ ಸಹಾ ಮಾಡಬಹುದಾಗಿದ್ದು ಸದರಿ ಕಾಲುವೆಯ ಮೇಲ್ಭಾಗದಲ್ಲಿ ಸುಮಾರು 7.5 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಬಹುದಾಗಿದ್ದು, ಇದರ ವೆಚ್ಚವನ್ನು 7 ರಿಂದ 8 ವರ್ಷದಲ್ಲಿ ಮರಳಿ ಪಡೆಯಬಹುದಾಗಿದ್ದು, ಇದರ ಅನುಷ್ಠಾನವನ್ನು Public Private Partnership (PPP) ವಿಧಾನವನ್ನು ಅಳವಡಿಸಿಕೊಂಡಲ್ಲಿ ನಿಗಮಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ ಹಾಗೂ ನಿಗಮಕ್ಕೆ ನಿಯಮಿತ ಆದಾಯವೂ ಸಹ ಬರುತ್ತದೆಂದು ಹಾಗೂ

ಕರ್ನಾಟಕದಲ್ಲಿ ಈಗಾಗಲೇ Public Private Partnership (PPP) ಮಾದರಿಯಲ್ಲಿ ಈ ಕೆಳಕಂಡ ಸೋಲಾರ್ ಪ್ಲಾಂಟ್‌ಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಮಂಡಳಿಯ ಗಮನಕ್ಕೆ ತಂದರು.

- ಕೊಪ್ಪಳ LIS Micro Irrigation Project Under Upper Krishna Project Stage –III – 15 ಮೆಗಾ ವ್ಯಾಟ್ – ರೂ.80.00 ಕೋಟಿ
- LIS Almatti Right Bank Canal under Upper Krishna Project Stage–I – 10 ಮೆಗಾ ವ್ಯಾಟ್ – ರೂ.60.00 ಕೋಟಿ
- Varuna Canal Passing Through Development area of Mysore city – ರೂ.40.00 ಕೋಟಿ

14.3 ಚರ್ಚೆಯ ನಂತರ ಹೊಳಲ್ಕೆರೆ ಫೀಡರ್ ಕಾಲುವೆ 4.534 ಕಿಮೀ ರಲ್ಲಿ ತೆರೆದ ಕಾಲುವೆಗೆ 7.5 ಮೆಗಾ ವ್ಯಾಟ್ ಸೋಲಾರ್ ವಿದ್ಯುತ್ ಘಟಕವನ್ನು ರೂ.36.50 ಕೋಟಿಗಳ ವೆಚ್ಚದಲ್ಲಿ ಅಳವಡಿಸುವ ಕಾಮಗಾರಿಯ ಪರಿಕಲ್ಪನಾ ವರದಿಯನ್ನು ದಿನಾಂಕ: 02.12.2019 ರಂದು ಜರುಗಿದ ನಿಗಮದ ಅಂದಾಜು ಪರಿಶೀಲನಾ ಸಮಿತಿಯ 30ನೇ ಸಭೆಯಲ್ಲಿ ಮಂಡಿಸಿ ತೀರುವಳಿ ಪಡೆದಿರುವ ಅನುಸಾರ ವಿವರವಾದ ಯೋಜನಾ ವರದಿ (DPR) ಯನ್ನು ತಯಾರಿಸಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲು ಮಂಡಳಿಯು ಶಿಫಾರಸ್ಸು ಮಾಡಿತು.

<u>ಭಾಗ–ಡಿ: ಇತರೆ ವಿಷಯಗಳು:</u>

ವಿಷಯ ಸಂ. 15: ಭದ್ರಾ ಮೇಲ್ದಂಡೆ ಯೋಜನೆ ಕಾಲುವೆಯ ಅಜ್ಜಂಪುರದ ಬಳಿ ಬೆಂಗಳೂರು–ಹುಬ್ಬಳ್ಳಿ ರೈಲ್ವೆ ಕ್ರಾಸಿಂಗ್ ಕಾಮಗಾರಿಯಡಿಯಲ್ಲಿ ಪೈಪ್ ಪುಶಿಂಗ್ ಕೆಲಸವನ್ನು ನಿಗಮದಿಂದ ಕೈಗೆತ್ತಿಕೊಳ್ಳುವ ಕಾಮಗಾರಿಗೆ ನೀಡಿರುವ ಅನುಮೋದನೆಗೆ ಅನುಸಮರ್ಥನೆ ನೀಡುವ ಕುರಿತು.

ಭದ್ರಾ ಮೇಲ್ದಂಡೆ ಯೋಜನೆಯ ಮೊದಲನೇ ಹಂತದಲ್ಲಿ ಬರುವ ಭದ್ರಾ ಜಲಾಶಯದಿಂದ ಅಜ್ಜಂಪುರದವರೆಗಿನ ಏತ ಹಾಗೂ ಸುರಂಗ ನಿರ್ಮಾಣ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, 2019–20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಪ್ರಾಯೋಗಿಕವಾಗಿ 2.0 ಟಿ.ಎಂ.ಸಿ ನೀರನ್ನು ವಾಣಿ ವಿಲಾಸ ಸಾಗರಕ್ಕೆ ಹರಿಸಲು ಯೋಜಿಸಲಾಗಿದ್ದು ಇದಕ್ಕೆ ಪೂರಕವಾಗಿ ಅಜ್ಜಂಪುರ ಸುರಂಗದ ಕಾಮಗಾರಿಯ (ಪ್ಯಾಕೇಜ–3) ಎಕ್ಸಿಟ್ ಭಾಗದ ಸರಪಳಿ 8.9 ಕಿ.ಮೀ ನಲ್ಲಿ ಬರುವ ಅಜ್ಜಂಪುರ–ಶಿವನಿ ರೈಲ್ವೇ ಕ್ರಾಸಿಂಗ್ ಕಾಮಗಾರಿಯನ್ನು ಪೂರ್ಣಗೊಳಿಸುವುದು ಅಗತ್ಯವಾಗಿದೆ. ಸದರಿ ಕಾಮಗಾರಿಯನ್ನು ರೈಲ್ವೇ ಇಲಾಖೆಯಿಂದ ನಿರ್ವಹಿಸಲು ನಿಗಮದಿಂದ ರೂ.14.73 ಕೋಟಿ ಮೊತ್ತವು ಪಾವತಿಯಾಗಿದ್ದು, ರೈಲ್ವೇ ಇಲಾಖೆ ಈ ಕಾಮಗಾರಿಯನ್ನು ಜನವರಿ–2017 ರಿಂದ ನಿರ್ವಹಿಸುತ್ತಿದ್ದು ಈ ಕಾಮಗಾರಿಯ 2 ಸಂಖ್ಯೆ ಬಾಕ್ಸ್ ಪುಶಿಂಗ್‌ನ್ನು ಮಾಡುವಾಗ ಮಣ್ಣಿನ ಏರಿಯು ಕುಸಿಯದಂತೆ ಸುರಕ್ಷತಾ ದೃಷ್ಟಿಯಿಂದ 2 ಸ್ಟೀಲ್ ಗರ್ಡರಗಳನ್ನು ಅಳವಡಿಸಲಾಗಿದ್ದು ಬಾಕ್ಸ್ ಪುಶಿಂಗ್ ಕೆಲಸ ಪ್ರಗತಿಯಲ್ಲಿರುವಾಗ ಮಳೆಯಿಂದಾಗಿ ಏರಿಯ ಮಣ್ಣಿನ ಕುಸಿತವಾಗಿದ್ದು ದಿನಾಂಕ: 23–06–2019 ರಿಂದ ಬಾಕ್ಸ್ ಪುಶಿಂಗ್ ಕೆಲಸ ಸ್ಥಗಿತವಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

15.2 ಮುಂದುವರೆಯುತ್ತಾ, ಸದರಿ ಕಾಮಗಾರಿ ಸ್ಥಗಿತಗೊಂಡಿರುವುದರಿಂದ, ಯೋಜಿಸಿದಂತೆ ವಾಣಿ ವಿಲಾಸ ಸಾಗರಕ್ಕೆ 2019–20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಪ್ರಾಯೋಗಿಕವಾಗಿ ನೀರು ಹರಿಸುವ ಕಾರ್ಯಕ್ರಮಕ್ಕೆ ತೊಂದರೆ ಉಂಟಾಗುವುದನ್ನು ತಪ್ಪಿಸಲು ರೈಲ್ವೇ ಇಲಾಖೆಯ ಸಲಹೆಯಂತೆ ದಿನಾಂಕ:01–07–2019 ರಂದು ಮಾನ್ಯ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾರ್ಮಿಕ ಇಲಾಖೆ ಸಚಿವರು ಕರ್ನಾಟಕ ಸರ್ಕಾರ ಹಾಗೂ ರೈಲ್ವೇ ಇಲಾಖೆಯ ಅಧಿಕಾರಿಗಳೊಂದಿಗೆ ಜರುಗಿದ ಸಭೆಯಲ್ಲಿ ಸ್ಟೀಲ್ ಪೈಪ್ ಪುಶಿಂಗ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಹಾಗೂ ಈ ಕಾಮಗಾರಿಗಾಗಿ ತಗಲುವ ವೆಚ್ಚವನ್ನು ಭದ್ರಾ ಮೇಲ್ದಂಡೆ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಪರಿಗಣಿಸಲು ಸೂಚಿಸಲಾಗಿದ್ದು ಸದರಿ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳುವ ದೃಷ್ಟಿಯಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯಿಂದ ಕೈಗೊಂಡು ಪೂರ್ಣಗೊಳಿಸಿ ಅಕ್ಟೋಬರ್–2019ರಲ್ಲಿ ವಾಣಿ ವಿಲಾಸ ಸಾಗರಕ್ಕೆ ಯೋಜಿಸಿದಂತೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಯ ಗಮನಕ್ಕೆ ತಂದರು.

15.3 ಚರ್ಚೆಯ ನಂತರ ಸ್ಟೀಲ್ ಪೈಪಗಳನ್ನು 'ಪುಶಿಂಗ್ ತಂತ್ರಜ್ಞಾನ' ದ ಮೂಲಕ ಅಳವಡಿಸಲು ರೂ.140.00 ಲಕ್ಷಗಳು ಹಾಗೂ ಸದರಿ ಕಾಮಗಾರಿಯ ಮೇಲುಸ್ತುವಾರಿಗಾಗಿ ನೇಮಿಸಿದ ಸಮಾಲೋಚಕರಾದ M/s Stedrant Technoclinic Pvt Ltd., ಇವರ ಸಲಹೆಯಂತೆ ರೈಲ್ವೇ ಕ್ರಾಸಿಂಗ್ ಪೈಪ್‌ನ ಕೆಳಬದಿಯಲ್ಲಿ ಹೆಚ್ಚುವರಿಯಾಗಿ ಅಗತ್ಯ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲು ರೂ.9.50 ಲಕ್ಷಗಳು ಅಂದರೆ ಒಟ್ಟು ರೂ 149.50 ಲಕ್ಷಗಳ ವೆಚ್ಚದಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಂಡಿರುವ ಕ್ರಮಕ್ಕೆ ಪ್ರಸ್ತಾಪಿಸಿರುವಂತೆ ಮಂಡಳಿಯು ಘಟನೋತ್ತರ ಅನುಮೋದನೆಯನ್ನು ನೀಡಿತು.

ವಿಷಯ ಸಂ. 16:Consultancy Services for detailed reconnaissance survey, investigation and preparation of necessary drawings, detailed estimates, project report and DTP for restoration of tanks proposed for filling under Yettinahole integrated drinking water project ಕಾಮಗಾರಿಯ ಅಂದಾಜು ಪತ್ರಿಕೆಗೆ ಹಾಗೂ ಡಿ.ಟಿ.ಎಸ್‌ಗೆ ನೀಡಿರುವ ಅನುಮೋದನೆಗೆ ಅನುಸಮರ್ಥನೆ ನೀಡುವ ಕುರಿತು.

2019–20ನೇ ಸಾಲಿನ ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಎತ್ತಿನಹೊಳೆ ಯೋಜನೆಯಡಿಯಲ್ಲಿ ಪರಿಗಣಿಸಿರುವ ಕೆರೆಗಳ ಸಮಗ್ರ ಅಭಿವೃದ್ಧಿಗೆ ರೂ.290.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು ಸದರಿ ಯೋಜನೆಯಡಿಯ 527 ಕೆರೆಗಳ ಪೈಕಿ, ಹೆಚ್.ಎನ್. ವ್ಯಾಲಿ ಮತ್ತು ಕೆ.ಸಿ. ವ್ಯಾಲಿ ಯೋಜನೆಗಳಡಿ 81 ಕೆರೆಗಳಿಗೆ ನೀರನ್ನು ಪೂರೈಸಲು ಯೋಜಿಸಲಾಗಿರುವುದರಿಂದ ಈ ಕೆರೆಗಳನ್ನು ಹೊರತುಪಡಿಸಿ ಉಳಿಕೆ 446 ಕೆರೆಗಳ ಸಮಗ್ರ ಅಭಿವೃದ್ಧಿ ಹಾಗೂ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ.20.00 ಕೋಟಿಗಳ ಅನುದಾನದೊಂದಿಗೆ ಘೋಷಿಸಲಾದ ಬಾಗೇಪಲ್ಲಿ ತಾಲ್ಲೂಕಿನ ಪಾತಪಾಳ್ಯ ಹೋಬಳಿಯ ಬಳಿ ಘಂಟಲಮಲ್ಲಮ್ಮನ ಕಣಿವೆಗೆ ಅಡ್ಡಲಾಗಿ ಹಳ್ಳಕ್ಕೆ ಬ್ಯಾರೇಜ್ ನಿರ್ಮಾಣ ಕಾಮಗಾರಿಯಡಿ ಸದರಿ ಕಣಿವೆಯ ಸಮಗ್ರ ಅಭಿವೃದ್ಧಿಯನ್ನು ಸೇರ್ಪಡಿಸಿ ಒಟ್ಟು 447 ಕೆರೆಗಳನ್ನು ಅಭಿವೃದ್ಧಿಪಡಿಸಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರ ಸೇವೆ ಪಡೆಯುವ ಕಾಮಗಾರಿಯ ರೂ.585.50 ಲಕ್ಷಗಳ ಅಂದಾಜು ಪಟ್ಟಿಗೆ ದಿನಾಂಕ: 17–06–2019 ರಂದು ಮುಖ್ಯ ಇಂಜನಿಯರ್‌ರವರು ತಾಂತ್ರಿಕ ಮಂಜೂರಾತಿಯನ್ನು ನೀಡಿರುವ ಕ್ರಮಕ್ಕೆ ದಿನಾಂಕ: 18.10.2019 ರಂದು ಜರುಗಿದ ನಿಗಮದ ಅಂದಾಜು ಪರಿಶೀಲನಾ ಸಮಿತಿಯ 28ನೇ ಸಭೆಯಲ್ಲಿ ಮಂಡಿಸಿ ಘಟನೋತ್ತರ ತೀರುವಳಿ ಪಡೆಯಲಾಗಿರುತ್ತದೆಂದು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

16.2 ಚರ್ಚೆಯ ನಂತರ ಸದರಿ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳುವ ಸಲುವಾಗಿ ಸಮಾಲೋಚಕರ ಸೇವೆಯನ್ನು ನಿಯಮಾನುಸಾರ ಪಡೆಯುವ ಕಾಮಗಾರಿಯ ರೂ.585.50 ಲಕ್ಷಗಳ ಅಂದಾಜು ಪಟ್ಟಿಗೆ ವ್ಯವಸ್ಥಾಪಕ ನಿರ್ದೇಶಕರು ಅನುಮೋದನೆ ನೀಡಿರುವ ಕ್ರಮಕ್ಕೆ ಪ್ರಸ್ತಾಪಿಸಿರುವಂತೆ ಮಂಡಳಿಯು ಅನುಸಮರ್ಥನೆ ನೀಡಿ ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿತು.

ವಿಷಯ ಸಂ. 17: **Implementation of Yettinahole Project-Right of use of Kadumane Estate Company (KEC) Property- Additional license fee ನೀಡುವ ಕುರಿತು.**

ಎತ್ತಿನಹೊಳೆ ಯೋಜನೆಯ ಮೊದಲನೇ ಹಂತದ ಏತ ಕಾಮಗಾರಿಯ ಪ್ಯಾಕೇಜ್–5ರ ಕಾಮಗಾರಿಗೆ ಕಾಡುಮನೆ ಎಸ್ಟೇಟ್ ಕಂಪನಿ (KEC) ಸಕಲೇಶಪುರ, ಇವರ 35 ಎಕರೆ ಖಾಸಗಿ ಜಾಗವನ್ನು "Right of Use" ಮುಖಾಂತರ One time License fee ರೂ.50.00 ಲಕ್ಷಗಳ ಮೊತ್ತಕ್ಕೆ ಪಡೆಯಲಾಗಿದ್ದು ಈ ಸಂಬಂಧವಾಗಿ ಮಾಡಿಕೊಂಡಿರುವ ಒಪ್ಪಂದದನ್ವಯ ಯೋಜನಾ ಕಾಮಗಾರಿಗಳನ್ನು ಪೂರ್ಣಗೊಳಿಸುವ ಅವಧಿ ಆಗಸ್ಟ್–2018ಕ್ಕೆ ಮುಕ್ತಾಯಗೊಂಡಿದ್ದು, ವಿದ್ಯುತ್ ಸಂಪರ್ಕ ಮಾರ್ಗ ನಿರ್ಮಾಣ ಮಾಡುವ ಕಾಮಗಾರಿಯು ಪ್ರಗತಿಯಲ್ಲಿದ್ದು ಕರಾರಿನ ಕಾಲಾವಧಿಯನ್ನು, ಈ ಹಿಂದೆ ಅಂದಾಜಿಸಲಾಗಿದ್ದ License fee ಮೊತ್ತ ಅವರಿಗೆ ಯೋಜನಾ ಕಾಮಗಾರಿಗಳಿಂದ ಉಂಟಾದ ಹಾನಿ ಮತ್ತು ನಿಗಮ ನೇರ ಖರೀದಿಗೆ ನಿಗಧಿಪಡಿಸಿದ ಜಮೀನಿನ ದರಕ್ಕೆ ಹೋಲಿಸಿದಲ್ಲಿ ಅತೀ ಕಡಿಮೆ ಎಂದು ಭಾವಿಸಿ ಹೆಚ್ಚುವರಿ License fee ನೀಡುವ ಷರತ್ತಿನೊಂದಿಗೆ ದಿನಾಂಕ: 31.12.2019 ರವರೆಗೆ ವಿಸ್ತರಿಸಿ KEC ರವರು Supplementary Agreementನ್ನು ಮಾಡಿಕೊಳ್ಳಲು ಒಪ್ಪಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

17.2 ಮುಂದುವರೆಯುತ್ತಾ, KEC ರವರು ಈ ಹಿಂದೆ ನೀಡಿದ್ದ ರೂ.50 ಲಕ್ಷ License fee ಜೊತೆಗೆ ಅಧಿಕವಾಗಿ ರೂ.1.50 ಕೋಟಿಗೆ ಬೇಡಿಕೆ ಸಲ್ಲಿಸಿದ್ದು, ಈ ಕುರಿತು ಅವರು ಪ್ರಸ್ತಾಪಿಸಿದ್ದ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮುಖ್ಯ ಇಂಜನೀಯರ್ ರವರು ರೂ.30 ಲಕ್ಷ ಅಧಿಕ License fee ಯನ್ನು ನೀಡಲು ಪ್ರಸ್ತಾಪಿಸಿದ್ದು, ಇದನ್ನು ಅಂದಾಜು ಪರಿಶೀಲನಾ ಸಮಿತಿಯು ಪರಿಗಣಿಸಿ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ಮಾಡಿರುವುದೆಂದು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

17.3 ಚರ್ಚೆಯ ನಂತರ ಮೇಲೆ ತಿಳಿಸಿರುವ ಅಂಶಗಳನ್ನು ಹಾಗೂ ಭವಿಷ್ಯದಲ್ಲಿ ಸದರಿ ಪ್ರದೇಶದಲ್ಲಿ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಬೇಕಾಗಿದ್ದು, KEC ರವರ ಸಹಕಾರ ಮತ್ತು ಅವರೊಡನೆ ಸೌಹಾರ್ದತೆ ಕಾಪಾಡುವುದು ಬಹಳ ಮುಖ್ಯವಾಗಿರುವುದನ್ನು ಪರಿಗಣಿಸಿ ಮಂಡಳಿಯು ಅವರಿಂದ "Right of Use" ಆಧಾರದ ಮೇಲೆ ಪಡೆದಿರುವ ಸುಮಾರು 35 ಎಕರೆ ಜಮೀನಿಗೆ ರೂ.30 ಲಕ್ಷ ಅಧಿಕ One time License fee ಯನ್ನು ಪಾವತಿಸಲು ಅನುಮೋದನೆ ನೀಡಿತು.

<u>ಹೆಚ್ಚುವರಿ ವಿಷಯಗಳು:</u>

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ವಿಷಯ ಸಂ. 18: **"Construction of Challakere - Molakalmur Gravity Main piped distribution network from Chitradurga Branch Canal Under Upper Bhadra Project including Operation & Maintenance for 5 years after successful completion of work" ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನ ವರದಿ ಕುರಿತು.**

ಭದ್ರಾ ಮೇಲ್ದಂಡೆ ಯೋಜನೆಯ ಚಿತ್ರದುರ್ಗ ಶಾಖಾ ಕಾಲುವೆಯ ಸರಪಳಿ 120.820 ಕಿ.ಮೀ, ಸರಪಳಿ 127.700 ಕಿ.ಮೀ ಹಾಗೂ ಸರಪಳಿ 134.45 ಕಿ.ಮೀ ಗಳಲ್ಲಿ ಕವಲೊಡೆಯುವ ಚಳ್ಳಕೆರೆ ಮೊಳಕಾಲ್ಮೂರು, ರಾಣಿಕೆರೆ ಮತ್ತು ಸಾಣಿಕೆರೆ–ಬೆಳಗೆರೆ Gravity main ಗಳಿಂದ 1.86 ಟಿ.ಎಂ.ಸಿ ನೀರಿನ ಬಳಕೆಯೊಂದಿಗೆ ಚಳ್ಳಕೆರೆ ತಾಲ್ಲೂಕಿನ 58 ಕೆರೆಗಳು ಹಾಗೂ ಮೊಳಕಾಲ್ಮೂರು ತಾಲ್ಲೂಕಿನ 20 ಕೆರೆಗಳಿಗೆ ನೀರನ್ನು Gravity pipe ಮುಖಾಂತರ ತುಂಬಿಸಲು ಯೋಜಿಸಲಾಗಿದ್ದು, ಪ್ರಸ್ತಾಪಿತ ಕಾಮಗಾರಿಯ ಟೆಂಡರ್ ಚಳ್ಳಕೆರೆ ಮೊಳಕಾಲ್ಮೂರು Gravity main ಗೆ ಸಂಬಂಧಿಸಿದ್ದು, ಇದರಡಿ ಚಳ್ಳಕೆರೆ ತಾಲ್ಲೂಕಿನ 39 ಕೆರೆಗಳು ಹಾಗೂ ಮೊಳಕಾಲ್ಮೂರು ತಾಲ್ಲೂಕಿನ 20 ಕೆರೆಗಳಿಗೆ ನೀರನ್ನು Gravity pipe ಮುಖಾಂತರ ತುಂಬಿಸಲು ಉದ್ದೇಶಿಸಲಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

18.2 ಈ ಕಾಮಗಾರಿಗೆ ಭಾಗವಹಿಸಿದ ಇಬ್ಬರು ಬಿಡ್‌ದಾರರಲ್ಲಿ ಕನಿಷ್ಠ ಬಿಡ್‌ದಾರರಾದ M/s Ocean Constructions India Pvt Ltd-G Shankar (JV) ಗುತ್ತಿಗೆದಾರರು ರೂ. 542,77,74,483.09/– ಬಿಡ್ ಸಲ್ಲಿಸಿದ್ದು ಇದು ಟೆಂಡರ್‌ಗಿಟ್ಟ ಮೊತ್ತ ರೂ.441,28,24,783.00/– ಗಳ ಮೇಲೆ ಶೇ.23.00 ರಷ್ಟು ಹೆಚ್ಚು ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

18.3 ಪ್ರಸ್ತಾಪಿಸಿದ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತದ ಅಂದಾಜು ಪಟ್ಟಿಯನ್ನು ಜ.ಸಂ. ಇಲಾಖೆಯ ಚಾಲ್ತಿ ದರಪಟ್ಟಿ ಹಾಗೂ ಚಾಲ್ತಿ ತ್ರೈಮಾಸಿಕದ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ನು ಮತ್ತು ಕೆ.ಯು.ಡಬ್ಲ್ಯೂ. ಎಸ್.ಎಸ್.ಬಿಯ 2018–19ನೇ ಸಾಲಿನ ದರಪಟ್ಟಿಗಳಿಗನುಗುಣವಾಗಿ ತಯಾರಿಸಿ ಮಂಜೂರಾತಿ ಪಡೆದಿರುವುದರಿಂದ ಕೆ.ಟಿ.ಪಿ.ಪಿ. ನಿಯಮಾವಳಿಯನ್ವಯ ಟೆಂಡರಿಗಿಟ್ಟ ಮೊತ್ತವನ್ನು ಪರಿಷ್ಕರಿಸುವ ಅಗತ್ಯತೆ ಇಲ್ಲವೆಂದು ಮುಖ್ಯ ಇಂಜಿನಿಯರ್ ರವರು ವರದಿ ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

18.4 ಪ್ರಸ್ತಾಪಿತ ಕಾಮಗಾರಿಯನ್ನು ಶೇಕಡಾವಾರು ಟೆಂಡರ್ ಆಧಾರದ ಮೇಲೆ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿ ಅಡಿ 2000 ಮಿ.ಮಿ –350 ಮಿ.ಮಿ ಗಳ ಎಂ.ಎಸ್.ಪೈಪ್, ಡಿ.ಐ ಪೈಪ್ ಮತ್ತು ಹೆಚ್.ಡಿ.ಪಿ.ಇ ಪೈಪ್‌ಗಳನ್ನು ಅಳವಡಿಸುವ ಕಾಮಗಾರಿಗಳಿರುತ್ತವೆಂದು ಮಂಡಳಿಯ ಗಮನಕ್ಕೆ ತಂದರು.

18.5 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

***ನಿರ್ಣಯ:** ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್‌ಗಿಟ್ಟ ಮೊತ್ತ ರೂ.441,28,24,783/–ಗಳ ಮೇಲೆ ಶೇ.9.00 ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ*

ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು M/s Ocean Constructions India Pvt Ltd-G Shankar (JV) ಅವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.

ವಿಷಯ ಸಂ. 19: **"Construction of Ranikere Gravity Main piped distribution network from Chitradurga Branch Canal Under Upper Bhadra Project including Operation and Maintenance for 5 years after successful completion of the work"** ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನ ವರದಿ ಕುರಿತು.

ಭದ್ರಾ ಮೇಲ್ದಂಡೆ ಯೋಜನೆಯ ಚಿತ್ರದುರ್ಗ ಶಾಖಾ ಕಾಲುವೆಯ ಸರಪಳಿ 120.820 ಕಿ.ಮೀ, ಸರಪಳಿ 127.700 ಕಿ.ಮೀ ಹಾಗೂ ಸರಪಳಿ 134.45 ಕಿ.ಮೀ ಗಳಲ್ಲಿ ಕವಲೊಡೆಯುವ ಚಳ್ಳಕೆರೆ ಮೊಳಕಾಲ್ಮೂರು, ರಾಣಿಕೆರೆ ಮತ್ತು ಸಾಣಿಕೆರೆ–ಬೆಳಗೆರೆ Gravity main ಗಳಿಂದ 1.86 ಟಿ.ಎಂ.ಸಿ ನೀರಿನ ಬಳಕೆಯೊಂದಿಗೆ ಚಳ್ಳಕೆರೆ ತಾಲ್ಲೂಕಿನ 58 ಕೆರೆಗಳು ಹಾಗೂ ಮೊಳಕಾಲ್ಮೂರು ತಾಲ್ಲೂಕಿನ 20 ಕೆರೆಗಳಿಗೆ ನೀರನ್ನು Gravity pipe ಮುಖಾಂತರ ತುಂಬಿಸಲು ಯೋಜಿಸಲಾಗಿದ್ದು, ಪ್ರಸ್ತಾಪಿತ ಕಾಮಗಾರಿಯ ಟೆಂಡರ್ ರಾಣಿಕೆರೆ Gravity main ಗೆ ಸಂಬಂಧಿಸಿದ್ದು, ಇದರಡಿ ಚಳ್ಳಕೆರೆ ತಾಲ್ಲೂಕಿನ 11 ಕೆರೆಗಳಿಗೆ Gravity pipe ಮುಖಾಂತರ ನೀರನ್ನು ತುಂಬಿಸಲು ಉದ್ದೇಶಿಸಲಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

19.2 ಈ ಕಾಮಗಾರಿಗೆ ಭಾಗವಹಿಸಿದ ಇಬ್ಬರು ಬಿಡ್‌ದಾರರಲ್ಲಿ ಕನಿಷ್ಠ ಬಿಡ್‌ದಾರರಾದ M/s Suprada Construction Pvt Ltd ಗುತ್ತಿಗೆದಾರರು ರೂ. 101,83,17,185.65/–ಬಿಡ್ ಸಲ್ಲಿಸಿದ್ದು ಇದು ಟೆಂಡರ್‌ಗಿಟ್ಟ ಮೊತ್ತ ರೂ. 88,64,18,163.00/– ಗಳ ಮೇಲೆ ಶೇ.14.88 ರಷ್ಟು ಹೆಚ್ಚು ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

19.3 ಪ್ರಸ್ತಾಪಿಸಿದ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತದ ಅಂದಾಜು ಪಟ್ಟಿಯನ್ನು ಜ.ಸಂ. ಇಲಾಖೆಯ ಚಾಲ್ತಿ ಹಾಗೂ ಚಾಲ್ತಿ ತ್ರೈಮಾಸಿಕದ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ನು ಮತ್ತು ಕೆ.ಯು.ಡಬ್ಲ್ಯೂ.ಎಸ್.ಎಸ್.ಬಿಯ 2018–19ನೇ ಸಾಲಿನ ದರಪಟ್ಟಿಗಳಗನುಗುಣವಾಗಿ ತಯಾರಿಸಿ ಮಂಜೂರಾತಿ ಪಡೆದಿರುವುದರಿಂದ ಕೆ.ಟಿ.ಪಿ.ಪಿ. ನಿಯಮಾವಳಿಯನ್ವಯ ಟೆಂಡರಿಗಿಟ್ಟ ಮೊತ್ತವನ್ನು ಪರಿಷ್ಕರಿಸುವ ಅಗತ್ಯತೆ ಇಲ್ಲವೆಂದು ಮುಖ್ಯ ಇಂಜಿನಿಯರ್ ರವರು ವರದಿ ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

19.4 ಪ್ರಸ್ತಾಪಿತ ಕಾಮಗಾರಿಯನ್ನು ಶೇಕಡಾವಾರು ಟೆಂಡರ್ ಆಧಾರದ ಮೇಲೆ ಆಹ್ವಾನಿಸಲಾಗಿದ್ದು ಸದರಿ ಕಾಮಗಾರಿ ಅಡಿ 1400 ಮಿ.ಮಿ –350 ಮಿ.ಮಿ ಗಳ ಎಂ.ಎಸ್.ಪೈಪ್, ಡಿ.ಐ ಪೈಪ್ ಮತ್ತು ಹೆಚ್.ಡಿ.ಪಿ.ಇ ಪೈಪ್ ಗಳನ್ನು ಅಳವಡಿಸುವ ಕಾಮಗಾರಿಗಳಿರುತ್ತವೆಂದು ಮಂಡಳಿಯ ಗಮನಕ್ಕೆ ತಂದರು.

19.5 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

*ನಿರ್ಣಯ: ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್‌ಗಿಟ್ಟ ಮೊತ್ತ ರೂ. **88,64,18,163.00/-**ಗಳ ಮೇಲೆ ಶೇ.9.00 ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು* **M/s Suprada Construction Pvt Ltd** *ಇವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.*

ವಿಷಯ ಸಂ. 20: **"Construction of Sanikere – Belagere Gravity Main piped distribution network from Chitradurga Branch Canal Under Upper Bhadra Project including Operation and Maintenance for 5 years after successful completion of the work** ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನ ವರದಿ ಕುರಿತು.

ಭದ್ರಾ ಮೇಲ್ದಂಡೆ ಯೋಜನೆಯ ಚಿತ್ರದುರ್ಗ ಶಾಖಾ ಕಾಲುವೆಯ ಸರಪಳಿ 120.820 ಕಿ.ಮೀ, ಸರಪಳಿ 127.700 ಕಿ.ಮೀ ಹಾಗೂ ಸರಪಳಿ 134.45 ಕಿ.ಮೀ ಗಳಲ್ಲಿ ಕವಲೊಡೆಯುವ ಚಳ್ಳಕೆರೆ ಮೊಳಕಾಲ್ಮೂರು, ರಾಣಿಕೆರೆ ಮತ್ತು ಸಾಣಿಕೆರೆ–ಬೆಳೆಗೆರೆ Gravity main ಗಳಿಂದ 1.86 ಟಿ.ಎಂ.ಸಿ ನೀರಿನ ಬಳಕೆಯೊಂದಿಗೆ ಚಳ್ಳಕೆರೆ ತಾಲ್ಲೂಕಿನ 58 ಕೆರೆಗಳು ಹಾಗೂ ಮೊಳಕಾಲ್ಮೂರು ತಾಲ್ಲೂಕಿನ 20 ಕೆರೆಗಳಿಗೆ ನೀರನ್ನು Gravity pipe ಮುಖಾಂತರ ತುಂಬಿಸಲು ಯೋಜಿಸಲಾಗಿದ್ದು ಪ್ರಸ್ತಾಪಿತ ಕಾಮಗಾರಿಯ ಟೆಂಡರ್ ಸಾಣಿಕೆರೆ–ಬೆಳೆಗೆರೆ Gravity main ಗೆ ಸಂಬಂಧಿಸಿದ್ದು, ಇದರಡಿ ಚಳ್ಳಕೆರೆ ತಾಲ್ಲೂಕಿನ 8 ಕೆರೆಗಳಿಗೆ Gravity pipe ಮುಖಾಂತರ ನೀರನ್ನು ತುಂಬಿಸಲು ಉದ್ದೇಶಿಸಲಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

20.2 ಈ ಕಾಮಗಾರಿಗೆ ಭಾಗವಹಿಸಿದ ಇಬ್ಬರು ಬಿಡ್‌ದಾರರಲ್ಲಿ ಕನಿಷ್ಠ ಬಿಡ್‌ದಾರರಾದ M/s Groma Infrastructure Ltd ಗುತ್ತಿಗೆದಾರರು ರೂ. 54,08,65,044.15/- ಬಿಡ್ ಸಲ್ಲಿಸಿದ್ದು ಇದು ಟೆಂಡರ್‌ಗಿಟ್ಟ ಮೊತ್ತ ರೂ.48,29,15,218.00/- ಗಳ ಮೇಲೆ ಶೇ.12ರಷ್ಟು ಹೆಚ್ಚು ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

20.3 ಪ್ರಸ್ತಾಪಿಸಿದ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತದ ಅಂದಾಜು ಪಟ್ಟಿಯನ್ನು ಜ.ಸಂ.ಇಲಾಖೆಯ ಚಾಲ್ತಿ ದರಪಟ್ಟಿ ಹಾಗೂ ಚಾಲ್ತಿ ತ್ರೈಮಾಸಿಕದ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ನು ಮತ್ತು ಕೆ.ಯು.ಡಬ್ಲ್ಯೂ ಎಸ್.ಎಸ್.ಬಿಯ 2018–19ನೇ ಸಾಲಿನ ದರಪಟ್ಟಿಗಳಗನುಗುಣವಾಗಿ ತಯಾರಿಸಿ ಮಂಜೂರಾತಿ ಪಡೆದಿರುವುದರಿಂದ ಕೆ.ಟಿ.ಪಿ.ಪಿ. ನಿಯಮಾವಳಿಯನ್ವಯ ಟೆಂಡರಿಗಿಟ್ಟ ಮೊತ್ತವನ್ನು ಪರಿಷ್ಕರಿಸುವ ಅಗತ್ಯತೆ ಇಲ್ಲವೆಂದು ಮುಖ್ಯ ಇಂಜಿನಿಯರ್ ರವರು ವರದಿ ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

20.4 ಪ್ರಸ್ತಾಪಿತ ಕಾಮಗಾರಿಯನ್ನು ಶೇಕಡಾವಾರು ಟೆಂಡರ್ ಆಧಾರದ ಮೇಲೆ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿ ಅಡಿ 1400 ಮಿ.ಮಿ –350 ಮಿ.ಮಿ ಗಳ ಎಂ.ಎಸ್.ಪೈಪ್, ಡಿ.ಐ ಪೈಪ್ ಮತ್ತು ಹೆಚ್.ಡಿ.ಪಿ.ಇ ಪೈಪ್ ಗಳನ್ನು ಅಳವಡಿಸುವ ಕಾಮಗಾರಿಗಳಿರುತ್ತವೆಂದು ಮಂಡಳಿಯ ಗಮನಕ್ಕೆ ತಂದರು.

20.5 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

ನಿರ್ಣಯ: ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್‌ಗಿಟ್ಟ ಮೊತ್ತ ರೂ. 48,29,15,218.00/-ಗಳ ಮೇಲೆ ಶೇ.9.00ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು M/s Groma Infrastructure Ltd ಇವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು

ವಿಷಯ ಸಂ. 21: **"Survey, Investigation, Design, Supply, Installation Testing and Commissioning of Lift System (Head Works consisting of construction of Intake canal, Jack well cum pump house, Power supply including terminal bays, substation, 33 KV transmission lines) Rising Main with Pressure distribution system, Construction of Gravity Distribution System in Pavagada Taluk (Filling of Tanks 38 Nos) and Challakere Taluk (Filling of Tanks 21 No's) Under Upper Bhadra Project including Operation and Maintenance for a period of 5 years after successful completion of work."** ಕಾಮಗಾರಿಯ ಆರ್ಥಿಕ ಬಿಡ್ ಮೌಲ್ಯಮಾಪನ ವರದಿ ಕುರಿತು.

ಭದ್ರಾ ಮೇಲ್ದಂಡೆ ಯೋಜನೆಯ ಎರಡನೇ ಹಂತದಲ್ಲಿ ಬರುವ ಚಿತ್ರದುರ್ಗ ಶಾಖಾ ಕಾಲುವೆ ಮುಖಾಂತರ ಚಿಕ್ಕಮಗಳೂರು ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಹನಿ ನೀರಾವರಿ ಮೂಲಕ 1,07,265 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸಿ 37 ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿಗಳನ್ನು 12 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿದ್ದು ಪ್ರಸ್ತಾಪಿತ ಪಾವಗಡ ಕೆರೆ ತುಂಬಿಸುವ ಯೋಜನೆಯಡಿ ಚಿತ್ರದುರ್ಗ ಶಾಖಾ ಕಾಲುವೆಯ ಕೊನೆಯ ಸರಪಳಿಯಿಂದ 0.85 ಟಿ.ಎಂ.ಸಿ ನೀರಿನ ಬಳಕೆಯೊಂದಿಗೆ ಪಾವಗಡ ತಲ್ಲೂಕಿನ 38 ಕೆರೆಗಳನ್ನು ಮತ್ತು ಚಳ್ಳಕೆರೆ ತಾಲ್ಲೂಕಿನ 21 ಕೆರೆಗಳಿಗೆ Gravity pipe ಮುಖಾಂತರ ನೀರನ್ನು ತುಂಬಿಸಲು ಯೋಜಿಸಲಾಗಿರುವ ಕಾಮಗಾರಿಯಾಗಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

21.2 ಈ ಕಾಮಗಾರಿಗೆ ಭಾಗವಹಿಸಿದ ಮೂವರು ಬಿಡ್‌ದಾರರಲ್ಲಿ ಪೂರ್ವಾರ್ಹತೆ ಷರತ್ತುಗಳನ್ನು ಪೂರೈಸಿದ್ದ ಏಕೈಕ ಬಿಡ್‌ದಾರ M/s GVPR Engineers Limited ಗುತ್ತಿಗೆದಾರರು ರೂ.627,49,13,462.49 ಬಿಡ್ ಸಲ್ಲಿಸಿದ್ದು ಇದು ಟೆಂಡರ್‌ಗಿಟ್ಟ ಮೊತ್ತ ರೂ.527,74,71,373.00/- ಗಳ ಮೇಲೆ ಶೇ.18.90 ರಷ್ಟು ಹೆಚ್ಚು ಇರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

21.3 ಪ್ರಸ್ತಾಪಿಸಿದ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತದ ಅಂದಾಜು ಪಟ್ಟಿಯನ್ನು ಜ.ಸಂ.ಇಲಾಖೆಯ ಚಾಲ್ತಿ ದರಪಟ್ಟಿ ಹಾಗೂ ಚಾಲ್ತಿ ತ್ರೈಮಾಸಿಕದ ಸಿಮೆಂಟ್ ಮತ್ತು ಸ್ಟೀಲ್ ದರಗಳನ್ನು ಮತ್ತು ಕೆ.ಯು.ಡಬ್ಲ್ಯೂ ಎಸ್.ಎಸ್.ಬಿಯ 2018-19ನೇ ಸಾಲಿನ ದರಪಟ್ಟಿಗಳಗನುಗುಣವಾಗಿ ತಯಾರಿಸಿ ಮಂಜೂರಾತಿ ಪಡೆದಿರುವುದರಿಂದ ಕೆ.ಟಿ.ಪಿ.ಪಿ. ನಿಯಮಾವಳಿಯನ್ವಯ ಟೆಂಡರಿಗಿಟ್ಟ ಮೊತ್ತವನ್ನು ಪರಿಷ್ಕರಿಸುವ ಅಗತ್ಯತೆ ಇಲ್ಲವೆಂದು ಮುಖ್ಯ ಇಂಜಿನಿಯರ್ ರವರು ವರದಿ ಮಾಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

21.4 ಪ್ರಸ್ತಾಪಿತ ಕಾಮಗಾರಿಯನ್ನು ಶೇಕಡಾವಾರು ಟೆಂಡರ್ ಆಧಾರದ ಮೇಲೆ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿ ಅಡಿ ಚಿತ್ರದುರ್ಗ ಶಾಖಾ ಕಾಲುವೆಯಿಂದ ನೀರನ್ನು ಎತ್ತಿ ಪಾವಗಡ ತಾಲ್ಲೂಕಿನ 38

ಕೆರೆಗಳನ್ನು ಮತ್ತು ಚಳ್ಳಕೆರೆ ತಾಲ್ಲೂಕಿನ 21 ಕೆರೆಗಳಿಗೆ Gravity pipe ಮುಖಾಂತರ ನೀರನ್ನು ತುಂಬಿಸಲು ಯೋಜಿಸಲಾಗಿದ್ದು, ಕಾಮಗಾರಿಯು ಏತ ಕಾಮಗಾರಿಗಳು, ಪೈಪ್ ಲೈನ್ ಅಳವಡಿಸುವ ಕಾಮಗಾರಿಗಳು ಹಾಗೂ ಎಲೆಕ್ಟ್ರೋ ಮೆಕಾನಿಕಲ್ ಕಾಮಗಾರಿಗಳನ್ನು ಒಳಗೊಂಡಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

21.5 ಚರ್ಚೆಯ ಸಂದರ್ಭದಲ್ಲಿ ಮಂಡಳಿಯು ಈ ಕೆಳಕಂಡ ಅಂಶಗಳನ್ನು ಗಮನಿಸಿತು:

1. ಸದರಿ ಕಾಮಗಾರಿಯು ಸುರಕ್ಷಿತ ಕುಡಿಯುವ ನೀರಿನ ಅಭಾವ ಎದುರಿಸುತ್ತಿರುವ ಹಿಂದುಳಿದ ಬರಗಾಲ ಪೀಡಿತ ತುಮಕೂರು ಜಿಲ್ಲೆಯ ಪಾವಗಡ ಮತ್ತು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕುಗಳಲ್ಲಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಾಗಿದ್ದು, ತನ್ಮೂಲಕ ಅಂತರ್ಜಲ ಮರುಪೂರಣಗೊಂಡು ಈ ಯೋಜನೆಯ ಫಲಾನುಭವಿ ಜನಗಳು ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಈ ಕಾಮಗಾರಿಯ ತೀವ್ರ ಅನುಷ್ಠಾನದಿಂದ ಸಹಕಾರಿಯಾಗುವ ಅಂಶವನ್ನು ಮಂಡಳಿಯು ಅವಗಾಹಿಸಿತು.
2. ಪ್ರಸ್ತುತ ಭದ್ರಾ ಮೇಲ್ದಂಡೆ ಯೋಜನೆಯ ಪ್ರಥಮ ಹಂತದಲ್ಲಿನ ಏತ ಕಾಮಗಾರಿ ಮತ್ತು ಸುರಂಗ ನಿರ್ಮಾಣ ಕಾಮಗಾರಿ ಪೂರ್ಣಗೊಂಡು ಪರೀಕ್ಷಾರ್ಥ ನೀರನ್ನೆತ್ತುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಚಿತ್ರದುರ್ಗ ಶಾಖಾ ಕಾಲುವೆಯ ಪೂರ್ಣ ಉದ್ದದ ಕಾಮಗಾರಿ ಅನುಷ್ಠಾನಗೊಳ್ಳುತ್ತಿದ್ದು ಇದರಡಿಯ ಪಾವಗಡ ಮತ್ತು ಚಳ್ಳಕೆರೆ ತಾಲ್ಲೂಕುಗಳ ಕೆರೆಗಳನ್ನು ತುಂಬಿಸುವ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳುವ ಅವಶ್ಯಕತೆಯನ್ನು ಮಂಡಳಿಯು ಅವಲೋಕಿಸಿತು.
3. ಸದರಿ ಕಾಮಗಾರಿಗೆ ಮೂರು ಜನ ಗುತ್ತಿಗೆದಾರರು ಬಿಡ್ ಸಲ್ಲಿಸಿದ್ದು, ಒಬ್ಬರೇ ಗುತ್ತಿಗೆದಾರರು ಪೂರ್ವಾರ್ಹತಾ ಷರತ್ತುಗಳನ್ನು ಪಾಲಿಸಿ ಅರ್ಹವಾಗಿದ್ದರಿಂದ ಅವರ ಆರ್ಥಿಕ ಬಿಡ್‌ನ್ನು ತೆರೆಯಲಾಗಿದ್ದು ಗುತ್ತಿಗೆದಾರರು ಪ್ರತಿಶತ 18.90 ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂ ನಮೂದಿಸಿರುತ್ತಾರೆ. ಒಂದು ವೇಳೆ ಗುತ್ತಿಗೆದಾರರು ಸಿಂಗಲ್ ಟೆಂಡರ್ ಕಾಮಗಾರಿಗೆ ನೀಡುವ ಪ್ರತಿಶತ 5.00 ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂಗೆ ಒಪ್ಪದಿದ್ದಲ್ಲಿ ಟೆಂಡರ್ ಪುನರ್ ಆಹ್ವಾನಿಸುವ ಅನಿವಾರ್ಯತೆ ಉಂಟಾಗಿ ಕಾಲ ವ್ಯಯ ಮತ್ತು ಅಂದಾಜು ಮೊತ್ತದಲ್ಲಿ ಹೆಚ್ಚಳ ಆಗುವ ಸಂಭವನೀಯತೆಯ ಅಂಶವನ್ನೂ ಸಹ ಮಂಡಳಿಯು ಅವಗಾಹಿಸಿತು.

21.6 ಮೇಲಿನ ವಿವರಗಳನ್ನು ಹಾಗೂ ವಿಷಯ ಸೂಚಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಪರಿಗಣಿಸಿ ಸದರಿ ಕಾಮಗಾರಿಯ ಟೆಂಡರ್ ಕುರಿತು ಮಂಡಳಿಯು ಈ ಕೆಳಕಂಡಂತೆ ನಿರ್ಣಯಿಸಿತು.

ನಿರ್ಣಯ: ಟೆಂಡರ್ ಪರಿಶೀಲನಾ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್‌ಗಿಟ್ಟ ಮೊತ್ತ ರೂ. 527,74,71,373.00/-ಗಳ ಮೇಲೆ ಶೇ.7 ರಷ್ಟು ಹೆಚ್ಚಿನ ಟೆಂಡರ್ ಪ್ರೀಮಿಯಂನೊಂದಿಗೆ ಅಗತ್ಯ ಜಿ.ಎಸ್.ಟಿ. ಅಳವಡಿಸಿ ಬರುವ ಮೊತ್ತಕ್ಕೆ ಕಾಮಗಾರಿಯನ್ನು M/s GVPR Engineers Limited ಇವರಿಗೆ ವಹಿಸಲು ಮಂಡಳಿಯು ನಿರ್ಣಯಿಸಿತು.

ವಿಷಯ ಸಂ. 22: ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ತಿಪಟೂರು ತಾಲ್ಲೂಕುಗಳಿಗೆ ಹೆಚ್ಚುವರಿ ನೀರನ್ನು ಒದಗಿಸಲು ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಉಳಿತಾಯವಾಗಬಹುದಾದ ನೀರಿನ ಪ್ರಮಾಣ ಕುರಿತು.

ಎತ್ತಿನಹೊಳೆ ಯೋಜನೆಯಡಿಯಲ್ಲಿ ಬಳಸಿಕೊಳ್ಳಲು ಉದ್ದೇಶಿಸಿರುವ ವಾರ್ಷಿಕ ನೀರಿನ ಪ್ರಮಾಣ 24.01 ಟಿ.ಎಂ.ಸಿ.ಯಾಗಿದ್ದು ಇದರಲ್ಲಿ 7 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಕೆಲವು ಭಾಗಗಳಿಗೆ ಒಟ್ಟಾರೆ 15.029 ಟಿ.ಎಂ.ಸಿ ಕುಡಿಯುವ ನೀರನ್ನು ಒದಗಿಸುವುದು ಹಾಗೂ 5 ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು ಮತ್ತು ಹಾಸನ ಇವುಗಳಲ್ಲಿ ಒಟ್ಟು 527 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ.50 ರಷ್ಟು ನೀರು ತುಂಬಿಸಿ ಅವುಗಳ ಅಂತರ್ಜಲ ಅಭಿವೃದ್ಧಿಗೊಳಿಸಲು ಒಟ್ಟು 8.967 ಟಿ.ಎಂ.ಸಿ ನೀರನ್ನು ಒದಗಿಸಲು ಯೋಜಿಸಲಾಗಿರುತ್ತದೆಂದು ತಿಳಿಸುತ್ತಾ, ಆದರೆ ತುಮಕೂರು ಜಿಲ್ಲೆಯಲ್ಲಿರುವ ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ತಿಪಟೂರು ತಾಲ್ಲೂಕುಗಳಿಗೆ ಕೆರೆಗಳನ್ನು ತುಂಬಿಸಲು ನೀರನ್ನು ಹಂಚಿಕೆ ಮಾಡಿರುವುದಿಲ್ಲವಾಗಿ ಈ ಪ್ರದೇಶದಲ್ಲೂ ಅಂತರ್ಜಲ ಮಟ್ಟ ಕುಸಿದಿರುವುದೆಂದು ಜನರು ಕೆರೆಗಳಿಗೆ ನೀರೊದಗಿಸಿಕೊಡಲು ಒತ್ತಾಯಿಸಿ ಮನವಿ ಮಾಡಿದ್ದು ಶ್ರೀ ಮಾಧುಸ್ವಾಮಿ ಸನ್ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಹಾಗೂ ಸಣ್ಣ ನೀರಾವರಿ ಸಚಿವರು ಕೂಡಾ ಈ ಪ್ರದೇಶದ ಕೆರೆಗಳನ್ನು ತುಂಬಿಸಲು ಕೋರಿರುತ್ತಾರೆಂದು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಗೆ ತಿಳಿಸಿದರು.

22.2 ಮುಂದುವರೆಯುತ್ತಾ, ಸರ್ಕಾರವು ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಒಟ್ಟಾರೆಯಾಗಿ ಉಳಿತಾಯವಾಗಬಹುದಾದ ನೀರಿನ ಪ್ರಮಾಣವನ್ನು ಅಧ್ಯಯನಮಾಡಿ ಈ ರೀತಿ ಲಭ್ಯವಾಗುವ ನೀರನ್ನು ವಿವಿಧ ಮನವಿಗಳಲ್ಲಿ ಪ್ರಸ್ತಾಪಿಸಿರುವ ಯೋಜನೆಗಳಿಗೆ ಪರಿಶೀಲಿಸಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿ ಈ ಕುರಿತು ಅಧ್ಯಯಿಸಿ ಉಳಿತಾಯವಾಗಬಹುದಾದ ನೀರಿನ ಸದುಪಯೋಗದ ಬಳಕೆಗೆ ಕಾರ್ಯತಂತ್ರ ಹಾಗೂ ಕ್ರಿಯಾ ಯೋಜನೆ ರೂಪಿಸಿ ಸೂಕ್ತ ಶಿಫಾರಸ್ಸನ್ನೊಳಗೊಂಡ ವರದಿ ನೀಡುವ ಸಲುವಾಗಿ ಈ ಕೆಳಕಂಡ ಅಧಿಕಾರಿ/ ಅಧಿಕಾರೇತರ ಸದಸ್ಯರನ್ನೊಳಗೊಂಡ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ:ಜಸಂಇ 20 VBYE 2019 ದಿನಾಂಕ:28.10.2019ರಲ್ಲಿ ರಚಿಸಿರುವುದನ್ನು ವ್ಯವಸ್ಥಾಪಕ ನಿರ್ದೇಶಕರು ಮಂಡಳಿಯ ಗಮನಕ್ಕೆ ತಂದರು.

1. ಶ್ರೀ ಡಿ.ಎನ್.ದೇಸಾಯಿ ನಿವೃತ್ತ, ಕಾರ್ಯದರ್ಶಿಗಳು ಪ್ರಧಾನ ಸಲಹೆಗಾರರು, ಜಲ ಸಂಪನ್ಮೂಲ ಇಲಾಖೆ : ಅಧ್ಯಕ್ಷರು.
2. ಶ್ರೀ. ಆರ್.ಚಲುವರಾಜ್ ನಿವೃತ್ತ ಮುಖ್ಯ ಇಂಜನೀಯರ್, : ಸದಸ್ಯರು.
3. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, : ಸದಸ್ಯರು.
4. ವ್ಯವಸ್ಥಾಪಕ ನಿರ್ದೇಶಕರು, ವಿ.ಜ.ನಿ.ನಿ. : ಸದಸ್ಯ ಕಾರ್ಯದರ್ಶಿ

22.3 ಚರ್ಚೆಯ ನಂತರ ಸದರಿ ಸಮಿತಿಯ ಶಿಫಾರಸ್ಸಿನನ್ವಯ ಎತ್ತಿನಹೊಳೆ ಯೋಜನೆಯಡಿಯಲ್ಲಿ ಉಳಿತಾಯವಾಗಬಹುದಾದ ನೀರಿನ ಪ್ರಮಾಣವನ್ನು ಮರು ಹಂಚಿಕೆ ಮಾಡಿ ತುಮಕೂರು ಜಿಲ್ಲೆಯಲ್ಲಿರುವ ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ತಿಪಟೂರು ತಾಲ್ಲೂಕುಗಳ ಕೆರೆಗಳಿಗೆ ಅವುಗಳ

ಸಾಮರ್ಥ್ಯದ ಶೇ.50 ನೀರು ತುಂಬಿಸಿ ಅಂತರ್ಜಲ ಅಭಿವೃದ್ಧಿಗೆ ನೀರೊದಗಿಸಲು ಪರಿಗಣಿಸಬಹುದೆಂದು ಮಂಡಳಿಯು ಅಭಿಪ್ರಾಯಿಸಿತು.

ವಿಷಯ ಸಂ. 23: ಎತ್ತಿನಹೊಳೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳ ಪರಿಷ್ಕೃತ ಅಂದಾಜು.

ಯೋಜನೆಗಳ ಅನುಷ್ಠಾನದಲ್ಲಿನ ವಿಳಂಬ, ಹೊಸ ಭೂಸ್ವಾಧೀನ ಕಾಯ್ದೆಯಿಂದಾಗಿ ಉಂಟಾಗಿರುವ ಹೆಚ್ಚುವರಿ ಭೂಸ್ವಾಧೀನ ವೆಚ್ಚ, ಕಾರ್ಯವ್ಯಾಪ್ತಿ/ ಸ್ವರೂಪ ಬದಲಾವಣೆ ಮತ್ತು ಇತರೆ ಕಾರಣಗಳಿಂದಾಗಿ ಈ ಯೋಜನೆಗಳ ಮೊತ್ತವು ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿರುವ ವೆಚ್ಚ ಮೀರಿ ಈಗಾಗಲೇ ಸಾಕಷ್ಟು ಹೆಚ್ಚಾಗಿರುವುದರಿಂದ ಸರ್ಕಾರದ ಆರ್ಥಿಕ ಬದ್ಧತೆ ತತ್ಸಂಬಂಧವಾಗಿ ಹೆಚ್ಚಾಗಿದ್ದು, ಮುಂದಿನ ವರ್ಷಗಳಲ್ಲಿ ಈ ಯೋಜನೆಗಳಿಗೆ ಅನುದಾನ ಒದಗಿಸುವ ಸಾಧ್ಯತೆಯ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ನಿಗಮವು ಸದರಿ ಯೋಜನೆಗಳ ಪರಿಷ್ಕೃತ ಅಂದಾಜನ್ನು ತಯಾರಿಸಿ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುವ ಅಗತ್ಯತೆಯನ್ನು ನಿರ್ದೇಶಕರು ಹಾಗೂ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ರವರು ಬಲವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು, ಯೋಜನೆಗಳ ಪರಿಷ್ಕೃತ ಅಂದಾಜಿಗೆ ಸಚಿವ ಸಂಪುಟದ ಅನುಮೋದನೆ ಪಡೆಯಲು ಕೂಡಲೇ ಸೂಕ್ತ ಕ್ರಮ ಜರುಗಿಸಲು ಅಧ್ಯಕ್ಷರು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದರು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/-
(ಎನ್.ಲಕ್ಷ್ಮಣರಾವ್ ಪೇಶ್ವೆ)
ವ್ಯವಸ್ಥಾಪಕ ನಿರ್ದೇಶಕರು

ಸಹಿ/
(ಬಿ.ಎಸ್.ಯಡಿಯೂರಪ್ಪ)
ಸಭೆಯ ಅಧ್ಯಕ್ಷರು

Certified True Copy

Company Secretary
Visvesvaraya Jala Nigam Ltd.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127ಗೆ ಅನುಬಂಧ–3

ಅ) ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಲ್ಲಿ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ಅನುಮೋದನೆಗೊಂಡಿರುವ ಟೆಂಡರ್‌ಗಳು ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್ ಅನುಮೋದನೆ ನೀಡಿರುವ ದಿನಾಂಕ	ಟೆಂಡರ್ ಗಿಟ್ಟ ಮೊತ್ತ (ರೂ ಕೋಟಿಗಳಲ್ಲಿ)
1	Providing Protective works to the project affected area & providing additional facility by improving Infrastructure under Satkoli and Doddinatale hamlets of Kusuburu village in N.R.PuraTaluk under the Jurisdiction of UBP Package-I	06.03.2020	4.99
2	Consultancy services for detailed reconnaissance survey, investigation and preparation of necessary drawings, detailed estimates, project report and DTP for restoration of tanks proposed for filling under Yettinahole integrated drinking water project.	22.01.2020	4.91
3	Consultancy services for survey, investigation, preparation of design, drawings, estimates, preparation of detailed project report, preparation of techno-economical alignment proposals, designs of pump house, raising main, delivery chambers and distribution networks, package estimate, DTP and land acquisition proposals for Kadur tank filling scheme for the work of filling up of 167 Nos of tanks including Madaga, Ayyanakere and Belavadi tank in Tarikere, Kadur, Chikmagalurtaluks in chikmagalur district and Arasikeretaluk of Hassan district by lifting water from Bhadra river from d/s of Bhadra dam (INDENT 1338)	13.02.2020	3.48

ಆ) ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಕಛೇರಿಯಲ್ಲಿ ದಿನಾಂಕ:05.08.2019ರಿಂದ ಇಲ್ಲಿಯವರೆಗೆ ಅನುಮೋದನೆಗೊಂಡಿರುವ ಹೆಚ್ಚುವರಿ ಆರ್ಥಿಕ ಹೊರೆ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿದೆ.

ಕಾಮಗಾರಿ ಹೆಸರು	:	Construction of Check dam cum bridge across Veda halla (Barahalla) near Chikkanayakanahalli village (connecting Yagatti to Yallambalse) of Kadurtaluk, Chikkamagalurdist
ಟೆಂಡರ್‌ಗಿಟ್ಟ ಮೊತ್ತ	:	ರೂ. 5.99 ಕೋಟಿಗಳು
ಗುತ್ತಿಗೆ ಮೊತ್ತ	:	ರೂ. 5.07 ಕೋಟಿಗಳು (ಟೆಂಡರ್ ಗಿಟ್ಟ ಮೊತ್ತಕ್ಕೆ ಶೇ 15.30% ರಷ್ಟು ಕಡಿಮೆ)
ಹೆಚ್ಚುವರಿಆರ್ಥಿಕ ಮೊತ್ತ	:	ರೂ. 90,84,548.13
ಗುತ್ತಿಗೆ ಮೊತ್ತದ ಮೇಲೆ ಹೆಚ್ಚುವರಿ ಶೇಕಡಾ	:	17.89%
ಕಾಮಗಾರಿ ಹಂತ	:	ಪ್ರಗತಿಯಲ್ಲಿದೆ.

*****

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1127ಗೆ ಅನುಬಂಧ-4

ವಿಶ್ವೇಶ್ವರಯ್ಯ ಜಲ ನಿಗಮದ ವತಿಯಿಂದ ದಿನಾಂಕ:05.08.2019 ರಿಂದ ಇಲ್ಲಿಯವರೆಗೆ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾದ ವಿಭಾಗವಾರು ವಿವರ ಈ ಕೆಳಕಂಡಂತಿದೆ.

ಕ್ರಸಂ	ವಿಭಾಗವಾರು/ ಯೋಜನಾವಾರು	(ರೂ. ಕೋಟಿಗಳಲ್ಲಿ)
(ಅ)	ಭದ್ರಾ ಮೇಲ್ದಂಡೆ ಯೋಜನಾ ವಲಯ	
1	ಮುಖ್ಯಇಂಜಿನಿಯರ್, ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ	1.49
2	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ-4, ಹೊಸದುರ್ಗ	155.37
3	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ-6, ಚಳ್ಳಕೆರೆ	13.59
4	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ-7, ಹಿರಿಯೂರು, ಚಿತ್ರದುರ್ಗ	109.16
5	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ-9, ಶಿರಾ, ತುಮಕೂರು	1.75
6	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ-1, ಕಡೂರು	30.96
7	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ-1, ಮುತ್ತಿನಕೊಪ್ಪ	
8	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ-2, ಬಿ.ಆರ್.ಪ್ರಾಜೆಕ್ಟ್, ಶಿವಮೊಗ್ಗ	61.33
9	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ-3, ಅಜ್ಜಂಪುರ,	142.53
10	ಭದ್ರಾ ಮೇಲ್ದಂಡೆ ಯೋಜನಾ ವಿಭಾಗ-5, ಚಿತ್ರದುರ್ಗ.	137.73
11	ಭದ್ರಾ ಮೇಲ್ದಂಡೆ ಯೋಜನಾ ವೃತ್ತ ನಂ-1, ಬಿ.ಆರ್.ಪ್ರಾಜೆಕ್ಟ್, ಶಿವಮೊಗ್ಗ	0.80
12	ಭದ್ರಾ ಮೇಲ್ದಂಡೆ ಯೋಜನಾ ವೃತ್ತ ನಂ-2, ಚಿತ್ರದುರ್ಗ	0.81
13	ವಿಶೇಷ ಭೂಸ್ವಾಧೀನಾಧಿಕಾರಿ, ತರೀಕೆರೆ	--
14	ವಿಶೇಷ ಭೂಸ್ವಾಧೀನಾಧಿಕಾರಿ, ಚಿತ್ರದುರ್ಗ	0.24
	ಒಟ್ಟು (ಅ)	**655.76**
(ಆ)	ಎತ್ತಿನಹೊಳೆ ಯೋಜನಾ ವಲಯ	
1	ಮುಖ್ಯ ಇಂಜನಿಯರ್, ಎತ್ತಿನಹೊಳೆ ಯೋಜನಾ ವಲಯ, ತುಮಕೂರು.	0.87
2	ಎತ್ತಿನಹೊಳೆ ಯೋಜನಾ ವಿಭಾಗ ನಂ-02, ತುಮಕೂರು	479.44
3	ಎತ್ತಿನಹೊಳೆ ಯೋಜನಾ ವಿಭಾಗ ನಂ-01, ಸಕಲೇಶಪುರ	321.29
4	ಎತ್ತಿನಹೊಳೆ ಯೋಜನಾ ವಿಭಾಗ ನಂ-03, ಅರಸೀಕೆರೆ	383.73
5	ಎತ್ತಿನಹೊಳೆ ಯೋಜನಾ ವಿಭಾಗ ನಂ-04, ಮಧುಗಿರಿ	506.05
6	ಅಧೀಕ್ಷಕ ಅಭಿಯಂತರರು, ಎತ್ತಿನಹೊಳೆ ಯೋಜನಾ ವೃತ್ತ ನಂ-01, ತುಮಕೂರು	0.80
7	ವಿಶೇಷ ಭೂಸ್ವಾಧೀನಾಧಿಕಾರಿ, ದೊಡ್ಡಬಳ್ಳಾಪುರ	0.19
8	ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು	0.30
9	ವಿಶೇಷ ಭೂಸ್ವಾಧೀನಾಧಿಕಾರಿ, ಹಾಸನ	0.25
	ಒಟ್ಟು(ಆ)	**1692.92**
(ಇ)	ಮುಖ್ಯ ಲೆಕ್ಕಾಧಿಕಾರಿಗಳು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಕೇಂದ್ರ ಕಛೇರಿ, ಚಿತ್ರದುರ್ಗ	**0.53**
(ಈ)	ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನೋಂದಯಿತ ಕಛೇರಿ (ಬಡ್ಡಿ ಪಾವತಿಗಾಗಿ/ಗ್ಯಾರಂಟಿ ಕಮೀಷನ್/ಅವಧಿ ಸಾಲ ಮರುಪಾವತಿ)	**367.61**
	ಒಟ್ಟು (ಅ) +(ಆ) +(ಇ) +(ಈ) ಮೊತ್ತ	**2716.82**

*****

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 15 ಡಬ್ಲ್ಯೂಬಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:10.03.2020.

151
9/S
10/3/20

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1061ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1061ಕ್ಕೆ ಉತ್ತರದ **150** ಪ್ರತಿಗಳನ್ನು ಇದರೊಡನೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1061
ಸದಸ್ಯರ ಹೆಸರು : ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವ ದಿನಾಂಕ : 10.03.2020
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಕೋಲ್ಹಾರ ಗ್ರಾಮದಲ್ಲಿ ಎಷ್ಟು ಭಾದಿತ ಕುಟುಂಬಗಳನ್ನು ಗುರುತಿಸಲಾಗಿರುತ್ತದೆ;</td><td>ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಕೋಲ್ಹಾರ ಗ್ರಾಮದಲ್ಲಿ ಒಟ್ಟು 3950 ಭಾದಿತ ಕುಟುಂಬಗಳನ್ನು ಗುರುತಿಸಲಾಗಿದೆ.</td></tr>
<tr><td>ಆ)</td><td>ಸದರಿ ಯೋಜನೆಯಿಂದ ಕೋಲ್ಹಾರ ಪುನರ್ವಸತಿ ಕೇಂದ್ರದಲ್ಲಿರುವ ನಿರಾಶ್ರಿತ ಕುಟುಂಬಗಳಿಗಾಗಿ ವಸತಿ ಹಾಗೂ ವಾಣಿಜ್ಯ ಉದ್ದೇಶದ ಯಾವ ಅಳತೆಯ ಎಷ್ಟು ನಿವೇಶನಗಳನ್ನು ರಚನೆ ಮಾಡಲಾಗಿರುತ್ತದೆ;</td><td>1) ನಿರಾಶ್ರಿತ ಕುಟುಂಬಗಳಿಗೆ ಈ ಕೆಳಗಿನಂತೆ ನಿವೇಶನಗಳನ್ನು ರಚಿಸಲಾಗಿದೆ.
<table><tr><th>ನಿವೇಶನ ಮಾದರಿ</th><th>ಕ್ಷೇತ್ರ</th><th>ಸಂಖ್ಯೆ</th></tr><tr><td>ಎ</td><td>100 ಚ.ಮೀ (10X10 ಮೀ.)</td><td>4397</td></tr><tr><td>ಬಿ</td><td>200 ಚ.ಮೀ (10X20 ಮೀ.)</td><td>298</td></tr><tr><td>ಸಿ</td><td>300 ಚ.ಮೀ (15X20 ಮೀ.)</td><td>128</td></tr><tr><td>ಡಿ</td><td>400 ಚ.ಮೀ (20X20 ಮೀ.)</td><td>98</td></tr><tr><td>ಆಶ್ರಯ</td><td>100 ಚ.ಮೀ (10X10 ಮೀ.)</td><td>220</td></tr><tr><td></td><td>ಒಟ್ಟು</td><td>5141</td></tr></table>
2) ಒಟ್ಟು 705 ವಾಣಿಜ್ಯ ನಿವೇಶನಗಳನ್ನು ರಚಿಸಲಾಗಿರುತ್ತದೆ.
<table><tr><th>ಕ್ರ.ಸಂ</th><th>ಕ್ಷೇತ್ರ</th><th>ಸಂಖ್ಯೆ</th></tr><tr><td>1.</td><td>180 ಚ.ಅಡಿ (12x15 ಅಡಿ.)</td><td>528</td></tr><tr><td>2.</td><td>300 ಚ.ಅಡಿ (15x20 ಅಡಿ.)</td><td>177</td></tr><tr><td></td><td>ಒಟ್ಟು</td><td>705</td></tr></table></td></tr>
<tr><td>ಇ)</td><td>ಇವುಗಳಲ್ಲಿ ಯಾವ ನಿರಾಶ್ರಿತರಿಗೆ ಯಾವ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಹಾಗೂ ಹಂಚಿಕೆಯಾದ ನಿವೇಶನಗಳೆಷ್ಟು;</td><td>ಸಂತ್ರಸ್ಥರ ಅರ್ಹತೆ ಅನುಗುಣವಾಗಿ 5141 ವಾಸದ ನಿವೇಶನಗಳನ್ನು ಹಾಗೂ 705 ವಾಣಿಜ್ಯ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.
1) ಮನೆ ಕಳೆದುಕೊಂಡು 25 ಗುಂಟೆ ಜಮೀನು ಹೊಂದಿದ ನಿರಾಶ್ರಿತರಿಗೆ "ಎ" ಮಾದರಿ ನಿವೇಶನಗಳನ್ನು ಒಟ್ಟು 3924 ಸಂತ್ರಸ್ಥರಿಗೆ ಹಂಚಿಕೆ ಮಾಡಲಾಗಿದೆ.
2) ಮನೆ ಕಳೆದುಕೊಂಡು 26 ಗುಂಟೆ–08 ಎಕರೆ 25 ಗುಂಟೆ ವರೆಗೆ ಜಮೀನು ಹೊಂದಿದ ಒಟ್ಟು 364 ಸಂತ್ರಸ್ಥರಿದ್ದು, ಇವರಿಗೆ 298 "ಬಿ" ಮಾದರಿ ನಿವೇಶನಗಳನ್ನು ಹಾಗೂ 132 "ಎ" ಮಾದರಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.
3) ಮನೆ ಕಳೆದುಕೊಂಡು 08 ಎಕರೆ 26 ಗುಂಟೆ– 16 ಎಕರೆ 25 ಗುಂಟೆ ವರೆಗೆ ಜಮೀನು ಹೊಂದಿದ ಒಟ್ಟು 163 ಸಂತ್ರಸ್ಥರಿದ್ದು, ಅವರುಗಳಿಗೆ 128 "ಸಿ" ಮಾದರಿ ನಿವೇಶನಗಳನ್ನು ಹಾಗೂ 105 "ಎ" ಮಾದರಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.</td></tr>
</table>

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
		4) ಮನೆ ಕಳೆದುಕೊಂಡು 16 ಎಕರೆ 26 ಗುಂಟೆ– 25 ಎಕರೆ ವರೆಗೆ ಜಮೀನು ಹೊಂದಿದ ಒಟ್ಟು 152 ಸಂತ್ರಸ್ಥರಿದ್ದು, ಅವರುಗಳಿಗೆ 98 "ಡಿ" ಮಾದರಿ ನಿವೇಶನಗಳನ್ನು ಹಾಗೂ 216 "ಎ" ಮಾದರಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.
ಈ)	ಕೋಲ್ಹಾರ ಪುನರ್ವಸತಿ ಕೇಂದ್ರದಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮತ್ತು ಉದ್ಯಾನವನ ನಿರ್ಮಿಸುವುದಕ್ಕೆ ಕಾಯ್ದಿರಿಸಿದ ಜಾಗಗಳು ಯಾವುವು; ಅವುಗಳಲ್ಲಿ ಸಾರ್ವಜನಿಕ ಉದ್ದೇಶಿತ ಜಾಗಗಳನ್ನು ಯಾವ ಉದ್ದೇಶಕ್ಕಾಗಿ ಯಾರಿಗೆ ಹಂಚಿಕೆ ಮಾಡಲಾಗಿದೆ; ಅದರಲ್ಲಿ ಹಂಚಿಕೆ ಮಾಡದೇ ಇರುವ ನಿವೇಶನಗಳು ಯಾವುವು;	1) **ಸಾರ್ವಜನಿಕ ಉದ್ದೇಶಕ್ಕಾಗಿ** **ಸಾರ್ವಜನಿಕ ಉದ್ದೇಶಕ್ಕಾಗಿ** ಒಟ್ಟು 18 ಜಾಗಗಳನ್ನು ಗುರುತಿಸಿದ್ದು ಈ ಪೈಕಿ 13 ಜಾಗಗಳನ್ನು ಶಾಲಾ ಕಟ್ಟಡ, ಆಟದ ಮೈದಾನ, ಖಾಸಗಿ ಶಾಲೆಗಳು, ನೀರು ಸರಬರಾಜು ಯೋಜನೆ, ಎರಡು ಬಸ್ ನಿಲ್ದಾಣಗಳು, 60 ಹಾಸಿಗೆಗಳ ಆಸ್ಪತ್ರೆ, ಪಂಚಾಯತ್ ಕಟ್ಟಡ, ನಾಡ ಕಛೇರಿ ಕಟ್ಟಡ, ಅಂಗನವಾಡಿ ಕಟ್ಟಡಗಳು, ಬಾಲಕೀಯರ ಹಾಸ್ಟೇಲ್, ಸಂತೇ ಮೈದಾನ, ದನದ ಸಂತೆ, 40 ವಸತಿ ನಿವೇಶನ ಹಾಗೂ ಆಟದ ಮೈದಾನ, ಪೋಲೀಸ್ ಠಾಣೆ ಹಾಗೂ ವಸತಿ ಗೃಹಕ್ಕಾಗಿ ಹೀಗೆ ಹಲವಾರು ಸಾರ್ವಜನಿಕ ಉದ್ದೇಶಕ್ಕಾಗಿಯೇ ಉಪಯೋಗಿಸಿಕೊಳ್ಳಲಾಗಿದೆ. • ಬಸ್ ನಿಲ್ದಾಣ, ಅಂಚೆ ಕಛೇರಿ ಹಾಗೂ ಆರೋಗ್ಯ ಕೇಂದ್ರ ಅಂತಾ ಗುರುತಿಸಲಾದ ಜಾಗಗಳಲ್ಲಿ 92 ಆಶ್ರಯ ಹಾಗೂ ವಸತಿ ನಿವೇಶನಕ್ಕಾಗಿ ಪರಿವರ್ತಿಸಿ ಸಂತ್ರಸ್ಥರಿಗೆ ಹಂಚಿಕೆ. • ಸ್ಮಶಾನದ ಹತ್ತಿರ ಇರುವ ಖಿಲ್ಲಾ ಜಾಗದಲ್ಲಿ 10 ನಿವೇಶನಗಳನ್ನು ಮತ್ತು ಬಾಲಕಿಯರ ಹಾಸ್ಟೆಲ್ ಹಿಂದುಗಡೆ ಇರುವ ಖಿಲ್ಲಾ ಜಾಗದಲ್ಲಿ 48 ನಿವೇಶನಗಳನ್ನು ನಿರ್ಮಿಸಿ ಒಟ್ಟು 58 ನಿವೇಶನಗಳನ್ನು ಸಂತ್ರಸ್ಥರಿಗೆ ಹಂಚಿಕೆ. • ಚಿತ್ರಮಂದಿರಕ್ಕೆ ಕಾಯ್ದಿರಿಸಿದ ಜಾಗದಲ್ಲಿ 32 ನಿವೇಶನಗಳನ್ನು ನಿರ್ಮಿಸಿ ಸಂತ್ರಸ್ಥರಿಗೆ ಹಂಚಿಕೆ ಮಾಡಲಾಗಿದೆ. ಹೀಗೆ ಒಟ್ಟು 182 ನಿವೇಶನಗಳನ್ನು ರಚಿಸಿ ಹಂಚಿಕೆ ಹಾಗೂ ಅದರೊಂದಿಗೆ 04 ಎಕರೆ ಜಾಗವನ್ನು ಪಾಲಿಟೆಕ್ನಿ ಕಾಲೇಜಿಗಾಗಿ ಮಂಜೂರಿಸಲಾಗಿದೆ. • ಇನ್ನುಳಿದ 05 ಜಾಗಗಳ ಅಂದಾಜು 09 ಎಕರೆ ಅದೇ ಉದ್ದೇಶಕ್ಕಾಗಿ ಕಾಯ್ದಿರಿಸಿದ್ದು, ಸಂರಕ್ಷಿಸಲಾಗಿರುವುದು. 2) **ಉದ್ಯಾನವನ ಉದ್ದೇಶಕ್ಕಾಗಿ:** ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಿದ ಒಟ್ಟು 05 ಜಾಗಗಳ ಅಂದಾಜು 23 ಎಕರೆ ಕ್ಷೇತ್ರದ ಪೈಕಿ ಮುಸ್ಲಿಂ ಸಮುದಾಯಕ್ಕೆ ಹಂಚಿಕೆ ಮಾಡಿದ ನಿವೇಶನಗಳು ಹತ್ತಿರ ಇರುವುದರಿಂದ 02 ಜಾಗಗಳ ಅಂದಾಜು 8 ಎಕರೆ ಕ್ಷೇತ್ರವನ್ನು ಮಸೀದಿಗಾಗಿ ಹಂಚಿಕೆ ಮಾಡಲಾಗಿದೆ. ಉಳಿದ 03 ಜಾಗಗಳ 15 ಎಕರೆ ಕ್ಷೇತ್ರವನ್ನು ಉದ್ಯಾನವನಕ್ಕೆ ಕಾಯ್ದಿರಿಸಿ, ಸಂರಕ್ಷಿಸಲಾಗಿದೆ.
ಉ)	ಸದರಿ ಪುನರ್ವಸತಿ ಕೇಂದ್ರದಲ್ಲಿ ಉದ್ಯಾನವನಗಳಿಗೆ ಕಾಯ್ದಿರಿಸಲಾದ ಜಾಗಗಳನ್ನು ಸಂರಕ್ಷಿಸಲಾಗಿದೆಯೇ;	ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಿದ ಒಟ್ಟು 05 ಜಾಗಗಳ ಅಂದಾಜು 23 ಎಕರೆ ಕ್ಷೇತ್ರದ ಪೈಕಿ ಮುಸ್ಲಿಂ ಸಮುದಾಯಕ್ಕೆ ಹಂಚಿಕೆ ಮಾಡಿದ ನಿವೇಶನಗಳು ಹತ್ತಿರ ಇರುವುದರಿಂದ 02 ಜಾಗಗಳ ಅಂದಾಜು 8 ಎಕರೆ ಕ್ಷೇತ್ರವನ್ನು ಮಸೀದಿಗಾಗಿ ಹಂಚಿಕೆ ಮಾಡಲಾಗಿದೆ. ಉಳಿದ 03 ಜಾಗಗಳ 15 ಎಕರೆ ಕ್ಷೇತ್ರವನ್ನು ಉದ್ಯಾನವನಕ್ಕೆ ಕಾಯ್ದಿರಿಸಿ, ಸಂರಕ್ಷಿಸಲಾಗಿದೆ.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಊ)	ಹಾಗಿದ್ದಲ್ಲಿ, ಸದರಿ ಜಾಗಗಳನ್ನು ವಸತಿ ಮತ್ತು ವಾಣಿಜ್ಯ ನಿವೇಶನಗಳನ್ನಾಗಿ ಪರಿವರ್ತಿಸಿ ಹಂಚಿಕೆ ಮಾಡಲಾಗಿದೆಯೇ; ಹಂಚಿಕೆ ಮಾಡಿದ್ದಲ್ಲಿ, ಯಾರಿಗೆ ಹಂಚಿಕೆ ಮಾಡಲಾಗಿದೆ; ಹಂಚಿಕೆ ಮಾಡಿರುವುದಕ್ಕೆ ಕಾರಣಗಳೇನು;	ಸದರಿ ಜಾಗಗಳನ್ನು ವಸತಿ ಮತ್ತು ವಾಣಿಜ್ಯ ನಿವೇಶನಗಳನ್ನಾಗಿ ಪರಿವರ್ತಿಸಿರುವುದಿಲ್ಲ ಹಾಗೂ ಹಂಚಿಕೆ ಮಾಡಿರುವುದಿಲ್ಲ.
ಋ)	ಉದ್ಯಾನವನ ಮತ್ತು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಲಾಗುವ ನಿವೇಶನಗಳನ್ನು ಅವುಗಳ ಉದ್ದೇಶ ಬದಲಾಯಿಸಿ ಹಂಚಿಕೆ ಮಾಡಲು ಕಾನೂನಿನಲ್ಲಿ ಅವಕಾಶ ಇಲ್ಲದೇ ಇರುವ ಪಕ್ಷದಲ್ಲಿ ಅವುಗಳನ್ನು ಹಂಚಿಕೆ ಮಾಡಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಉದ್ಯಾನವನ ಮತ್ತು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಲಾಗುವ ನಿವೇಶನಗಳನ್ನು ಅವುಗಳ ಉದ್ದೇಶ ಬದಲಾಯಿಸಿ ಹಂಚಿಕೆ ಮಾಡಲಾದ ಕುರಿತು ಪರಿಶೀಲಿಸಲು ಪುನರ್‌ವಸತಿ ಅಧಿಕಾರಿಗಳು, ಕೃ.ಮೇ.ಯೋ. ಆಲಮಟ್ಟಿ, ಕಾರ್ಯನಿರ್ವಾಹಕ ಅಭಿಯಂತರರು, ಪುನರ್‌ವಸತಿ ವಿಭಾಗ ನಂ.2, ಆಲಮಟ್ಟಿ ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರು, ವಿಜಯಪುರ ಇವರನ್ನೊಳಗೊಂಡಂತೆ ತಪಾಸಣಾ ತಂಡವನ್ನು ರಚಿಸಲಾಗಿದ್ದು, ವರದಿ ನಿರೀಕ್ಷಿಸಲಾಗಿದೆ.

ಸಂಖ್ಯೆ: ಜಸಂಇ 15 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 06 ಡಬ್ಲ್ಯೂಬಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:10.03.2020.

153
CIS
10/3/20

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1063ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1063ಕ್ಕೆ ಉತ್ತರದ **150** ಪ್ರತಿಗಳನ್ನು ಇದರೊಡನೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1063
ಸದಸ್ಯರ ಹೆಸರು : ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವ ದಿನಾಂಕ : 10.03.2020
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ನಿಡಗುಂದಿ ತಾಲ್ಲೂಕಿನ ಅರಳದಿನ್ನಿ ಗ್ರಾಮವನ್ನು ಸ್ಥಳಾಂತರಿಸಿ ಅದಕ್ಕೆ ಪುನರ್ವಸತಿ ಕಲ್ಪಿಸುವಂತೆ ಕೋರಿ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆಯೇ;	ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಅರಳದಿನ್ನಿ ಗ್ರಾಮವನ್ನು ಸ್ಥಳಾಂತರಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ ಆಲಮಟ್ಟಿ ಜಲಾಶಯದಿಂದ ನೀರು ಬಿಡುಗಡೆ ಗೊಳಿಸಿದ ತತ್ಸಮಯದಲ್ಲಿ ಮಲಪ್ರಭಾ ನದಿಗೆ ನೀರು ಹರಿದು ಬಂದು ಕೃಷ್ಣಾ ನದಿಗೆ ಸೇರುವುದರಿಂದ ಮತ್ತು ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿದ ತಂಗಡಗಿ ಸೇತುವೆಯಿಂದಾಗಿ ನದಿಗಳ ಸಂಗಮದ (Confluence) ಬಳಿ ನೀರಿನ ಪ್ರಮಾಣ (Afflux) ಹೆಚ್ಚಿಗೆ ಉಂಟಾಗಿ, ನಾರಾಯಣಪೂರ ಜಲಾಶಯದಲ್ಲಿ ನೀರಿನ ಮಟ್ಟವನ್ನು ಎಫ್.ಆರ್.ಎಲ್. ಮಟ್ಟದಿಂದ ಕಡಿಮೆ ಮಟ್ಟದಲ್ಲಿ ಕಾಯ್ದುಕೊಂಡಿದ್ದರೂ ಸಹ ನಾರಾಯಣಪೂರ ಜಲಾಶಯದ ಹಿನ್ನೀರು ನಿಡಗುಂದಿ ತಾಲೂಕಿನ ಅರಳದಿನ್ನಿ ಗ್ರಾಮವನ್ನು ಭಾಗಶಃ ಸುತ್ತುವರೆದಿರುವದು ಕಂಡು ಬಂದಿರುತ್ತದೆ. ಸದರಿ ಗ್ರಾಮವು ಪ್ರವಾಹ ಸಂದರ್ಭದಲ್ಲಿ ಹಾನಿಗೊಳಗಾಗದಂತೆ ತಾಂತ್ರಿಕ ಪರಿಹಾರದ ಕ್ರಮವು ಜಾರಿಯಲ್ಲಿದೆ.
ಆ)	ಹಾಗಿದ್ದಲ್ಲಿ, ಸುರಕ್ಷತೆಯ ದೃಷ್ಟಿಯಿಂದ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಗ್ರಾಮಕ್ಕೆ ಪುನರ್ವಸತಿ ಕಲ್ಪಿಸಲು ಗುರುತಿಸಿರುವ ಸ್ಥಳ ಯಾವುದು ಹಾಗೂ ಇದುವರೆಗೂ ಕೈಗೊಂಡಿರುವ ಕ್ರಮಗಳೇನು;	ಉದ್ಭವಿಸುವುದಿಲ್ಲ.
ಇ)	ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ಅರಳದಿನ್ನಿ ಗ್ರಾಮವನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಾಗುವುದು?	ಅನ್ವಯಿಸುವುದಿಲ್ಲ

ಸಂಖ್ಯೆ: ಜಸಂಇ 06 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 08 ಡಬ್ಲ್ಯೂಬಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:10.03.2020.

194
CIS
10/3/20

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:858ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:858ಕ್ಕೆ ಉತ್ತರದ **150** ಪ್ರತಿಗಳನ್ನು ಇದರೊಡನೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 858
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್(ಇಂಡಿ)
ಉತ್ತರಿಸುವ ದಿನಾಂಕ : 10.03.2020
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಯು.ಕೆ.ಪಿ ಹಂತ-3ರ ಯೋಜನೆಯಡಿ ಆಲಮಟ್ಟಿ ಜಲಾಶಯದ ಎತ್ತರವನ್ನು 519.6ಮೀ. ನಿಂದ 524.256 ಮೀಟರ್ ಗಳಿಗೆ ಎತ್ತರಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಹೌದು.
ಆ)	ಸದರಿ ಜಲಾಶಯದ ಮಟ್ಟವನ್ನು ಎತ್ತರಿಸುವುದರಿಂದ ಎಷ್ಟು ಟಿ.ಎಂ.ಸಿ. ನೀರು ಹೆಚ್ಚುವರಿಯಾಗಿ ಲಭ್ಯವಾಗುವುದು;	ಆಲಮಟ್ಟಿ ಜಲಾಶಯದ ಪ್ರಸಕ್ತ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್.519.60ಮೀ. ನಿಂದ 524.256 ಮೀ.ಗೆ ಎತ್ತರಿಸುವುದರಿಂದ ಹೆಚ್ಚುವರಿಯಾಗಿ 100.44 ಟಿ.ಎಂ.ಸಿ. ನೀರಿನ ಲಭ್ಯತೆಯಾಗಲಿದೆ.
ಇ)	ಈ ಹೆಚ್ಚುವರಿ ನೀರಿನಿಂದ ಎಷ್ಟು ಜಿಲ್ಲೆಗಳ ಹಾಗೂ ಎಷ್ಟು ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ;	ಸದರಿ ಲಭ್ಯವಾಗುವ ನೀರಿನಿಂದ 7 ಜಿಲ್ಲೆಗಳ ವಿಜಯಪುರ, ಬಾಗಲಕೋಟೆ, ರಾಯಚೂರ, ಕಲಬುರಗಿ, ಯಾದಗೀರ, ಕೊಪ್ಪಳ ಮತ್ತುಗದಗ ಜಿಲ್ಲೆಗಳ ವ್ಯಾಪ್ತಿಯ 5.94 ಲಕ್ಷ ಹೇ. ಭೂಮಿಗೆ ನೀರಾವರಿ ಸೌಲಭ್ಯಕಲ್ಪಿಸಲುಯೋಜಿಸಲಾಗಿದೆ
ಈ)	ಸದರಿ ಎತ್ತರಿಸುವ ಕಾಮಗಾರಿ ವಿಳಂಬದಿಂದಾಗಿ ಯೋಜನಾ ವೆಚ್ಚ ಹೆಚ್ಚಳವಾಗುವುದಿಲ್ಲವೇ; ಅಲ್ಲದೆ ಪ್ರತಿ ವರ್ಷ ಹೆಚ್ಚುವರಿ ನೀರು ಬೇರೆ ರಾಜ್ಯಗಳ/ಸಮುದ್ರದ ಪಾಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೃಮೇ.ಯೋ ಹಂತ-3 ರ ಯೋಜನೆಯ ಅನುಮೋದಿತ ಪರಿಷ್ಕೃತ ಅಂದಾಜು ಮೊತ್ತ ರೂ.51,148.94 ಕೋಟಿ ಆಗಿರುತ್ತದೆ. ಕೃಷ್ಣಾ ನ್ಯಾಯಾಧಿಕರಣ-2ರ ಅಂತಿಮ ತೀರ್ಪು ಇನ್ನೂ ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆಗೊಂಡಿರುವುದಿಲ್ಲ. ಅಲ್ಲದೇ, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರ ರಾಜ್ಯಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ನ್ಯಾಯಾಧಿಕರಣದ ಆದೇಶದ ಬಗ್ಗೆ ಸಲ್ಲಿಸಿರುವ ವಿಶೇಷ ಅನುಮತಿ ಅರ್ಜಿಗಳು ಇತ್ಯರ್ಥವಾಗಬೇಕಾಗಿರುತ್ತದೆ.
ಉ)	ಈ ಜಲಾಶಯವನ್ನು ಎತ್ತರಿಸಲು ಭೂಸ್ವಾಧೀನ ಮತ್ತು ಪುನರ್ ವಸತಿ ಉದ್ದೇಶಕ್ಕೆ ಅಗತ್ಯವಿರುವ ಅನುದಾನವೆಷ್ಟು; (ವಿವರ ನೀಡುವುದು)	ಕೃಮೇ.ಯೋ ಹಂತ-3 ಯೋಜನೆಯಡಿಯ ಭೂಸ್ವಾಧೀನತೆ ಮತ್ತು ಪುನರ್ ವಸತಿ& ಪುನರ್ ನಿರ್ಮಾಣಕ್ಕಾಗಿ ಒಟ್ಟಾರೆ ಅಂದಾಜಿಸಲಾದ ಮೊತ್ತ ರೂ.30143.17ಕೋಟಿ ಆಗಿರುತ್ತದೆ.
ಊ)	ಭೂಸ್ವಾಧೀನ ಮತ್ತು ಪುನರ್ ವಸತಿ ಕ್ರಮ ಕೈಗೊಳ್ಳಲು ಅನುದಾನ ಹಾಗೂ ಅವಶ್ಯಕ ಸಿಬ್ಬಂದಿಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯೋಜನೆಯಡಿಯ ಭೂಸ್ವಾಧೀನತೆ ಮತ್ತು ಪುನರ್ ವಸತಿ & ಪುನರ್ ನಿರ್ಮಾಣಕ್ಕಾಗಿ ವಾರ್ಷಿಕ ಆಯವ್ಯಯದಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಅನುದಾನ ಕಲ್ಪಿಸಲಾಗುತ್ತಿದೆ. ಯೋಜನೆಯಡಿಯ ಭೂಸ್ವಾಧೀನತೆ ಮತ್ತು ಪುನರ್ ವಸತಿ & ಪುನರ್ ನಿರ್ಮಾಣಕ್ಕಾಗಿ ಪ್ರಮುಖವಾಗಿ ಅವಶ್ಯಕವಿರುವ

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
		ವಿಶೇಷ ಭೂಸ್ವಾಧೀನಾಧಿಕಾರಿಗಳ ಮತ್ತು ಇತರ ಹಿರಿಯ ಅಧಿಕಾರಿ ಸಿಬ್ಬಂದಿಗಳ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ.
ಖ)	ಸದರಿ ಯೋಜನೆಗೆ ಬೇಕಾಗುವ ಅನುದಾನವೆಷ್ಟು; ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸುವ ಅನುದಾನವೆಷ್ಟು; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಯೋಜನೆಯ ಅನುಷ್ಠಾನವು ಸರ್ಕಾರದ ಆದ್ಯತೆಯಾಗಿದ್ದು, ಈ ನಿಟ್ಟಿನಲ್ಲಿ ಅಗತ್ಯ ಅನುದಾನವನ್ನು ಒದಗಿಸಲಾಗುವುದು.

ಸಂಖ್ಯೆ: ಜಸಂಇ 08 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 12 ಡಬ್ಲ್ಯೂಬಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:10.03.2020.

73
Q/S
10/3/20

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:818ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:818ಕ್ಕೆ ಉತ್ತರದ **150** ಪ್ರತಿಗಳನ್ನು ಇದರೊಡನೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲಸಂಪನ್ಮೂಲ ಇಲಾಖೆ

10/03/2020

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 818
ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್.(ಲಿಂಗಸುಗೂರು)
ಉತ್ತರಿಸುವ ದಿನಾಂಕ : 10.03.2020
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಲಿಂಗಸುಗೂರು ತಾಲ್ಲೂಕು ಎಷ್ಟು ಎಕರೆ ನೀರಾವರಿ ಪ್ರದೇಶವನ್ನು ಹೊಂದಿದೆ; ಇದರಲ್ಲಿ ನೀರಾವರಿ ವಂಚಿತ ಪ್ರದೇಶವೆಷ್ಟು; ಈ ಪ್ರದೇಶಕ್ಕೆ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಹಾಗೂ ಹಮ್ಮಿಕೊಂಡಿರುವ ಯೋಜನೆಗಳಾವುವು;	ಲಿಂಗಸುಗೂರು ತಾಲೂಕಿನಲ್ಲಿ ಸುಮಾರು 90,000 ಹೆಕ್ಟೇರ್ (2,22,395 ಎಕರೆ) ನೀರಾವರಿ ಪ್ರದೇಶವಿದ್ದು, ಕೃಷ್ಣಾ ಭಾಗ್ಯ ಜಲ ನಿಗಮದಡಿ ನೀರಾವರಿ ಸೌಲಭ್ಯ ಕಲ್ಪಿಸಲು ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. 1. ಕೃಮೇ.ಯೋ ಹಂತ-2ರಡಿ ರಾಂಪುರ ಏತ ನೀರಾವರಿ ಯೋಜನೆಯ ಲಿಂಗಸುಗೂರು ತಾಲ್ಲೂಕಿನ 19,406 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಕಲ್ಪಿಸಲಾಗಿದೆ. 2. ಕೃಮೇ.ಯೋ ಹಂತ-3ರಲ್ಲಿ ರಾಂಪುರ ಏತ ನೀರಾವರಿ ಯೋಜನೆ ವಿಸ್ತರಣೆ ಅಡಿ ಸುಮಾರು 10,800 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಕಾಮಗಾರಿಗಳು ಅಂತಿಮ ಹಂತದಲ್ಲಿವೆ. 3. ನಂದವಾಡಗಿ ಏತ ನೀರಾವರಿ ಯೋಜನೆಯಿಂದ ಲಿಂಗಸೂರು ತಾಲ್ಲೂಕಿನ 34,692 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿ ಕಲ್ಪಿಸುವ ಟರ್ನ್ ಕೀ ಆಧಾರಿತ ಕಾಮಗಾರಿಗಳು ಪ್ರಗತಿಯಲ್ಲಿವೆ. 4. ನಂದವಾಡಗಿ 2ನೇ ಹಂತದ ಯೋಜನೆಯಡಿ ಲಿಂಗಸುಗೂರು ತಾಲೂಕಿನ ಸುಮಾರು 12,000 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ.
ಆ)	ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 7 ಸಣ್ಣ ನೀರಾವರಿ ಕೆರೆಗಳಿಗೆ ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ನೀರು ತುಂಬಿಸುವ ಯೋಜನೆಯ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಲಿಂಗಸುಗೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 7 ಸಣ್ಣ ನೀರಾವರಿ ಕೆರೆಗಳಿಗೆ ನಾರಾಯಣಪುರ ಜಲಾಶಯದ ಹಿನ್ನೀರಿನಿಂದ ನೀರು ತುಂಬಿಸುವ ಯೋಜನೆಯ ರೂ.104.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಯಲ್ಲಿದೆ.
ಇ)	ಕಳೆದ ಮೂರು ವರ್ಷಗಳಲ್ಲಿ ಜಲ ಸಂಪನ್ಮೂಲ ಇಲಾಖೆಗೆ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ವೆಷ್ಟು; ಕಳೆದ ಮೂರು ವರ್ಷಗಳಿಂದ ಲಿಂಗಸುಗೂರು ವಿಧಾನಸಭಾ ಕ್ಷೇತ್ರಕ್ಕೆ ಜಲ ಸಂಪನ್ಮೂಲ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಇದರಲ್ಲಿ ಬಳಕೆ ಮಾಡಿರುವ ಅನುದಾನ ಹಾಗೂ ಬಳಕೆಯಾಗದಿರುವ ಅನುದಾನದ ಮೊತ್ತವೆಷ್ಟು?	ಕಳೆದ 3 ವರ್ಷಗಳಲ್ಲಿ ಜಲ ಸಂಪನ್ಮೂಲ ಇಲಾಖೆಗೆ ವಿವಿಧ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿದೆ: (ರೂ.ಕೋಟಿಗಳಲ್ಲಿ) ವರ್ಷ / ಆಯವ್ಯಯ ಅನುದಾನ / ಪರಿಷ್ಕೃತ ಅನುದಾನ / ಬಿಡುಗಡೆ 2016–17 / 12620.92 / 11916.37 / 11738.89 2017–18 / 15853.31 / 13553.61 / 13154.13 2018–19 / 15993.73 / 15798.44 / 15418.36 ಕೃಷ್ಣಾ ಭಾಗ್ಯ ಜಲ ನಿಗಮದಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರಗಳನ್ನು ಪ್ರತ್ಯೇಕವಾಗಿ **ಅನುಬಂಧ-1** ರಲ್ಲಿ ಹಾಗೂ ಕಳೆದ 3 ವರ್ಷಗಳಲ್ಲಿ ಲಿಂಗಸುಗೂರು ವಿಧಾನಸಭಾ ಮತಕ್ಷೇತ್ರಕ್ಕೆ ಬಿಡುಗಡೆಯಾದ ಅನುದಾನ, ಬಳಕೆಯಾದ ಮತ್ತು ಬಳಕೆಯಾಗದಿರುವ ಅನುದಾನದ ವಿವರಗಳನ್ನು **ಅನುಬಂಧ-2** ರಲ್ಲಿ ಪ್ರತ್ಯೇಕವಾಗಿ ಲಗತ್ತಿಸಿ ಸಲ್ಲಿಸಿದೆ.

ಸಂಖ್ಯೆ: ಜಸಂಇ 12 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಶ್ರೀ ಹೊಲಗೇರಿ ಡಿ. ಎಸ್., ವಿಧಾನ ಸಭಾ ಸದಸ್ಯರು, ಲಿಂಗಸುಗೂರು ವಿಧಾನಸಭಾ ಮತಕ್ಷೇತ್ರ ಇವರ ಚುಕ್ಕಿ ಗುರುತಿಲ್ಲದ ಪ್ರಶ್ನೆ ಸಂಖ್ಯೆ 818 ಕ್ಕೆ ಅನುಬಂಧ- 1

ಕ್ರ. ಸಂ.	ಲೆಕ್ಕ ಶೀರ್ಷಿಕೆ	2016-17ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ	2017-18ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ	2018-19ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ
1	ಎ.ಐ.ಬಿ.ಪಿ. ವೆಚ್ಚಗಳು	167.23	184.43	0.00
2	ಎ.ಐ.ಬಿ.ಪಿ. - ಎಸ್.ಸಿ.ಪಿ	36.90	34.26	0.00
3	ಎ.ಐ.ಬಿ.ಪಿ. - ಟಿ.ಎಸ್.ಪಿ	13.19	11.99	0.00
4	ಬಂಡವಾಳ ವೆಚ್ಚಗಳು	426.81	375.00	562.57
6	ಬಂಡವಾಳ ವೆಚ್ಚಗಳು-ಎಸ್.ಸಿ.ಪಿ	429.50	410.21	218.35
8	ಬಂಡವಾಳ ವೆಚ್ಚಗಳು-ಟಿ.ಎಸ್.ಪಿ	217.24	188.91	90.87
9	ಭೂಸ್ವಾ / ಮ. & ಮ. - ಬಂಡವಾಳ ವೆಚ್ಚಗಳು	1002.32	1087.50	471.00
10	ಭೂಸ್ವಾ / ಮ. & ಮ. - ಎಸ್.ಸಿ.ಪಿ.	0.00	201.17	177.71
11	ಭೂಸ್ವಾ / ಮ. & ಮ. - ಟಿ.ಎಸ್.ಪಿ.	0.00	98.83	62.23
12	ಡ್ರಿಪ್	36.06	88.79	56.21
13	ನಬಾರ್ಡ್	78.43	20.89	13.81
14	ವಿಶೇಷ ಅಭಿವೃದ್ಧಿ ಯೋಜನೆಗಳು	15.00	30.00	35.22
15	ನಿರ್ವಹಣಾ ವೆಚ್ಚಗಳು	56.70	56.70	56.70
16	ಸಾಲ ಮೇಲುಸ್ತುವಾರಿ (ಬಡ್ಡಿ)	431.96	565.51	664.64
17	ಸಾಲ ಮೇಲುಸ್ತುವಾರಿ (ಅಸಲು)	0.00	0.00	588.38
18	ಖಾತರಿ ಶುಲ್ಕ	44.06	68.62	87.42
19	ವೆಚ್ಚ ಮಾಡದ ಎಸ್.ಸಿ.ಪಿ	15.66	0.00	0.00
20	ವೆಚ್ಚ ಮಾಡದ ಟಿ.ಎಸ್.ಪಿ	1.00	0.00	0.00
	ಒಟ್ಟು	**2972.06**	**3422.80**	**3085.11**

ಶ್ರೀ ಹೊಲಗೇರಿ ಡಿ. ಎಸ್., ವಿಧಾನ ಸಭಾ ಸದಸ್ಯರು, ಲಿಂಗಸುಗೂರು ವಿಧಾನಸಭಾ ಮತಕ್ಷೇತ್ರ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 818 ಕ್ಕೆ ಅನುಬಂಧ- 2

(ರೂ.ಕೋಟಿಗಳಲ್ಲಿ)

ಕ್ರ. ಸಂ.	ವರ್ಷ	ಲೆಕ್ಕ ಶೀರ್ಷಿಕೆ	ಲಿಂಗಸುಗೂರು ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆಯಾದ ಅನುದಾನ	ಖರ್ಚಾದ ಮೊತ್ತ	ಬಾಕಿ ಉಳಿದ ಮೊತ್ತ
1	2016–17	ಎನ್‌ಎಲ್‌ಬಿಸಿ – ಇಆರ್‌ಎಂ	–	–	–
		ಆಣೆಕಟ್ಟು ಮತ್ತು ಸಂಬಂಧಿಸಿದ ಕಾಮಗಾರಿ	–	–	–
		ನಾಎದಂಕಾಲುವೆ	–	–	–
		ರಾಂಪನೀ ಯೋಜನೆ ಸ್ಕೀಮ್ – ಎ	1.50	0.16	1.34
		ನಾಬದಂಕಾ ಸ್ಕೀಮ್ – ಎ	–	–	–
		ರಾಂಪನೀಯೋಜನೆ ಸ್ಕೀಮ್ – ಬಿ	15.00	5.90	9.10
		ಕೋಪನೀ ಯೋಜನ ಸ್ಕೀಮ್ – ಬಿ	–	–	–
		ನಂದವಾಡಗಿ ಏತ ನೀರಾವರಿ ಯೋಜನೆ	50.00	0.54	49.46
		ಡ್ರಿಪ್	50.00	–	–
ಒಟ್ಟು			66.50	6.60	59.90
2	2017–18	ಎನ್‌ಎಲ್‌ಬಿಸಿ–ಇಆರ್‌ಎಂ	–	–	–
		ಆಣೆಕಟ್ಟು ಮತ್ತು ಸಂಬಂಧಿಸಿದ ಕಾಮಗಾರಿ	–	–	–
		ನಾಎದಂ ಕಾಲುವೆ	–	–	–
		ರಾಂಪನೀ ಯೋಜನೆ ಸ್ಕೀಮ್ –ಎ	2.00	0.55	1.45
		ನಾಬದಂಕಾ ಸ್ಕೀಮ್ – ಎ	–	–	–
		ರಾಂಪನೀಯೋಜನೆ ಸ್ಕೀಮ್ – ಬಿ	10.00	1.70	0.30
		ಕೋಪನೀ ಯೋಜನ ಸ್ಕೀಮ್ – ಬಿ	–	–	–
		ನಂದವಾಡಗಿ ಏತ ನೀರಾವರಿ ಯೋಜನ	100.00	40.33	59.67
		ಡ್ರಿಪ್	–	–	–
ಒಟ್ಟು			112.00	42.58	69.42
3	2018–19	ಎನ್‌ಎಲ್‌ಬಿಸಿ – ಇಆರ್‌ಎಂ	–	–	–
		ರಾಂಪನೀಯೋಜನ ಸ್ಕೀಮ್ – ಬಿ	28.50	18.89	9.61
		ಕೋಪನೀ ಯೋಜನೆ ಸ್ಕೀಮ್ – ಬಿ	–	–	–
		ನಂದವಾಡಗಿ ಏತ ನೀರಾವರಿ ಯೋಜನೆ	102.25	130.92	–
		ನಾಬದಂಕಾ – ಇಆರ್‌ಎಂ	50.00	–	–
		ಡ್ರಿಪ್	50.00	–	–
ಒಟ್ಟು			135.75	149.81	9.61

ಟಿಪ್ಪಣಿ : ಬಾಕಿ ಉಳಿದ ಮೊತ್ತವನ್ನು ಮುಂದಿನ ವಾರ್ಷಿಕ ಸಾಲಿನಲ್ಲಿ ಪ್ರಾರಂಭಿಕ ಶಿಲ್ಕು ಎಂದು ಪರಿಗಣಿಸಿ ವೆಚ್ಚ ಮಾಡಲಾಗುತ್ತಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 04 ಡಬ್ಲ್ಯೂಬಿಎಂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:10.03.2020.

01
U/S
10/3/20

ಇವರಿಂದ
ಸರ್ಕಾರದ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಡಾ: ಅಜಯ್ ಧರ್ಮ ಸಿಂಗ್ (ಜೇವರ್ಗಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1069ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಡಾ: ಅಜಯ್ ಧರ್ಮ ಸಿಂಗ್ (ಜೇವರ್ಗಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1069ಕ್ಕೆ ಉತ್ತರದ **150** ಪ್ರತಿಗಳನ್ನು ಇದರೊಡನೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1069
ಸದಸ್ಯರ ಹೆಸರು : ಡಾ:ಅಜಯ್ ಧರ್ಮಸಿಂಗ್ (ಜೇವರ್ಗಿ)
ಉತ್ತರಿಸುವ ದಿನಾಂಕ : 10.03.2020
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ)	ಎಂ.ಬಿ.ಸಿ. ಮುಖ್ಯ ಕಾಲುವೆಯ ಇ.ಆರ್.ಎಂ. ಕಾಮಗಾರಿ 9.137 ಕಿ.ಮೀ. ಬಾಕಿ ಉಳಿದಿದ್ದು, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಯಾವ ನಿಗದಿತ ಅವಧಿಯೊಳಗಾಗಿ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು;	ಕೇಂದ್ರ ಸರ್ಕಾರದ ಅನುಮೋದಿತ ಎ.ಐ.ಬಿ.ಪಿ ಸಹಾಯಧನದಡಿ ಕೈಗೊಂಡಿರುವ ನಾರಾಯಣಪುರ ಎಡದಂಡೆ ಕಾಲುವೆ ಜಾಲದ ಆಧುನೀಕರಣ ಯೋಜನೆಯಡಿ (ಎನ್.ಎಲ್.ಬಿ.ಸಿ–ಇ.ಆರ್.ಎಂ) ಈಗಾಗಲೇ, ಮುಡಬಾಳ ಶಾಖಾ ಕಾಲುವೆಯಡಿ (ಎಂ.ಬಿ.ಸಿ) ಪ್ರಮುಖವಾಗಿ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆ ಜಾಲಗಳಡಿ ಬಹುವಾಗಿ ಶಿಥಿಲಗೊಂಡಿರುವ ರೀಚ್‌ಗಳ (Vulnerable Reach) ಆಧುನೀಕರಣ ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. ಎನ್.ಎಲ್.ಬಿ.ಸಿ–ಇ.ಆರ್.ಎಂ ಯೋಜನೆಯಡಿ ಕೈಗೊಳ್ಳದೆ ಇರುವ ಬಾಕಿ ವಿತರಣಾ ಕಾಲುವೆ ರೀಚ್‌ಗಳು, ಲ್ಯಾಟರಲ್ ಮತ್ತು ಸಬ್–ಲ್ಯಾಟರಲ್‌ಗಳ ಆಧುನೀಕರಣದ ಕಾಮಗಾರಿಗಳನ್ನು CADWM of NLBC-ERM ಯೋಜನೆಯಡಿ ಒಟ್ಟು ರೂ.750.00 ಕೋಟಿ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದ್ದು, ಸರ್ಕಾರದ ಪರಿಶೀಲನೆ ಹಂತದಲ್ಲಿರುತ್ತದೆ. ಮುಂದುವರೆದು, ಕಾಲುವೆ ಜಾಲಗಳಡಿ ಸಮರ್ಪಕ ನೀರು ನಿರ್ವಹಣೆಗೆಗಾಗಿ ಸೀಲ್ಟ್ & ಜಂಗಲ್ ಕ್ಲೀಯರನ್ಸ್, ಹಾನಿಗೊಳಗಾದ ಕಾಲುವೆ ಲೈನಿಂಗ್ ರೀಚ್ & ಸಿ.ಡಿ. ಕಾಮಗಾರಿಗಳ ಅವಶ್ಯಕ ದುರಸ್ತಿ ಕಾಮಗಾರಿಗಳಿಗೆ ಪ್ರತಿ ವರ್ಷ ಸೂಕ್ತ ಅನುದಾನ ಒದಗಿಸಿ ಕಾಲುವೆ ಕ್ಲೋಸ್‌ರ ಅವಧಿಯಲ್ಲಿ ಕ್ಲೋಸರ್ ಮತ್ತು ವಿಶೇಷ ದುರಸ್ತಿ ಕಾಮಗಾರಿಗಳನ್ನು ಸಹ ಕೈಗೊಳ್ಳಲಾಗುತ್ತಿದೆ.
ಆ)	ಎಂ.ಬಿ.ಸಿ. ವಿತರಣಾ ಕಾಲುವೆಗಳಲ್ಲಿ ಒಟ್ಟಾರೆ 57.39 ಕಿ.ಮೀ. ಕಾಮಗಾರಿ ಬಾಕಿ ಉಳಿದಿದ್ದು, ಸದರಿ ಕಾಮಗಾರಿಗಳನ್ನು ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	
ಇ)	ಎಂ.ಬಿ.ಸಿ. ಸೀಳು ಕಾಲುವೆ ಹಾಗೂ ಉಪ ಸೀಳು ಕಾಲುವೆಗಳ ಬಾಕಿ ಕಾಮಗಾರಿ ಉದ್ದ 197.81 ಕಿ.ಮೀ. ಇದ್ದು ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರವು ಒದಗಿಸಿದ ಅನುದಾನವೆಷ್ಟು;	
ಈ)	ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಎಷ್ಟು ಕಾಲವಕಾಶ ಅವಶ್ಯವಿದೆ? (ಮಾಹಿತಿ ನೀಡುವುದು)	

ಸಂಖ್ಯೆ: ಜಸಂಇ 04 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 15 ಎನ್ಎಲ್ಎ 20

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 10-03-20

16
C/S
10/3/20

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್ತು~~,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ. ಅಪ್ಪಚ್ಚು (ರಂಜನ್) ಎಂ. ಪಿ.ರವರ ಚುಕ್ಕೆ ~~ಗುರುತಿನ~~ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 27 ಕ್ಕೆ ಉತ್ತರಗಳನ್ನು ಸಲ್ಲಿಸುವ ಬಗ್ಗೆ.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ. ಅಪ್ಪಚ್ಚು (ರಂಜನ್) ಎಂ. ಪಿ. ರವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 27 ಕ್ಕೆ ಜಲಸಂಪನ್ಮೂಲ ಇಲಾಖೆಯು ನೀಡಿರುವ ಉತ್ತರದ 100 ಪ್ರತಿಗಳನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

(ಸಹಿ)
ಶಾಖಾಧಿಕಾರಿ (ಪ್ರ)
ಜಲಸಂಪನ್ಮೂಲ ಇಲಾಖೆ (ಎಂಎಂಐ-2)

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ
4. ಸರ್ಕಾರದ ಅಧೀನ ಕಾರ್ಯದರ್ಶಿಗಳು (ಎಂಎಂಐ-2), ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 27
2. ಸದಸ್ಯರ ಹೆಸರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ
3. ಉತ್ತರಿಸಬೇಕಾದ ದಿನಾಂಕ : 10-03-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	2018ರಲ್ಲಿ ಕೊಡಗು ಜಿಲ್ಲೆಯಲ್ಲಿ ಉಂಟಾದ ಜಲಪ್ರಳಯ ಸಂದರ್ಭದಲ್ಲಿ ಬೆಟ್ಟಗುಡ್ಡಗಳು ಕುಸಿದ ಪರಿಣಾಮ ಅಲ್ಲಿನ ಮರಗಳು, ಮಣ್ಣು ಇತ್ಯಾದಿ ಹಾರಂಗಿ ಹಿನ್ನೀರಿನಲ್ಲಿ, ಮಾದಾಪುರ ಹಟ್ಟಿಹೊಳೆ ಹಾಗೂ ಕಾವೇರಿ ಹೊಳೆಯಲ್ಲಿ ಶೇಖರಣೆಯಾಗಿ ನೀರು ಸರಾಗವಾಗಿ ಹರಿಯದೆ ಇರುವುದರ ಜೊತೆಗೆ 2019ರಲ್ಲಿ ಬಿದ್ದ ಮಳೆಯಿಂದಾಗಿ ಕುಶಾಲನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಮುಳುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	2018 ರಲ್ಲಿ ಜಲಪ್ರಳಯದಿಂದ ನದಿಯ ನೀರು ಸರಾಗವಾಗಿ ಹರಿಯದೇ, ನದಿಯ ಹರಿವಿನ ಪಥ ಬದಲಾವಣೆಯಾಗಿದೆ. 2019ರಲ್ಲಿ ಬಿದ್ದ ಮಳೆಯಿಂದಾಗಿ ಕುಶಾಲನಗರ ಸುತ್ತಮುತ್ತಲಿನ ಸಾಯಿ ಲೇಔಟ್, ಭಾಗಶ: ಮುಳ್ಳುಸೋಗೆ, ಕುವೆಂಪು ಬಡಾವಣೆ, ಇಂದಿರಾ ಬಡಾವಣೆ, ದಂಡಿನ ಪೇಟೆ, ಬೈಚನಹಳ್ಳಿ, ಕೊಪ್ಪ, ಹುದಗೂರು, ಭಾಗಶ: ಕೂಡಿಗೆ, ಕೂಡು ಮಂಗಳೂರು ಕಾಲೋನಿ, ಕಣಿವೆ, ಕೈಗಾರಿಕಾ ಬಡಾವಣೆ, ಕೂಡು ಮಂಗಳೂರು, ಗಂಧದಕೊಪ್ಪಲು ಪ್ರದೇಶಗಳು ಮುಳುಗಡೆಯಾಗಿರುವುದು ಗಮನಕ್ಕೆ ಬಂದಿದೆ.
ಆ	ಸದರಿ ಮೇಲ್ಕಾಣಿಸಿದ ಹೊಳೆಗಳಲ್ಲಿ ತುಂಬಿರುವ ಹೂಳು ತೆಗೆಯಲು ಈ ಹಿಂದಿನ ಆಯವ್ಯಯದಲ್ಲಿ 1000 ಲಕ್ಷ ರೂ.ಗಳ ಅನುದಾನವನ್ನು ಕಾಯ್ದಿರಿಸಿದ್ದು, ಅಂದಾಜುಪಟ್ಟಿ ತಯಾರಿಸಿದ ಸಂದರ್ಭದಲ್ಲಿ ಸದರಿ ಮೊತ್ತವು 130 ಕೋಟಿ ರೂ.ಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	2019-20ನೇ ಸಾಲಿನ ಆಯವ್ಯಯದಲ್ಲಿ ರೂ.75.00 ಕೋಟಿ ವೆಚ್ಚದಲ್ಲಿ ಹಾರಂಗಿ ಜಲಾನಯನ ಪ್ರದೇಶ ಹಾಗೂ ನದಿ ಪಾತ್ರದ ಪುನಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲಾಗುವುದೆಂದು ಘೋಷಿಸಲಾಗಿದೆ. ಸದರಿ ಕಾಮಗಾರಿಗಳಿಗೆ ರೂ.130.00 ಕೋಟಿಗಳಿಗೆ ವಾಸ್ತವ ಅಂದಾಜನ್ನು ತಯಾರಿಸಲಾಗಿದೆ.
ಇ	ಈ ಸಂಬಂಧ ಸರ್ಕಾರ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ ;	ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಹಿತದೃಷ್ಟಿಯಿಂದ ಪ್ರಸಕ್ತ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ 1/3rd ಅನುದಾನದಂತೆ ರೂ.44.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.
ಈ	ಜಿಲ್ಲೆಯಲ್ಲಿ ಕಡಿಮೆ ಮಳೆಯಾದರೂ ಸಹ ಜಲಪ್ರಳಯವಾಗುತ್ತಿದ್ದು, ಮುಂಬರುವ ಮಳೆಗಾಲದಲ್ಲಿ ಮತ್ತೆ ಜಲಪ್ರಳಯವಾಗುವ ಭೀತಿ ಹೆಚ್ಚಿ, ರೈತರಿಗೆ ತೊಂದರೆಯಾಗುತ್ತಿರುವ ಕುರಿತಾಗಿ ಸರ್ಕಾರ ಕೈಗೊಂಡ ಕ್ರಮವೇನು; ಇದಕ್ಕಾಗಿ ಮೀಸಲಿಟ್ಟ ಅನುದಾನದ ಮೊತ್ತವೆಷ್ಟು ;	ತಂತ್ರಜ್ಞರೊಂದಿಗೆ ವಿಷದವಾಗಿ ಚರ್ಚಿಸಿ ತೀವ್ರತರವಾಗಿ ಹಾನಿಗೊಳಗಾದ ಹಲವಾರು ಪ್ರದೇಶಗಳನ್ನು ಪರಿಶೀಲಿಸಿ, ವಿನ್ಯಾಸಗಳಿಗೆ ಅನುಗುಣವಾಗಿ ರೂ.130.00 ಕೋಟಿಗಳ ಅಂದಾಜು ಪಟ್ಟಿಯನ್ನು ಕಾವೇರಿ ನೀರಾವರಿ ನಿಗಮದಿಂದ ತಯಾರಿಸಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿಗಮದ ಕಾರ್ಯಕ್ರಮದ ಕಾರ್ಯಭಾರ ಅಧಿಕವಾಗಿರುವುದರಿಂದ ಸದರಿ ಕಾಮಗಾರಿಗಳನ್ನು 2020-21 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಆದ್ಯತೆಯ ಮೇಲೆ ಅಗತ್ಯ ಅನುದಾನದೊಂದಿಗೆ ಕೈಗೊಳ್ಳಲು ಕ್ರಮವಹಿಸಲಾಗುವುದು.

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಉ	ಸೋಮವಾರಪೇಟೆ ಕೊಡ್ಲಿ ಪೇಟೆ ಹೋಬಳಿಯಲ್ಲಿ ಹೇಮಾವತಿ ಹಿನ್ನೀರಿನಿಂದ ಭೂಮಿ ಕಳೆದುಕೊಂಡ ರೈತರು ಹೆಚ್ಚು ವಾಸಿಸುತ್ತಿದ್ದು, ಇವರುಗಳು ಮೂಲಭೂತ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಮೂಲಭೂತ ಸೌಕರ್ಯವನ್ನು ಯಾವಾಗ ಕಲ್ಪಿಸಲಾಗುವುದು ;	ಹೌದು. ಮೂಲಭೂತ ಸೌಕರ್ಯಗಳಾದ ರಸ್ತೆ ಮತ್ತು ಚರಂಡಿ ನಿರ್ಮಾಣ, ಸಮುದಾಯ ಭವನ, ಧಾರ್ಮಿಕ ಪೂಜಾ ಕೇಂದ್ರಗಳ ನಿರ್ಮಾಣ ಹಾಗೂ ಇನ್ನಿತರೆ ಅವಶ್ಯಕ ಕಾಮಗಾರಿಗಳನ್ನು 2010-11ನೇ ಸಾಲಿನಿಂದಲೇ ಕಲ್ಪಿಸಲಾಗುತ್ತಿದ್ದು, 2018-19ನೇ ಸಾಲಿನವರೆಗೆ ರೂ.83.45 ಕೋಟಿಗಳ ವೆಚ್ಚವಾಗಿದೆ. ಪ್ರಸಕ್ತ ಸಾಲಿನಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಒಟ್ಟಾರೆಯಾಗಿ ರೂ.34.53 ಕೋಟಿಗಳಿಗೆ ಅನುಮೋದನೆ ನೀಡಲಾಗಿದ್ದು, ಅದರಲ್ಲಿ ರೂ.16.53 ಕೋಟಿಗಳ ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿವೆ. ಉಳಿದ ರೂ.18.00 ಕೋಟಿ ಮೊತ್ತದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.
ಊ	ಆ ಪ್ರದೇಶದಲ್ಲಿ ಹಿನ್ನೀರಿನಿಂದ ಮುಳುಗಡೆಯಾಗಿರುವ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸರ್ಕಾರ ವಿಶೇಷ ಅನುದಾನ ನೀಡಲು ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)	25 ಗ್ರಾಮಗಳು ಹೇಮಾವತಿ ಹಿನ್ನೀರಿನ ಅಂಚಿನ ಗ್ರಾಮಗಳಾಗಿದ್ದು, ಯಾವುದೇ ದೇವಸ್ಥಾನಗಳು ಮುಳುಗಡೆಯಾಗಿರುವುದಿಲ್ಲ.

ಸಂಖ್ಯೆ:ಜಸಂಇ 15 ಎಲ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 12 ಏನ್‌ಏಲ್‌ಏ 20

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 10-03-20

ಇಂದ:

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್ತು~~,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ. ಅನಿಲ್ ಚಿಕ್ಕಮಾದು ರವರ ಚುಕ್ಕೆ ~~ಗುರುತಿನ~~ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1122ಕ್ಕೆ ಉತ್ತರಗಳನ್ನು ಸಲ್ಲಿಸುವ ಬಗ್ಗೆ.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ. ಅನಿಲ್ ಚಿಕ್ಕಮಾದು ರವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1122ಕ್ಕೆ ಜಲಸಂಪನ್ಮೂಲ ಇಲಾಖೆಯು ನೀಡಿರುವ ಉತ್ತರದ 100 ಪ್ರತಿಗಳನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

ಉಮಾರಾಣಿ.ಬಿ
ಶಾಖಾಧಿಕಾರಿ (ಪ್ರ)
ಜಲಸಂಪನ್ಮೂಲ ಇಲಾಖೆ (ಎಂಎಂಐ-2)

ಪ್ರತಿಯನ್ನು, ಮಾಹಿತಿಗಾಗಿ:

1. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ
4. ಸರ್ಕಾರದ ಅಧೀನ ಕಾರ್ಯದರ್ಶಿ ([illegible]-2), ಜಲಸಂಪನ್ಮೂಲ ಇಲಾಖೆ

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1122
2. ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು
3. ಉತ್ತರಿಸಬೇಕಾದ ದಿನಾಂಕ : 10-03-2020
4. ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಹೆಗ್ಗಡದೇವನಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ಮುಂದಿನ ಸೇತುವೆ ನಿರ್ಮಾಣ ಹಾಗೂ ಜಲಾಶಯದ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಪ್ರಸ್ತಾವನೆಯು ಕಾವೇರಿ ನೀರಾವರಿ ನಿಗಮದಿಂದ ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ ; ಹಾಗಿದ್ದಲ್ಲಿ, ಪ್ರಸ್ತುತ ಯಾವ ಹಂತದಲ್ಲಿದೆ ; (ಯೋಜನೆಗಳ ಸಂಪೂರ್ಣ ವಿವರ ನೀಡುವುದು)	ಕಬಿನಿ ಅಣೆಕಟ್ಟೆಯ ಕೆಳಭಾಗದಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಸೇತುವೆಯನ್ನು ನಿರ್ಮಾಣ ಮಾಡುವ ರೂ.25.00 ಕೋಟಿ ಮೊತ್ತದ ಕಾಮಗಾರಿಯ ಮತ್ತು ಜಲಾಶಯದ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗಳ ರೂ.25.30 ಕೋಟಿ ಮೊತ್ತದ ಪ್ರಸ್ತಾವನೆಗಳನ್ನು ಟಿ.ಎಸ್.ಪಿ. ಅಡಿಯಲ್ಲಿ ತೆಗೆದುಕೊಳ್ಳಲು ಸಮಾಜ ಕಲ್ಯಾಣ ಇಲಾಖೆಯ ಅನುಮೋದನೆ ಕೋರಲಾಗಿದ್ದು, ಪರಿಶೀಲನೆಯಲ್ಲಿದೆ.
ಆ	ಮಾನ್ಯ ಮುಖ್ಯ ಮಂತ್ರಿಯವರು ಕಬಿನಿ ಜಲಾಶಯಕ್ಕೆ ಬಾಗಿನ ಸಮರ್ಪಣಾ ಕಾರ್ಯಕ್ರಮಕ್ಕೆ ಆಗಮಿಸಿದ ಸಂದರ್ಭದಲ್ಲಿ ಸದರಿ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸುವಂತೆ ನಿರ್ದೇಶನ ನೀಡಿದ್ದರೂ ಸಹ ಈವರೆವಿಗೂ ಕಾಮಗಾರಿ ಕೈಗೆತ್ತಿಕೊಳ್ಳದಿರಲು ಕಾರಣಗಳೇನು ; (ವಿವರ ನೀಡುವುದು)	
ಇ	ಸದರಿ ಕಾಮಗಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಂತ ಪ್ರಾಮುಖ್ಯವಾಗಿದ್ದು, ಸುಮಾರು 54 ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಹಾಗೂ ಸೇತುವೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	
ಈ	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು (ವಿವರ ನೀಡುವುದು)	

ಸಂಖ್ಯೆ:ಜಸಂಇ 12 ಎನ್‌ಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1122 ಕ್ಕೆ ಅನುಬಂಧ

1. **ಕಬಿನಿ ಅಣೆಕಟ್ಟೆಯ ಕೆಳಭಾಗದಲ್ಲಿ ಕಬಿನಿ ನದಿಗೆ ಅಡ್ಡಲಾಗಿ ಸೇತುವೆಯನ್ನು ನಿರ್ಮಾಣ ಮಾಡುವ ಕಾಮಗಾರಿ**

ಕಬಿನಿ ಅಣೆಕಟ್ಟನ್ನು ಹೆಚ್.ಡಿ ಕೋಟೆ ತಾಲ್ಲೂಕಿನ ಬೀಚನಹಳ್ಳಿ ಗ್ರಾಮದ ಬಳಿ 1974 ರಲ್ಲಿ ನಿರ್ಮಿಸಲಾಗಿದ್ದು, ಸದರಿ ಅಣೆಕಟ್ಟೆಯ ಕೆಳಭಾಗದಲ್ಲಿ ಒಂದು ಕೆಳ ಮಟ್ಟದ ಸೇತುವೆ ಇದ್ದು ಇದು ಅಣೆಕಟ್ಟೆಯ ಬಲಭಾಗದಲ್ಲಿ ಬರುವ ಬೀಚನಹಳ್ಳಿ, ಕೆಂಚನಹಳ್ಳಿ ಮತ್ತು ಎನ್.ಬೇಗೂರು ಗ್ರಾಮ ಪಂಚಾಯಿಗಳ ವ್ಯಾಪ್ತಿಗೆ ಬರುವ 25 ಗ್ರಾಮಗಳಿಗೆ ಹೆಚ್.ಡಿ.ಕೋಟೆ ತಾಲ್ಲೂಕು ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ಮಾರ್ಗವಾಗಿರುತ್ತದೆ. ಕಬಿನಿ ಜಲಾಶಯದಿಂದ 16,000 ಕ್ಯೂಸೆಕ್ಸ್‌ಗೂ ಹೆಚ್ಚು ನೀರನ್ನು ನದಿಯಲ್ಲಿ ಹರಿಸಿದ ಸಮಯದಲ್ಲಿ ಕೆಳಭಾಗದ ಸೇತುವೆಯು ಮುಳುಗಡೆಯಾಗಿ ಎರಡು ಬದಿಯ ಸಂಪರ್ಕ ಕಡಿತಗೊಳ್ಳುತ್ತದೆ.

ದಿನಾಂಕ 07.09.2019 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಕಬಿನಿ ಜಲಾಶಯಕ್ಕೆ ಭಾಗಿನ ಅರ್ಪಿಸುವ ಸಂದರ್ಭದಲ್ಲಿ ಸೇತುವೆ ನಿರ್ಮಾಣದ ಅವಶ್ಯಕತೆ ಬಗ್ಗೆ ಅವಲೋಕಿಸಿ ಸೇತುವೆ ನಿರ್ಮಾಣದ ಪ್ರಸ್ತಾವನೆಯನ್ನು ತುರ್ತಾಗಿ ಸಲ್ಲಿಸುವಂತೆ ಸೂಚಿಸಿರುತ್ತಾರೆ.

ಅದರಂತೆ, ಮುಖ್ಯ ಇಂಜಿನಿಯರ್ ರವರು ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು 2018-19ನೇ ಸಾಲಿನ ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ದರಪಟ್ಟಿಯಂತೆ ರೂ.25.00 ಕೋಟಿ ಮೊತ್ತಕ್ಕೆ ತಯಾರಿಸಿದ್ದು, ಕಾಮಗಾರಿಯ ವಿವರ ಕೆಳಕಂಡಂತೆ ಇರುತ್ತದೆ :

- ✓ Bridge location - 550 m Down Stream of Kabini Dam
- ✓ 3 Span bowstring girder bridge (2 Span of 36M + 1 Span of 82M)

Sl. No.	Particulars	Proposed Bridge details
1	Type of Bridge	Steel composite BOW string girder bridge
2	Type of crossing	Square crossing
3	Length of Bridge	154M
4	Span details	2 Span of 36M + 1 Span of 82M
5	Type of structure	RCC & Steel
6	Nature of Bridge	High level Bridge
7	Carriage way	7.5 M
8	Condition of Parapet and protection works & Footpath	RCC crash barrier provided and protection works provided. Footpath provided on either side

ಹೆಚ್.ಡಿ.ಕೋಟೆ ತಾಲ್ಲೂಕು ವಿಧಾನಸಭಾ ಕ್ಷೇತ್ರವು ಅನುಸೂಚಿತ ಪಂಗಡ (ಎಸ್.ಟಿ) ಕ್ಕೆ ಮೀಸಲಾಗಿದ್ದು, ಹೆಚ್.ಡಿ.ಕೋಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಶೇ.60 ಕ್ಕಿಂತಲೂ ಹೆಚ್ಚಾಗಿ ವಾಸವಾಗಿರುತ್ತಾರೆ ಮತ್ತು ಪ್ರಸ್ತಾಪಿತ ಸೇತುವೆಯನ್ನು ಅವಲಂಬಿಸಿರುವ 25 ಫಲಾನುಭಾವಿ ಗ್ರಾಮಗಳಲ್ಲಿ ಒಟ್ಟು 14,345 ಜನಸಂಖ್ಯೆ ಇದ್ದು, ಈ ಪೈಕಿ ಶೇಕಡ 68.50 ರಷ್ಟು ಅಂದರೆ

9,357 ಜನರು ಪರಿಶಿಷ್ಟ ಪಂಗಡ ಜನಾಂಗದವರಾಗಿರುತ್ತಾರೆ. ಆದ್ದರಿಂದ ಸದರಿ ಕಾಮಗಾರಿಯನ್ನು ಟಿ.ಎಸ್.ಪಿ ಯೋಜನೆಯ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

2. **Providing Cement Concrete to the Approach road of Kabini dam (from Kollegowdanahally circle to Bidarahally circle)** ಕಾಮಗಾರಿ

ಹೆಚ್.ಡಿ.ಕೋಟೆ ತಾಲ್ಲೂಕಿನ ಕೇಂದ್ರ ಸ್ಥಾನದಿಂದ ಕಬಿನಿ ಜಲಾಶಯಕ್ಕೆ ತಲುಪಲು ಕೊಲ್ಲೇಗೌಡನಹಳ್ಳಿ ವೃತ್ತದಿಂದ ಬಿದರಹಳ್ಳಿ ವೃತ್ತದ ಮಾರ್ಗವಾಗಿ ಸಂಚರಿಸಬೇಕಾಗಿದ್ದು, ಇದು 10.50 ಕಿ.ಮೀ ಉದ್ದವಿರುತ್ತದೆ. ಸದರಿ ರಸ್ತೆಯು ಹಲವಾರು ಗ್ರಾಮ ಪಂಚಾಯ್ತಿಗಳಿಗೆ, ಹೋಬಳಿಗೆ, ತಾಲ್ಲೂಕು ಮತ್ತು ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿದ್ದು, ಹೆಚ್ಚಿನ ಪ್ರಾಮಣ ಗುಂಡಿಗಳಿಂದ ಕೂಡಿದ್ದು ಹಾನಿಯಾಗಿರುತ್ತದೆ. ಇದರಿಂದ ಗ್ರಾಮಸ್ಥರು, ರೈತರು ತಮ್ಮ ಜಮೀನುಗಳಿಗೆ ಕೃಷಿ ಚಟುವಟಿಕೆಗಳಿಗೆ, ಮೇಲಧಿಕಾರಿಗಳು ಕಬಿನಿ ಜಲಾಶಯದ ಪರಿವೀಕ್ಷಣೆಯನ್ನು ನಡೆಸಲು ಅಡಚಣೆಯುಂಟಾಗುತ್ತಿರುತ್ತದೆ. ಸದರಿ ರಸ್ತೆಯನ್ನು ಸುಮಾರು 15 ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿದ್ದು, ಪ್ರಸ್ತುತ ರಸ್ತೆಯು ತೀರಾ ಹದಗೆಟ್ಟಿರುತ್ತದೆ ಹಾಗೂ ರಸ್ತೆಯಲ್ಲಿ ಸಂಚರಿಸಲು ತುಂಬಾ ತೊಂದರೆಯಾಗಿರುತ್ತದೆ. ಹೆಚ್.ಡಿ.ಕೋಟೆ ತಾಲ್ಲೂಕು ಮಲೆನಾಡು ಪ್ರದೇಶವಾಗಿದ್ದು, ಮಳೆಯ ಪ್ರಮಾಣ ಹೆಚ್ಚಾಗಿರುವುದರಿಂದ ಹಾಲಿ ಇರುವ ರಸ್ತೆಯು ತುಂಬಾ ಹದಗೆಟ್ಟಿರುತ್ತದೆ.

ದಿನಾಂಕ 07.09.2019 ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಕಬಿನಿ ಜಲಾಶಯಕ್ಕೆ ಭಾಗಿನ ಅರ್ಪಿಸುವ ಸಂದರ್ಭದಲ್ಲಿ ಸದರಿ ರಸ್ತೆಯನ್ನು ಸರ್ವಋತು ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಸೂಚಿಸಿರುತ್ತಾರೆ.

ಅದರಂತೆ, ಮುಖ್ಯ ಇಂಜಿನಿಯರ್ ರವರು ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು 2018-19ನೇ ಸಾಲಿನ ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ದರಪಟ್ಟಿಯ ಅನ್ವಯರೂ.25.30 ಕೋಟಿಗಳಿಗೆ ತಯಾರಿಸಿರುತ್ತಾರೆ.

ಹೆಚ್.ಡಿ.ಕೋಟೆ ತಾಲ್ಲೂಕು ವಿಧಾನಸಭಾ ಕ್ಷೇತ್ರವು ಅನುಸೂಚಿತ ಪಂಗಡ (ಎಸ್.ಟಿ) ಕ್ಕೆ ಮೀಸಲಾಗಿದ್ದು, ಹೆಚ್.ಡಿ.ಕೋಟೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಶೇ.60 ಕ್ಕಿಂತಲೂ ಹೆಚ್ಚಾಗಿ ವಾಸವಾಗಿರುತ್ತಾರೆ ಮತ್ತು ಪ್ರಸ್ತಾಪಿತ ಸೇತುವೆಯನ್ನು ಅವಲಂಭಿಸಿರುವ 25 ಫಲಾನುಭಾವಿ ಗ್ರಾಮಗಳಲ್ಲಿ ಒಟ್ಟು 14,345 ಜನಸಂಖ್ಯೆ ಇದ್ದು, ಈ ಪೈಕಿ ಶೇಕಡ 68.50 ರಷ್ಟು ಅಂದರೆ 9,357 ಜನರು ಪರಿಶಿಷ್ಟ ಪಂಗಡ ಜನಾಂಗದವರಾಗಿರುತ್ತಾರೆ. ಆದ್ದರಿಂದ ಸದರಿ ಕಾಮಗಾರಿಯನ್ನು ಟಿ.ಎಸ್.ಪಿ ಯೋಜನೆಯ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

****

ಕರ್ನಾಟಕ ಸರ್ಕಾರ

ಸಂಖ್ಯೆ: ಸನೀಇ 32 LAQ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, 2ನೇ ಮಹಡಿ,
ಬೆಂಗಳೂರು, ದಿನಾಂಕ:09.03.2020

148
U/S
10/03/2020

ಇವರಿಂದ

ಸರ್ಕಾರದ ಕಾರ್ಯದರ್ಶಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ವಿಕಾಸ ಸೌಧ, ಬೆಂಗಳೂರು

ಇವರಿಗೆ

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಶ್ರೀ ಶಿವಲಿಂಗೇಗೌಡ ಕೆ.ಎಂ., ಮಾನ್ಯ ವಿಧಾನ ಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1043ಕ್ಕೆ ಉತ್ತರಿಸುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಶ್ರೀ ಶಿವಲಿಂಗೇಗೌಡ ಕೆ.ಎಂ., ಮಾನ್ಯ ವಿಧಾನ ಸಭೆ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1043ರ ಉತ್ತರದ 120 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ಆದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಎಂ.ಎಸ್. [illegible])
ಸರ್ಕಾರದ ಅಧೀನ ಕಾರ್ಯದರ್ಶಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1043
2.	ಸದಸ್ಯರ ಹೆಸರು	: ಶ್ರೀ.ಶಿವಲಿಂಗೇಗೌಡ ಕೆ.ಎಂ.
3.	ಉತ್ತರಿಸಬೇಕಾದ ದಿನಾಂಕ	: 10.03.2020
4.	ಉತ್ತರಿಸುವ ಸಚಿವರು	: ಮಾನ್ಯ ಸಣ್ಣ ನೀರಾವರಿ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಅಟಲ್ ಜೀ ಭೂಜಲ ಯೋಜನೆ ಜಾರಿಗೆ ಬಂದಿದೆಯೇ?</td><td>ಅಟಲ್ ಭೂಜಲ್ ಯೋಜನೆಯು ದಿನಾಂಕ:01.04.2020ರಿಂದ ಜಾರಿಗೆ ಬರಲಿದ್ದು, 5 ವರ್ಷಗಳ ಕಾಲಾವಧಿಯನ್ನು ಹೊಂದಿರುತ್ತದೆ.</td></tr>
<tr><td>ಆ</td><td>ಹಾಗಿದ್ದಲ್ಲಿ ಈ ಯೋಜನೆಯಲ್ಲಿ ಪ್ರದೇಶಗಳ ಆಯ್ಕೆಗೆ ಇರುವ ಮಾನದಂಡಗಳೇನು (ವಿವರ ನೀಡುವುದು)</td><td>ಅಟಲ್ ಭೂಜಲ್ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ವಿವಿಧ ರಾಜ್ಯಗಳಲ್ಲಿ ನೀರಿನ ಶೋಷಿತ ಪ್ರದೇಶಗಳಲ್ಲಿ ಅಂತರ್ಜಲ ನೀರಿನ ಬೇಡಿಕೆ ಹಾಗೂ ಸರಬರಾಜು ನಿರ್ವಹಣೆಗೆ ಸಮುದಾಯ ಸಹಭಾಗಿತ್ವದಲ್ಲಿ ಒತ್ತು ನೀಡಲು ಕೇಂದ್ರ ಸರ್ಕಾರವು ಗುರುತಿಸಿರುವ 7 ರಾಜ್ಯಗಳ 78 ಜಿಲ್ಲೆಗಳಲ್ಲಿ 8353 ಗ್ರಾಮ ಪಂಚಾಯತ್ ಪ್ರದೇಶಗಳ ವ್ಯಾಪ್ತಿಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರೂಪಿಸಲಾಗಿರುತ್ತದೆ.
ಕೇಂದ್ರ ಸರ್ಕಾರವು ಗುರುತಿಸಿರುವ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವು ಒಂದಾಗಿದ್ದು, ಕರ್ನಾಟಕ ರಾಜ್ಯದ 14 ಜಿಲ್ಲೆಗಳ, 41 ತಾಲ್ಲೂಕುಗಳ 1199 ಗ್ರಾಮ ಪಂಚಾಯತಿ ಪ್ರದೇಶಗಳು ಯೋಜನೆಯ ವ್ಯಾಪ್ತಿಗೆ ಒಳಪಡುತ್ತವೆ.</td></tr>
<tr><td>ಇ</td><td>ಅರಸೀಕೆರೆ ಕ್ಷೇತ್ರವು ಈ ಯೋಜನೆಯ ವ್ಯಾಪ್ತಿಗೆ ಬರುತ್ತದೆಯೇ: ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ಕ್ಷೇತ್ರಗಳಾವುವು.</td><td>ಅರಸೀಕೆರೆ ಕ್ಷೇತ್ರವು ಯೋಜನೆಯ ವ್ಯಾಪ್ತಿಗೆ ಬರುತ್ತದೆ.
ಈ ಯೋಜನೆಯ ವ್ಯಾಪ್ತಿಗೆ ಬರುವ ರಾಜ್ಯದ ಇತರೆ ಕ್ಷೇತ್ರದ ವಿವರಗಳು ಕೆಳಕಂಡಂತಿವೆ.
<table>
<tr><th>ಕ್ರ ಸಂ.</th><th>ಜಿಲ್ಲೆ</th><th>ಕ್ಷೇತ್ರ / ತಾಲ್ಲೂಕು</th></tr>
<tr><td>1.</td><td>ಕೋಲಾರ</td><td>ಶ್ರೀನಿವಾಸಪುರ, ಕೋಲಾರ, ಮಾಲೂರು, ಮುಳಬಾಗಿಲು ಮತ್ತು ಬಂಗಾರಪೇಟೆ.</td></tr>
<tr><td>2.</td><td>ಚಿಕ್ಕಬಳ್ಳಾಪುರ</td><td>ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಗುಡಿಬಂಡೆ ಮತ್ತು ಬಾಗೇಪಲ್ಲಿ</td></tr>
<tr><td>3.</td><td>ತುಮಕೂರು</td><td>ಚಿಕ್ಕನಾಯಕನಹಳ್ಳಿ, ಮಧುಗಿರಿ, ಕೊರಟಗೆರೆ, ತಿಪಟೂರು, ಶಿರಾ ಮತ್ತು ತುಮಕೂರು.</td></tr>
<tr><td>4.</td><td>ಬೆಂಗಳೂರು ಗ್ರಾಮಾಂತರ</td><td>ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ</td></tr>
</table></td></tr>
</table>

		5.	ರಾಮನಗರ	ಕನಕಪುರ ಮತ್ತು ರಾಮನಗರ
		6.	ಚಿಕ್ಕಮಗಳೂರು	ಕಡೂರು
		7.	ಚಿತ್ರದುರ್ಗ	ಚಳ್ಳಕೆರೆ, ಹೊಳಲ್ಕೆರೆ, ಹಿರಿಯೂರು ಮತ್ತು ಚಿತ್ರದುರ್ಗ
		8.	ದಾವಣಗೆರೆ	ಜಗಳೂರು, ಹರಪನಹಳ್ಳಿ ಮತ್ತು ಚನ್ನಗಿರಿ
		9.	ಬಳ್ಳಾರಿ	ಹಗರಿಬೊಮ್ಮನಹಳ್ಳಿ
		10.	ಬಾಗಲಕೋಟೆ	ಬಾದಾಮಿ ಮತ್ತು ಬಾಗಲಕೋಟೆ
		11.	ಗದಗ	ಗದಗ ಮತ್ತು ರೋಣ
		12.	ಬೆಳಗಾವಿ	ರಾಮದುರ್ಗ ಮತ್ತು ಅಥಣಿ
		13.	ಚಾಮರಾಜನಗರ	ಗುಂಡ್ಲುಪೇಟೆ
		14.	ಹಾಸನ	ಅರಸೀಕೆರೆ

ಈ	ಈ ಯೋಜನೆಯ ರೂಪುರೇಷಗಳೇನು (ಮಾಹಿತಿ ನೀಡುವುದು)?	ಅಟಲ್ ಭೂಜಲ್ ಯೋಜನೆಯು ಭಾರತ ಸರ್ಕಾರದ ಕೇಂದ್ರ ವಲಯ ಯೋಜನೆಯಾಗಿದ್ದು, ನೀರಿನ ಶೋಷಿತ ಪ್ರದೇಶಗಳಲ್ಲಿ ಅಂತರ್ಜಲ ನೀರಿನ ಬೇಡಿಕೆ ಹಾಗೂ ಸರಬರಾಜು ನಿರ್ವಹಣೆಗೆ ಸಮುದಾಯ ಸಹಭಾಗಿತ್ವದಲ್ಲಿ ಒತ್ತು ನೀಡಲು ಕಾರ್ಯಕ್ರಮವನ್ನು ರೂಪಿಸಲಾಗಿರುತ್ತದೆ. ಈ ಯೋಜನೆಯು ಜಲಜೀವನ್ ಆಂದೋಲನದಲ್ಲಿ ನೀರಿನ ಮೂಲಗಳ ಸುಸ್ಥಿರ ಅಭಿವೃದ್ಧಿಯಲ್ಲಿ ಗಮನಾರ್ಹ ಸಕಾರಾತ್ಮಕ ಕೊಡುಗೆ ನೀಡಲಿದೆ ಹಾಗೂ ರೈತರ ಆದಾಯವು ಅಧಿಕಗೊಳ್ಳಲಿದ್ದು, ಮುಂಬರುವ ದಿನಗಳಲ್ಲಿ ಆಗುವ ಬದಲಾವಣೆಗಳಿಗೆ ಅನುಗುಣವಾಗಿ ಸಮುದಾಯಕ್ಕೆ ನೀರಿನ ಮಿತ ಬಳಕೆಯ ಬಗ್ಗೆ ಮಾಹಿತಿ ನೀಡಲಿದೆ. ಸದರಿ ಯೋಜನೆಯು ಅಂತರ್ಜಲ ಸಂಪನ್ಮೂಲಗಳ ಸಮಗ್ರ ನಿರ್ವಹಣೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಘಟನೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆ, ನೀರು ಬಳಕೆದಾರರ ಸಂಘ, ರೈತರು ಮತ್ತು ಇತರೆ ಪಾಲುದಾರರನ್ನು ಬಳಸಿಕೊಳ್ಳಲು ಉದ್ದೇಶಿಸಿದೆ. ದೃಢ ಸಂಘ ಸಂಸ್ಥೆಗಳ ನೆರವಿನಿಂದ ಸಮುದಾಯ ಭಾಗಿತ್ವದಡಿ ಬೇಡಿಕೆ ಮತ್ತು ವಿತರಣೆಗಳ ನಿರ್ವಹಣೆಯು ಸುಸ್ಥಿರ ಅಂತರ್ಜಲ ನಿರ್ವಹಣೆಯಲ್ಲಿ ಮುಖ್ಯ ಪಾತ್ರವಹಿಸಲಿದೆ. ಅಟಲ್ ಭೂಜಲ್ ಯೋಜನೆಯು ಕರ್ನಾಟಕ ರಾಜ್ಯ ಮತ್ತು ಇತರೆ ಗುರುತಿಸಲ್ಪಟ್ಟ ರಾಜ್ಯಗಳ ಅತಿ ಶೋಷಿತ ಕ್ಷೇತ್ರ/ತಾಲ್ಲೂಕುಗಳಲ್ಲಿ ಕೇಂದ್ರೀಕೃತಗೊಂಡಿದೆ. ಈ ಯೋಜನೆಯು 2 ಘಟಕಗಳನ್ನು ಒಳಗೊಂಡಿರುತ್ತದೆ. **ಅ) ಸಂಘ ಸಂಸ್ಥೆಗಳ ಬಲವರ್ಧನೆ ಮತ್ತು ಸಾಮರ್ಥ್ಯ ಹೆಚ್ಚಿಸುವುದು:** ಸಮುದಾಯಭಾಗಿತ್ವ, ವೈಜ್ಞಾನಿಕ ವಿಧಾನಗಳು ಮತ್ತು ಬಲವಾದ ದತ್ತಾಂಶಗಳೊಂದಿಗೆ ಅಂತರ್ಜಲ ಸಂಪನ್ಮೂಲಗಳನ್ನು ಸುಸ್ಥಿರ ನಿರ್ವಹಣೆಗಾಗಿ ಸಂಘ ಸಂಸ್ಥೆಗಳ ಬಲವರ್ಧನೆಗೊಳಿಸುವುದು. **ಆ) ಪ್ರೋತ್ಸಾಹ ಘಟಕ:** ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಒಗ್ಗೂಡಿಸುವಿಕೆ ಮತ್ತು ಪೂರ್ವಯೋಜಿತ ಕ್ರಮಗಳನ್ನು ಅನುಸರಿಸಿ ನೀರಿನ ಮಿತವ್ಯಯ ಸಾಧಿಸುವುದು ಮತ್ತು ಅದರಂತೆ ಅಂತರ್ಜಲ ಅಭಿವೃದ್ಧಿಯ ಸನ್ನಿವೇಶ ರೂಪಿಸುವುದು.

		ಪ್ರೋತ್ಸಾಹ ಧನವನ್ನು ವಿತರಿಸಲು ವಿತರಣೆ ಆಧಾರಿತ ಸೂಚಕಗಳ (Disbursed Linked Indicators DLI) ಅನುಸಾರ ಗುರುತಿಸಲಾಗುವುದು. ಇದಕ್ಕಾಗಿ ಗುರುತಿಸಲಾಗಿರುವ ಐದು ವಿತರಣೆ ಆಧಾರಿತ ಸೂಚಕಗಳು ಕೆಳಗಿನಂತಿವೆ: 1. ಅಂತರ್ಜಲ ದತ್ತಾಂಶ / ಮಾಹಿತಿ ಹಾಗೂ ವರದಿಗಳನ್ನು ಸಾರ್ವಜನಿಕರಿಗೆ ಬಹಿರಂಗಪಡಿಸುವುದು. 2. ಸಮುದಾಯ ನೇತೃತ್ವದಲ್ಲಿ ನೀರಿನ ಭದ್ರತಾ ಯೋಜನೆಯನ್ನು ರೂಪಿಸುವುದು. 3. ಪ್ರಗತಿಯಲ್ಲಿರುವ ಯೋಜನೆಗಳ ಒಗ್ಗೂಡಿಸಲು ಸಾರ್ವಜನಿಕರ ಹಣಕಾಸಿನ ನೆರವು ಪಡೆಯುವುದು. 4. ನೀರಿನ ಸಮರ್ಪಕ ಬಳಕೆಗಾಗಿ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು 5. ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ಅಭಿವೃದ್ಧಿ ಪಡಿಸುವುದು.– ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಮಟ್ಟದಲ್ಲಿ ಅಂತರ್ ಇಲಾಖಾ ಮಟ್ಟದ ಸ್ಟೀರಿಂಗ್ ಕಮಿಟಿ (ಎಸ್.ಎಲ್.ಐ.ಎಸ್.ಸಿ), ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ (ಎಸ್.ಪಿ.ಎಂ.ಯು) ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಅನುಷ್ಠಾನ ಘಟಕ (ಡಿ.ಪಿ.ಐ.ಯು)ಗಳನ್ನು ರಚಿಸಲಾಗಿದ್ದು, ಸಮಿತಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಕಡತ ಸಂಖ್ಯೆ: MID 32 LAQ 2020

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಶ್ರೀ ಶಿವಲಿಂಗೇಗೌಡ ಕೆ.ಎಂ., ಮಾನ್ಯ ವಿಧಾನ ಸಭೆ ಸದಸ್ಯರು, ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1043ಕ್ಕೆ ಅನುಬಂಧ

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಮಟ್ಟದಲ್ಲಿ ಅಂತರ್ ಇಲಾಖಾ ಮಟ್ಟದ ಸ್ಟೀರಿಂಗ್ ಕಮಿಟಿ (ಎಸ್.ಎಲ್.ಐ.ಎಸ್.ಸಿ), ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ (ಎಸ್.ಪಿ.ಎಂ.ಯು) ಮತ್ತು ಜಿಲ್ಲಾ ಮಟ್ಟದಲ್ಲಿ, ಜಿಲ್ಲಾ ಕಾರ್ಯಕ್ರಮ ಅನುಷ್ಠಾನ ಘಟಕ (ಡಿ.ಪಿ.ಐ.ಯು)ಗಳನ್ನು ಕೆಳಕಂಡಂತೆ ರಚಿಸಲಾಗಿದೆ.

State Level Inter-Departmental Steering Committee (SLISC)

1	ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ	ಅಧ್ಯಕ್ಷರು
2	ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯರು
3	ಪ್ರಧಾನ ಕಾರ್ಯದರ್ಶಿ, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ	ಸದಸ್ಯರು
4	ಪ್ರಧಾನ ಕಾರ್ಯದರ್ಶಿ, ಇಂಧನ ಇಲಾಖೆ	ಸದಸ್ಯರು
5	ಪ್ರಧಾನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ	ಸದಸ್ಯರು
6	ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ	ಸದಸ್ಯರು
7	ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ	ಸದಸ್ಯ ಕಾರ್ಯದರ್ಶಿ
8	ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ	ಸದಸ್ಯರು
9	ಕಾರ್ಯದರ್ಶಿ, ರೇಷ್ಮೆ ಇಲಾಖೆ	ಸದಸ್ಯರು
10	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	ಸದಸ್ಯರು
11	ನಿರ್ದೇಶಕರು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ	ಸದಸ್ಯರು
12	ನಿರ್ದೇಶಕರು, ಕೇಂದ್ರಿಯ ಅಂತರ್ಜಲ ಮಂಡಳಿ	ಸದಸ್ಯರು
13	ನಿರ್ದೇಶಕರು, ಅಂತರ್ಜಲ ನಿರ್ದೇಶನಾಲಯ, ಕರ್ನಾಟಕ ಸರ್ಕಾರ	ಸದಸ್ಯರು
14	ನಿರ್ದೇಶಕರು, – Advanced Centre for Integrated Water Resources Management (ACIWRM),	ಸದಸ್ಯರು

State Programme Management Unit (SPMU)

1	ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ	ಅಧ್ಯಕ್ಷರು
2	ನಿರ್ದೇಶಕರು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ	ಸದಸ್ಯರು
3	ನಿರ್ದೇಶಕರು, ಕೃಷಿ ಇಲಾಖೆ	ಸದಸ್ಯರು
4	ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ	ಸದಸ್ಯರು
5	ನಿರ್ದೇಶಕರು, ಕೇಂದ್ರಿಯ ಅಂತರ್ಜಲ ಮಂಡಳಿ	ಸದಸ್ಯರು
6	ನಿರ್ದೇಶಕರು, ಅಂತರ್ಜಲ ನಿರ್ದೇಶನಾಲಯ, ಕರ್ನಾಟಕ ಸರ್ಕಾರ	ಸದಸ್ಯ ಕಾರ್ಯದರ್ಶಿ
7	ನಿರ್ದೇಶಕರು, ತೋಟಗಾರಿಕೆ ಇಲಾಖೆ	ಸದಸ್ಯರು
8	ನಿರ್ದೇಶಕರು, ರೇಷ್ಮೆ ಇಲಾಖೆ	ಸದಸ್ಯರು
9	ನಿರ್ದೇಶಕರು, – Advanced Centre for Integrated Water Resources Management (ACIWRM),	ಸದಸ್ಯರು

10	ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ (ಉತ್ತರ)	ಸದಸ್ಯರು
11	ಪ್ರಧಾನ ಇಂಜಿನಿಯರ್/ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ (ದಕ್ಷಿಣ)	ಸದಸ್ಯರು
12	ಮುಖ್ಯ ಇಂಜಿನಿಯರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯರು
13	ಮುಖ್ಯ ಇಂಜಿನಿಯರ್, ಇಂದನ ಇಲಾಖೆ	ಸದಸ್ಯರು
14	ಮುಖ್ಯ ಇಂಜಿನಿಯರ್, ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ	ಸದಸ್ಯರು
15	ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ	ಸದಸ್ಯರು
16	Director, State Programme Management Unit (SPMU)	ಸದಸ್ಯರು

District Programme Implementation Unit (DPIU)

1.	ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ	ಅಧ್ಯಕ್ಷರು
2.	ಜಂಟಿ ನಿರ್ದೇಶಕರು, ಕೃಷಿ ಇಲಾಖೆ	ಸದಸ್ಯರು
3.	ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ	ಸದಸ್ಯರು
4.	ಉಪ ನಿರ್ದೇಶಕರು, ಜಲಸಾಯನ ಅಭಿವೃದ್ಧಿ ಇಲಾಖೆ	ಸದಸ್ಯರು
5.	ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ	ಸದಸ್ಯರು
6.	ಉಪನಿರ್ದೇಶಕರು, ರೇಷ್ಮೆ ಇಲಾಖೆ	ಸದಸ್ಯರು
7.	ಹಿರಿಯ ಭೂವಿಜ್ಞಾನಿ, ಅಂತರ್ಜಲ ನಿರ್ದೇಶನಾಲಯ, ಕರ್ನಾಟಕ ಸರ್ಕಾರ	ಸದಸ್ಯರು
8.	ಕಾರ್ಯಪಾಲಕ ಇಂಜಿನಿಯರ್, ಕೇಂದ್ರೀಯ ಅಂತರ್ಜಲ ಮಂಡಳಿ	ಸದಸ್ಯರು
9.	ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ	ಸದಸ್ಯರು
10.	ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯರು
11.	ಕಾರ್ಯಪಾಲಕ ಇಂಜಿನಿಯರ್, ಇಂಧನ ಇಲಾಖೆ	ಸದಸ್ಯರು
12.	ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	ಸದಸ್ಯರು
13.	ಕಾರ್ಯಪಾಲಕ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ	ಸದಸ್ಯರು
14.	ಸಹಾಯಕ ಯೋಜನಾ ಸಮನ್ವಯಾಧಿಕಾರಿ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

